# ಸಮೂಹ ಮಾಧ್ಯಮಗಳು ಮತ್ತು ಭಾಷೆ

ಎನ್. ಕೆ. ಪದ್ಮನಾಭ

ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ

ಜ್ಞಾನಸಹ್ಯಾದ್ರಿ, ಶಂಕರಘಟ್ಟ

# ಸಮೂಹ ಮಾಧ್ಯಮಗಳು ಮತ್ತು ಭಾಷೆ

## ಲೇಖಕರ ನುಡಿ

ಭಾಷೆಯು ಜನಬದುಕಿನೊಂದಿಗೆ ಕರುಳಬಳ್ಳಿಯ ಸಂಬಂಧ ಹೊಂದಿರುತ್ತದೆ. ವಿವಿಧ ಕಾಲಘಟ್ಟಗಳನ್ನು ಅವುಗಳ ಮೂಲಸ್ವರೂಪದೊಂದಿಗೆ ಗುರುತಿಸುವ ಸಂದರ್ಭದಲ್ಲಿ ಭಾಷೆಯ ಪಾತ್ರ ನಿರ್ಣಾಯಕವಾದದ್ದು. ಈ ದೃಷ್ಟಿಯಿಂದ ಭಾಷೆಯು ಆಯಾಕಾಲದ ಮೌಲಿಕ ಆಶಯಗಳ ಸಂವಾಹಕ ಶಕ್ತಿಯಾಗಿಯೂ ಕಾರ್ಯನಿರ್ವಹಿಸುತ್ತದೆ. ಜನಪರ ನಿಲುವುಗಳೊಂದಿಗೆ ಮಹತ್ವದ ಹೊಣೆಗಾರಿಕೆಗಳನ್ನು ನಿರ್ವಹಿಸುವ ಸಮೂಹ ಮಾಧ್ಯಮಗಳಂತೂ ಭಾಷಿಕ ನೆಲೆಗಟ್ಟಿನಲ್ಲಿಯೇ ವಿವಿಧ ಬಗೆಯ ಪ್ರಯೋಗಗಳನ್ನು ರೂಪಿಸಬೇಕಾಗುತ್ತದೆ. ಪುಸ್ತಕ, ದಿನಪತ್ರಿಕೆ, ಟೆಲಿವಿಷನ್, ರೇಡಿಯೋ, ಸಿನಿಮಾ ಸೇರಿದಂತೆ ವಿವಿಧ ಮಾಧ್ಯಮಗಳು ಭಾಷೆಯ ಅರ್ಥಸಾಧ್ಯತೆಗಳು ಮತ್ತು ಪ್ರಭಾವವನ್ನು ದೃಷ್ಟಿಯಲ್ಲಿರಿಸಿಕೊಂಡೇ ವಿವರ, ವಿಚಾರಗಳನ್ನು ಕಟ್ಟಿಕೊಡಬೇಕಾಗುತ್ತದೆ. ಜನರಿಗೆ ಆಪ್ತವೆನ್ನಿಸುವಂಥ ಭಾಷಾಶೈಲಿಯನ್ನೇ ನೆಚ್ಚಿಕೊಂಡು ಅವುಗಳು ಕಾರ್ಯೋನ್ಮುಖವಾಗಿರುತ್ತವೆ. ಇಂಥ ಸಂದರ್ಭದಲ್ಲಿ ಭಾಷೆಯೊಂದರ ಮೂಲಸೊಗಡಿಗೆ ಧಕ್ಕೆಯಾಗುವಂಥ ಅಥವಾ ಅಂಥದ್ದೊಂದು ವೈಶಿಷ್ಟ್ಯವನ್ನೇ ಹಿನ್ನೆಲೆಗೆ ಸರಿಸುವಂಥ ಭಾಷಿಕ ಪ್ರಯೋಗಗಳು ಅಪಾಯಕಾರಿ ಎಂದೆನಿಸುತ್ತವೆ. ಇಂದಿನ ಬಹುಮಾಧ್ಯಮ ಯುಗದಲ್ಲಿ ಭಾಷೆ ಮತ್ತು ಅದರೊಂದಿಗೇ ಇರುವ ಸಾಂಸ್ಕೃತಿಕ ವಿಶೇಷತೆಗಳ ನೆಲೆಯಲ್ಲಿಯೇ ಭಾಷಾ ಪ್ರಯೋಗ ನಡೆಯಬೇಕು. ಇಂಥದ್ದೊಂದು ಭಾಷಿಕ ಬದ್ಧತೆ ಮಾಧ್ಯಮಗಳದ್ದಾಗಬೇಕು. ಕುವೆಂಪು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ವಿಶೇಷ ಉಪನ್ಯಾಸ ಮಾಲಿಕೆ ಕಾರ್ಯಕ್ರಮವು ಸಮೂಹ ಮಾಧ್ಯಮಗಳು ಮತ್ತು ಭಾಷೆ ಕುರಿತ ನನ್ನ ನಿಲುವುಗಳನ್ನು ವ್ಯಕ್ತಪಡಿಸಲು ವೇದಿಕೆಯೊದಗಿಸಿತು. ಇದೀಗ ಈ ವಿಚಾರಗಳು ಕೃತಿರೂಪದಲ್ಲಿ ಹೊರಬರುತ್ತಿರುವುದು ಖುಷಿಯ ಸಂಗತಿ. ಕುವೆಂಪು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಇಂಥದ್ದೊಂದು ಮಹತ್ವದ ಹೆಜ್ಜೆಯ ಮೂಲಕ ನಾಡು–ನುಡಿ–ಸಂಸ್ಕೃತಿ ಕುರಿತ ಕಾಳಜಿಯನ್ನು ಸಾಬೀತುಪಡಿಸಿದೆ.

**ಎನ್.ಕೆ.ಪದ್ಮನಾಭ**

# ಸಮೂಹ ಮಾಧ್ಯಮಗಳು ಮತ್ತು ಭಾಷೆ

**ಎನ್.ಕೆ.ಪದ್ಮನಾಭ**

**ವಿಳಾಸ**
**ಎನ್.ಕೆ.ಪದ್ಮನಾಭ**
ಅತಿಥಿ ಉಪನ್ಯಾಸಕರು
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ
ಮೊಬೈಲ್ : 9972998300

# ಸಮೂಹ ಮಾಧ್ಯಮಗಳು ಮತ್ತು ಭಾಷೆ

ಎನ್.ಕೆ.ಪದ್ಮನಾಭ

ಜನಸಮೂಹದ ಬದುಕಿನಲ್ಲಿ ಸಮೂಹ ಮಾಧ್ಯಮಗಳದ್ದು ನಿರ್ಣಾಯಕ ಪಾತ್ರ. ಸಮಾಜದ ಚಲನಶೀಲತೆಯಲ್ಲಿ ಅವುಗಳ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ಬಹುಮುಖೀ ನೆಲೆಗಳಲ್ಲಿ ಅವುಗಳು ಪಾತ್ರ ನಿರ್ವಹಿಸುತ್ತವೆ. ಸದಾಶಯ, ಕಾಳಜಿ, ಕರ್ತವ್ಯ, ಹೊಣೆಗಾರಿಕೆ ಮತ್ತು ಪಾತ್ರ ನಿರ್ವಹಣೆಗಳ ವಿವಿಧ ಆಯಾಮಗಳಲ್ಲಿ ಮಾಧ್ಯಮಗಳು ಗುರುತಿಸಿಕೊಂಡಿರುತ್ತವೆ. ಜನರು ಮತ್ತು ಸಮಾಜ ಸಕಾರಾತ್ಮಕವಾಗಿ ಬೆಳವಣಿಗೆ ಕಂಡುಕೊಳ್ಳಬೇಕು ಎಂಬ ಸದಾಶಯ, ಜನಪರ ನಿಲುವುಗಳಿಗೆ ಮನ್ನಣೆ ನೀಡುವ ಕಾಳಜಿ, ಬದುಕನ್ನು ಸುಲಭಸಾಧ್ಯವಾಗಿಸುವಂಥ ಕರ್ತವ್ಯಗಳು, ಜನರ ಅಭಿವೃದ್ಧಿಗೆ ಬೇಕಾದದ್ದೇನು ಎಂದು ಕಂಡುಕೊಂಡು ನಿಭಾಯಿಸುವ ಹೊಣೆಗಾರಿಕೆ ಮತ್ತು ಅದಕ್ಕನುಗುಣವಾದ ವಿವಿಧ ಪಾತ್ರಗಳು ಮಾಧ್ಯಮಗಳನ್ನು ಜೀವಂತವಾಗಿರಿಸುತ್ತವೆ. ಹೀಗಾಗಿ ಸಮೂಹ ಮಾಧ್ಯಮಗಳನ್ನು ಒಂದೇ ವ್ಯಾಖ್ಯಾನದಲ್ಲಿ ಅರ್ಥೈಸುವುದು ಕಷ್ಟ.

ಗುಂಪು ಸಂವಹನವನ್ನು ವಿಸ್ತೃತಗೊಳಿಸಿದ ಮಾಧ್ಯಮ ಸಾಧನಗಳ ನೆಲೆಯಲ್ಲಿ ಸಮೂಹ ಮಾಧ್ಯಮಗಳನ್ನು ವ್ಯಾಖ್ಯಾನಿಸಬಹುದು. ಪುಸ್ತಕಗಳು, ರೇಡಿಯೋ, ಟಿವಿ, ವೀಡಿಯೋ ಮತ್ತು ಇಂಟರ್‌ನೆಟ್ ಇವೆಲ್ಲವೂ ಸಂವಹನದ ವ್ಯಾಪ್ತಿಯನ್ನು ಹಿಗ್ಗಿಸಿದ ವಿವಿಧ ಮಾಧ್ಯಮಗಳಾಗಿವೆ. ಈ ಸಾಧನಗಳ ಮೂಲಕ ಸಮೂಹವನ್ನು ತಲುಪುವ, ಸೆಳೆಯುವ, ಪ್ರಭಾವಿಸುವ ಪ್ರಕ್ರಿಯೆ ನಡೆಯುತ್ತದೆ. ಪುಸ್ತಕಗಳು ಅಕ್ಷರ–ಪದ–ವಾಕ್ಯಸಮೂಹಗಳ ಮೂಲಕ ಓದುಗನನ್ನು ಆವರಿಸಿಕೊಳ್ಳುತ್ತವೆ. ದಿನಪತ್ರಿಕೆಗಳು ಕ್ಷಣಕ್ಷಣದ ಮಾಹಿತಿಯನ್ನು ಅವೇ ವಾಕ್ಯ ಸಮೂಹದ ಮೂಲಕ ತಲುಪಿಸುತ್ತವೆ. ರೇಡಿಯೋ ಕೇಳಿಸುವುದರ ಮೂಲಕ ಜನರನ್ನು ತಲುಪುತ್ತದೆ. ಟೆಲಿವಿಷನ್ ವೀಕ್ಷಣೆಯ ಅವಕಾಶವನ್ನು ನೋಡುಗರಿಗೆ ಲಭ್ಯವಾಗಿಸುತ್ತಾ ತನ್ನ ಪ್ರಭಾವಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುತ್ತಿರುತ್ತದೆ. ಇಂಟರ್‌ನೆಟ್ ಇಲ್ಲಿ ಪ್ರಸ್ತಾಪಿಸಿದ ವಿವಿಧ ಮಾಧ್ಯಮಗಳ ಪಾತ್ರಗಳನ್ನು ತನ್ಮೂಲಕ ನಿರ್ವಹಿಸುತ್ತಾ ತನ್ನನ್ನು ಗುರುತಿಸಿಕೊಳ್ಳುತ್ತದೆ.

ಇವೆಲ್ಲವೂ ಮಾಹಿತಿ, ಶಿಕ್ಷಣ ಮತ್ತು ಮನರಂಜನೆಯ ಉದ್ದೇಶಗಳೊಂದಿಗೇ ಕಾರ್ಯನಿರ್ವಹಿಸಬೇಕಾಗುತ್ತದೆ. ಈ ಉದ್ದೇಶಗಳು ಕೇವಲ ಮಾಧ್ಯಮ ಸಾಧನಗಳಿಂದಲಷ್ಟೇ ಈಡೇರುವುದಿಲ್ಲ. ಈ ಮಾಧ್ಯಮ ಸಾಧನಗಳಿಗೆ ಭಾಷೆಯ ಬೆಂಬಲವಿರಲೇಬೇಕಾಗುತ್ತದೆ. ಪ್ರತಿಯೊಂದು ಮಾಧ್ಯಮವೂ ಭಾಷೆಯನ್ನು ದುಡಿಸಿಕೊಳ್ಳುವ ಕ್ರಮದಲ್ಲಿಯೇ ಅಭಿವ್ಯಕ್ತವಾಗುತ್ತದೆ. ಭಾಷೆಯ ಇತಿಹಾಸದೊಂದಿಗೇ ಮಾಧ್ಯಮದ ಇತಿಹಾಸವೂ ಸಮ್ಮಿಳಿತವಾಗಿರುತ್ತದೆ. ಸಂವಹನವು ಸಾರ್ಥಕಗೊಳ್ಳುವುದು ಭಾಷೆಯ ಬಳಕೆಯ ಸಾಧ್ಯಾಸಾಧ್ಯತೆಗಳಿಂದ ; ಬರೀ ಮಾಧ್ಯಮಗಳ ಇರುವಿಕೆಯಿಂದಲ್ಲ.

ಮನುಷ್ಯನ ಇರುವಿಕೆಯ ವಿಶೇಷತೆ ಅವನ ಬೌದ್ಧಿಕತೆ ಮತ್ತು ಮಾತಿನ ಮೂಲಕ ಸಾಬೀತಾಗುತ್ತದೆ. ಜೀವವಿಕಾಸದ ವಿವಿಧ ಹಂತಗಳನ್ನು ಪರಿಶೀಲಿಸಿದಾಗ ಸಂವಹನಕ್ಕೆ ಮಾಧ್ಯಮೊಂದರ ಅನಿವಾರ್ಯತೆ ಮನವರಿಕೆಯಾಗುತ್ತದೆ. 'ಮನುಷ್ಯನ ಮಾತು' ಎಂದರೆ ಮನುಷ್ಯ ಭಾಷೆ. ಮಾತು ಭಾಷೆಯ ಅಭಿವ್ಯಕ್ತಿಯ

ಮಾಧ್ಯಮವಾಗುವ ಮುಂಚೆ ವಿವಿಧ ಕ್ರಮಗಳಲ್ಲಿ ಸಂವಹನ ಏರ್ಪಡುತ್ತಿತ್ತು. ವಿವಿಧ ಚಿಹ್ನೆ, ಸಂಜ್ಞೆಗಳ ಮೂಲಕ ನಡೆದ ಸಂವಹನ ಕಾಲಾನುಕ್ರಮದಲ್ಲಿ ಮಾತಿನ ಮೂಲಕ ಅಭಿವ್ಯಕ್ತವಾಗತೊಡಗಿತು. ಜಗತ್ತಿನ ಅಷ್ಟೂ ಜನರ ಮಾತು ಒಂದೇ ಭಾಷೆಯ ಆಧಾರವನ್ನು ಹೊಂದಿರುವುದಿಲ್ಲ. ವಿವಿಧ ದೇಶಗಳು, ಅವುಗಳೊಳಗೇ ಇರುವ ವಿವಿಧ ಪ್ರದೇಶಗಳು, ಅಲ್ಲಿಯ ಸಂಸ್ಕೃತಿಯ ನೆಲೆಯಲ್ಲಿ ಜನರು ವಿವಿಧ ಭಾಷಾ ಹಿನ್ನೆಲೆಗಳನ್ನು ಹೊಂದಿರುತ್ತಾರೆ. ಮನುಷ್ಯ ಮಾತು ಮತ್ತು ಅದು ವ್ಯಕ್ತವಾಗುವ ಭಾಷೆ ಜಗತ್ತಿನಾದ್ಯಂತ ಒಂದೇ ಆಗಿದ್ದಿದ್ದರೆ ಜಗತ್ತು ಇಷ್ಟು ವೈವಿಧ್ಯಮಯವಾಗಿ ಕಂಗೊಳಿಸುತ್ತಿರಲಿಲ್ಲ. ವಿವಿಧ ಭಾಷೆಗಳ ಮೂಲಕ ಸಂವಹಿತಗೊಳ್ಳುವ ಮಾತು ಆ ಕಾರಣಕ್ಕಾಗಿಯೇ ಸಾರ್ವಕಾಲಿಕ ಮನ್ನಣೆಯನ್ನು ಪಡೆಯುತ್ತದೆ.

ವಿವಿಧ ಹಂತಗಳಲ್ಲಿ ನಡೆಯುವ ಸಂವಹನ ಸ್ವರೂಪಕ್ಕೆ ಅನುಗುಣವಾಗಿ ಭಾಷೆ ಅಭಿವ್ಯಕ್ತವಾಗುತ್ತದೆ. ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಸಂವಹನಕ್ಕೂ, ಒಬ್ಬ ವ್ಯಕ್ತಿ ಮತ್ತು ನಿರ್ದಿಷ್ಟ ಗುಂಪಿನ ನಡುವೆ ನಡೆಯುವ ಸಂವಹನದ ಭಾಷೆಯಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು. ಇಬ್ಬರು ವ್ಯಕ್ತಿಗಳು ಪರಸ್ಪರರ ಪರಿಚಿತ ಹಿನ್ನೆಲೆಗಳ ನೆಲೆಯಲ್ಲಿ ಸಂವಹನ ನಡೆಸುವಾಗ ಅವರದ್ದೇ ಆದ ಭಾಷೆ ಇರುತ್ತದೆ. ಒಂದೇ ಪ್ರದೇಶದ ಇಬ್ಬರು ವ್ಯಕ್ತಿಗಳು ನವದೆಹಲಿಯಲ್ಲಿದ್ದಾಗ ಅವರು ತೊಡಗಿಕೊಂಡ ಕೆಲಸದ ವಾತಾವರಣದ ಭಾಷೆ ಬೇರೆಯಾಗಿದ್ದರೂ ಇಬ್ಬರೂ ಭೇಟಿಯಾದಾಗ ತಮ್ಮ ಪ್ರದೇಶದ ಭಾಷೆಯಲ್ಲಿ ಸಂವಹವನ್ನು ನಡೆಸುತ್ತಾರೆ. ಅದೇ ಇಬ್ಬರು ವ್ಯಕ್ತಿಗಳು ತಮ್ಮ ಸಂಸ್ಥೆಯ ಉದ್ದೇಶಕ್ಕಾಗಿ ಗುಂಪೊಂದನ್ನು ಉದ್ದೇಶಿಸಿ ಮಾತನಾಡಬೇಕಾದ ಅಲ್ಲಿಯ ಸ್ವೀಕೃತ ಭಾಷೆಯಲ್ಲಿಯೇ ಮಾತನಾಡಿ ಸಂವಹನ ಸಾಧ್ಯವಾಗಿಸಿಕೊಳ್ಳಬೇಕಾಗುತ್ತದೆ. ವ್ಯಕ್ತಿಗತ ನೆಲೆಯಲ್ಲಿ ನಡೆಯುವ ಸಂವಹನದ ಭಾಷೆಗೂ ಸಮೂಹದ ನೆಲೆಯಲ್ಲಿ ನಡೆಯುವ ಸಂವಹನದ ಭಾಷೆಗೂ ಇರುವ ವ್ಯತ್ಯಾಸಗಳನ್ನು ಗುರುತಿಸಬಹುದು. ವ್ಯಕ್ತಿ, ವ್ಯಕ್ತಿಗಳನ್ನೊಳಗೊಂಡ ಗುಂಪು, ಅಂಥ ಗುಂಪುಗಳನ್ನು ಪ್ರತಿನಿಧಿಸುವ ಸಾರ್ವಜನಿಕವಲಯ ಇವೆಲ್ಲವೂ ಸೇರಿದಂತೆ ವಿವಿಧ ಜನವರ್ಗಗಳನ್ನು ಪ್ರತಿನಿಧಿಸುವ ಸಮೂಹ – ಈ ಪ್ರತಿಯೊಂದು ಹಂತದಲ್ಲೂ ಏರ್ಪಡುವ ಸಂವಹನವು ವೈವಿಧ್ಯಮಯ ಭಾಷಾ ಬಳಕೆಯ ಮೂಲಕವೇ ನಡೆಯುತ್ತದೆ.

ಸಮೂಹದೊಂದಿಗೆ ಅರ್ಥಪೂರ್ಣ ಸಂವಹನ ನಡೆಸುವುದು ಸುಲಭವಲ್ಲ. ಸಮೂಹವನ್ನು ಅರ್ಥೈಸಿಕೊಂಡಾಗ ಮಾತ್ರ ಅದರೊಂದಿಗೆ ಯಶಸ್ವಿ ಸಂವಹನ ಸಾಧ್ಯವಾಗುತ್ತದೆ. ಸಮೂಹವನ್ನು ಅರ್ಥೈಸಿಕೊಳ್ಳುವ ಭಾಷೆ ಇಲ್ಲಿ ಗಮನಾರ್ಹ. ಸಮಾಜವೊಂದು ವಿವಿಧ ಜನವರ್ಗಗಳ ಸಂಯೋಜಿತ ವ್ಯವಸ್ಥೆ. ಸಮೂಹವು ಈ ವ್ಯವಸ್ಥೆಯ ಭಾಗವಾಗಿರುತ್ತದೆ. ಹರ್ಬರ್ಟ್ ಬ್ಲೂಮರ್ ಅವರ ಪ್ರಕಾರ ಸಮೂಹವು ಆಧುನಿಕ ಸಮಾಜದ ವಿಭಿನ್ನವಾದ ಸಾಮಾಜಿಕ ವ್ಯವಸ್ಥೆ. ಜನಸಂದಣಿ, ಸಾರ್ವಜನಿಕರು ಮತ್ತು ಗುಂಪಿಗಿಂತ ಸಮೂಹವು ಭಿನ್ನವಾದುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ವಿಲ್ಬರ್ ಶ್ರಾಂ ಅವರು ಗುರುತಿಸಲು ಕಷ್ಟವಾದ ವಿವಿಧ ವ್ಯಕ್ತಿಗಳ ಪ್ರತ್ಯೇಕಿತ/ ಚದುರಿದ ಗುಂಪನ್ನು 'ಸಮೂಹ' ಎಂದಿದ್ದಾರೆ. ಈ ವ್ಯಕ್ತಿಗಳು ವ್ಯಾಪಕವಾದ ಭೌಗೋಳಿಕ ಪ್ರದೇಶದಲ್ಲಿ ನೆಲೆಸಿರುತ್ತಾರೆ. ಇವರ ನಡುವೆ ಪರಸ್ಪರ ಸಂವಹನ ನಡೆಯುವುದಿಲ್ಲ. ಒಂದು ದೃಷ್ಟಿಯಿಂದ ಒಬ್ಬರಿಗೊಬ್ಬರು ಅನಾಮಿಕರು, ಅಪರಿಚಿತರು. ಅವರ ಇರುವಿಕೆ ಗೋಚರವಾಗುವುದು ಸಮೂಹ ವರ್ತನೆಗಳಲ್ಲಿಯೇ.

ಡೆನಿಸ್ ಮ್ಯಾಕ್‌ಕ್ವೇಲ್ (ಆಜಟಿಛಿ ಒಛಿಕಿಣಚಿಟು) ಅವರು ಸಮೂಹ ಎಂಬ ಪದಕ್ಕೆ ಹಿಂದೆ ನಕಾರಾತ್ಮಕ ಗೂಢಾರ್ಥವಿತ್ತು ಎಂದು ಹೇಳಿದ್ದಾರೆ. ಸಾಮಾನ್ಯರನ್ನು ಗುರುತಿಸಲು ಸಮೂಹ ಎಂಬ ಪದ ಬಳಕೆಯಾಗುತ್ತಿತ್ತು. ಅನಕ್ಷರಸ್ತರು, ಅಶಿಸ್ತಿನಿಂದ ಕೂಡಿರುವವರು, ಕ್ರುದ್ಧ ಸ್ವಭಾವದವರು, ಅನಾಗರಿಕರು ಈ 'ಸಾಮಾನ್ಯ' ವರ್ಗದಲ್ಲಿದ್ದರು. ಇವರನ್ನೇ 'ಸಮೂಹ' ಎಂದು ಪರಿಗಣಿಸಲಾಗಿತ್ತು. 1917ರ ನಂತರ ಸಮೂಹಕ್ಕೆ ಹಂತಹಂತವಾಗಿ ಸಕಾರಾತ್ಮಕ ಅರ್ಥ ದೊರಕಲಾರಂಭಿಸಿತು. ಕಮ್ಯುನಿಸ್ಟ್ ಸಮಾಜದಲ್ಲಿ ದುಡಿಯುವ ವರ್ಗದ ಶಕ್ತಿಯನ್ನು ನಿರೂಪಿಸಲು ಸಮೂಹ ಪದದ ಬಳಕೆಯಾಯಿತು. ಈ ಸಂದರ್ಭದಲ್ಲಿಯೇ ಸಮೂಹ ಚಳುವಳಿ, ಸಾಮೂಹಿಕ ಬೆಂಬಲ, ಸಮೂಹ ಶಕ್ತಿ ಎಂಬ ಪದಗಳು ಬಳಕೆಯಾದವು. ಆದಾಗ್ಯೂ, ಆಯಾ ದೇಶ-ಪ್ರದೇಶಗಳ ಸಾಮಾಜಿಕ ಸ್ಥಿತಿಗತಿಗಳ ನೆಲೆಯಲ್ಲಿ ಸಮೂಹಕ್ಕೆ ಅರ್ಥಗಳು ದೊರಕಿದವು. ಭಾರತದಲ್ಲಿಯೂ ಸಹ ಅನಕ್ಷರಸ್ತರು, ಗ್ರಾಮೀಣರನ್ನು ಪ್ರತಿನಿಧಿಸಲು ನಕಾರಾತ್ಮಕವಾಗಿ 'ಸಮೂಹ' ಎಂಬ ಪದ ಬಳಕೆಯಲ್ಲಿತ್ತು. 'ಹಸಿರು ಕ್ರಾಂತಿ'ಯ ನಂತರವೇ ಈ ಪದ ಸಕಾರಾತ್ಮಕ ಅರ್ಥವನ್ನು ದೊರಕಿಸಿಕೊಂಡಿದ್ದು. ಪ್ರಸಾರ ಮಾಧ್ಯಮಗಳು ಅಸ್ತಿತ್ವ ಕಂಡುಕೊಂಡು ತಮ್ಮ ಪ್ರಭಾವವನ್ನು ವಿಸ್ತೃತಗೊಳಿಸಿಕೊಂಡ ನಂತರವಂತೂ ಸಮೂಹಕ್ಕೆ ವಿಭಿನ್ನ ಅರ್ಥ ದೊರಕಿತು. ಈ 'ಸಮೂಹ' ಎಂಬ ಪದವು ವಿಶಾಲ ವ್ಯಾಪ್ತಿಯ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಜನರನ್ನು ಪ್ರತಿನಿಧಿಸುತ್ತದೆ. ಈ ಬಗೆಯ ಸಮೂಹವನ್ನು ದೃಷ್ಟಿಯಲ್ಲಿರಿಸಿಕೊಂಡೇ ಸಂವಹನದ ಪ್ರಯೋಗಗಳು ನಡೆಯುತ್ತವೆ.

ಸಮೂಹದ ಈ ಬಗೆಯ ಸ್ವರೂಪದ ಕಾರಣಕ್ಕಾಗಿಯೇ ಸಮೂಹ ಸಂವಹನವು ಸಂಕೀರ್ಣ ಪ್ರಕ್ರಿಯೆಯಾಗಿ ಗುರುತಿಸಲ್ಪಟ್ಟಿದೆ. ಕಳೆದ ಶತಮಾನದ 30ರ ದಶಕದಲ್ಲಿ ಮೊದಲ ಬಾರಿಗೆ 'ಸಮೂಹ ಸಂವಹನ' ಪದ ಬಳಕೆ ಬಂದಿತು. 1967ರಲ್ಲಿ ಸಮೂಹ ಸಂವಹನದ ಪರಿಕಲ್ಪನೆಯನ್ನು ವ್ಯಾಖ್ಯಾನಿಸಿದವರು ಜಾರ್ಜ್ ಗರ್ಬನರ್. ವಿಸ್ತೃತ ಪ್ರದೇಶಗಳಲ್ಲಿ ವಾಸಿಸುವ ಅಸಂಖ್ಯಾತ ಜನರಿಗಾಗಿ ಕಳುಹಿಸಲ್ಪಡುವ ಅರ್ಥಪೂರ್ಣ ಸಂದೇಶಗಳ ಸಂವಹನದ ಪ್ರಕ್ರಿಯೆಯನ್ನು ಸಮೂಹ ಸಂವಹನ ಎನ್ನಲಾಗುತ್ತದೆ. ಸಮೂಹ ಸಂವಹನವು ತಾಂತ್ರಿಕ ಸಾಧನಗಳ ಜ್ಞಾನವಿರುವ ಸಂಪನ್ಮೂಲ ವ್ಯಕ್ತಿಗಳನ್ನೊಳಗೊಂಡ ಮಾಧ್ಯಮ ಸಂಸ್ಥೆಗಳಿಂದ ಏರ್ಪಡುವ ಪ್ರಕ್ರಿಯೆಯಾಗಿದೆ. ಈ ಸಮೂಹ ಸಂವಹನಕ್ಕೆ ಏಕಮುಖೀ ಸ್ವರೂಪವಿದೆ. ಸಂವಾದ, ಪ್ರತಿಕ್ರಿಯೆಯು ಗೈರುಹಾಜರಾಗಿರುತ್ತದೆ. ಸಮೂಹದ ಉದ್ದೇಶಕ್ಕಾಗಿ ಸಂವಹಿತಗೊಳ್ಳುವ ಪ್ರಕ್ರಿಯೆಯೇ ಇಲ್ಲಿ ನಿರ್ಣಾಯಕ. ವಿಷಯ, ವಿಚಾರ ಅಥವಾ ಯಾವುದೇ ಒಂದು ಅಂಶ ಸಂವಹನಗೊಂಡ ನಂತರ ಅದನ್ನು ಸಂವಹಿಸಿಕೊಂಡ ಸಮೂಹದಿಂದ ಸಂವಾದದ ಪ್ರಕ್ರಿಯೆ ನಡೆಯುವುದಿಲ್ಲ. ದಿನಪತ್ರಿಕೆ, ರೇಡಿಯೋ, ಸಿನಿಮಾ ಮತ್ತಿತರ ಮಾಧ್ಯಮ ಸಾಧನಗಳ ಮೂಲಕ ಸಮೂಹ ಸಂವಹನ ಸಾಧ್ಯವಾಗುತ್ತದೆ.

ಸಂವಹನವು ವಿವಿಧ ಅಂಶಗಳನ್ನು ಆಧರಿಸಿ ಏರ್ಪಡುತ್ತಿರುತ್ತದೆ. ವ್ಯಕ್ತಿಗತ ನೆಲೆಯಲ್ಲಿ ನಡೆಯುವ ಸಂವಹನಕ್ಕೂ ಸಮೂಹವನ್ನು ದೃಷ್ಟಿಯಲ್ಲಿರಿಸಿಕೊಂಡು ನಡೆಸುವ ಸಂವಹನಕ್ಕೂ ವ್ಯತ್ಯಾಸಗಳನ್ನು ಗುರುತಿಸಬಹುದು. ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂವಹನ ಅವರಿರುವ ಕೌಟುಂಬಿಕ-ಸಾಮಾಜಿಕ ಮಿತಿಯೊಳಗೆ ನಡೆಯುತ್ತಿರುತ್ತವೆ. ಸಮೂಹವೊಂದನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ವಹಿಸಲ್ಪಡುವ ಸಂವಹನವು ವಿವಿಧ ಸಾಂಸ್ಕೃತಿಕ ಹಿನ್ನೆಲೆಗಳಲ್ಲಿ ನಡೆಯುತ್ತಿರುತ್ತದೆ. ಪ್ರಾಥಮಿಕವಾಗಿ ಸಂವಹನವು ಒಂದು ನಿರ್ವಹಿಸಲ್ಪಡುವ ಪ್ರಕ್ರಿಯೆ. ವ್ಯಕ್ತಿಯೊಬ್ಬ ಇನ್ನೊಬ್ಬನೊಂದಿಗೆ ಸಂವಹಿಸುವ ಮುನ್ನ ಏನನ್ನು ಹೇಳಬೇಕು ? ಎಂಬುದನ್ನು ಸ್ಪಷ್ಟಪಡಿಸಿಕೊಂಡು ಹೇಳುತ್ತಾನೆ. ಏನನ್ನು ಯಾವ ಭಾಷೆಯಲ್ಲಿ ಸಂವಹಿಸಬೇಕು ?

ಎಂಬುದು ಅವನು ಕೇಳಿಕೊಳ್ಳುವ ಮತ್ತೊಂದು ಪ್ರಶ್ನೆ. ತನ್ನದೇ ಪ್ರದೇಶದಲ್ಲಿದ್ದಾಗ ತನ್ನದೇ ಭಾಷೆ, ಬೇರೊಂದು ಪ್ರದೇಶಕ್ಕೆ ಹೋದಾಗ ಅಲ್ಲಿಯವರೊಂದಿಗೆ ಮಾತನಾಡಲು ಅಲ್ಲಿಯದೇ ಭಾಷೆಯನ್ನು ಅವಲಂಬಿಸಬೇಕಾಗುತ್ತದೆ. ಏನನ್ನು, ಯಾವ ಭಾಷೆಯಲ್ಲಿ ಹೇಳಬೇಕು ಎಂಬುದನ್ನು ನಿರ್ಣಯಿಸಿಕೊಳ್ಳುವ ಕ್ರಮದಲ್ಲಿಯೇ ವ್ಯಕ್ತಿಗತ ನಿರ್ವಹಣಾ ಪ್ರಕ್ರಿಯೆಯನ್ನು ಗುರುತಿಸಬಹುದು. ಸಮೂಹವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವಿಧ ಮಾಧ್ಯಮ ಸಂಸ್ಥೆಗಳು ನಡೆಸುವ ಸಂವಹನವೂ ಕೂಡಾ ವಿಸ್ತೃತ ನಿರ್ವಹಣಾ ಪ್ರಕ್ರಿಯೆಯಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಭಾಷೆಯೇ ನಿರ್ಣಾಯಕವಾಗಿರುತ್ತದೆ.

ಸಂವಹನ ಮತ್ತು ಭಾಷೆ ಇವೆರಡನ್ನೂ ಪ್ರತ್ಯೇಕಿಸಿ ನೋಡುವುದಕ್ಕೆ ಆಗುವುದಿಲ್ಲ. ಭಾಷೆಯ ಮಾಧ್ಯಮವನ್ನು ಆಧರಿಸದೇ ಸಂವಹನ ಸಾಧ್ಯವಾಗುವುದಿಲ್ಲ. ಬರೀ ಚಿತ್ರಗಳ ಮುಖಾಂತರವೂ ಸಂವಹನ ನಡೆಸಬಹುದು. ಆದರೆ, ಅದು ಭಾಷೆಯನ್ನು ಆಧರಿಸಿದ ಸಂವಹನ ಉಂಟುಮಾಡುವ ಪ್ರಭಾವವನ್ನು ಕಟ್ಟಿಕೊಡುವುದಿಲ್ಲ. ಚಿತ್ರವೊಮದರ ಸಂವಹನ ಅದನ್ನು ನೋಡುವವನ ಗ್ರಹಿಕೆ ಮತ್ತು ಕಲ್ಪನೆಯ ಸಾಧ್ಯತೆಗಳನ್ನು ವಿಸ್ತರಿಸುವುದಿಲ್ಲ. ಭಾಷೆಯ ಮೂಲಕ ಏರ್ಪಡುವ ಸಂವಹನಕ್ಕೆ ಆ ಬಗೆಯ ಸಾಧ್ಯತೆಗಳಿರುತ್ತವೆ. ಕುವೆಂಪು ಅವರ ಭಾವಚಿತ್ರವೊಂದನ್ನು ನೋಡುವ ವ್ಯಕ್ತಿಗೆ 'ಇವರು ಕುವೆಂಪು' ಎಂಬುದು ಮನದಟ್ಟಾಗುತ್ತದೆ. ಅವರ ಪ್ರಭಾವಳಿಯನ್ನು ಕೇಂದ್ರೀಕರಿಸಿ ಆತ ಅವರನ್ನು ಗುರುತಿಸುತ್ತಾನೆ. ಆ ಭಾವಚಿತ್ರದೊಂದಿಗೆ ಅಕ್ಷರಗಳ ಮೂಲಕ ವಿವರಣೆಯಿದ್ದರೆ ಅವರ ವಿಶೇಷತೆಗಳು ಪರಿಚಿತವಾಗುತ್ತವೆ. ಇನ್ನು ಅವರ ಸಾಹಿತ್ಯಕ ಕೊಡುಗೆಗಳ ಕುರಿತಾದ ವಿಮರ್ಶಾತ್ಮಕ ಒಳನೋಟಗಳ ವಿಶ್ಲೇಷಣೆ ಕುವೆಂಪು ಅವರ ಕುರಿತಾದ ಆ ನೋಡುಗನ ತಿಳುವಳಿಕೆಯ ಮಿತಿಯನ್ನು ವಿಸ್ತರಿಸುತ್ತದೆ.

ಕಥೆಯೊಂದು ಧಾರಾವಾಹಿ ರೂಪದಲ್ಲಿ ನೋಡಿಸಿಕೊಳ್ಳುವಾಗಲೂ, ಅಕ್ಷರ ಮಾಧ್ಯಮದ ಮೂಲಕ ಓದುಗನನ್ನು ತಲುಪುವಾಗಲೂ ಭಿನ್ನತೆಗಳಿರುತ್ತವೆ. ಕಥೆಯ ಭಾಷೆ ಓದುಗನನ್ನು ಕಲ್ಪನಾವಿಹಾರದಲ್ಲಿ ತೊಡಗಿಸಿದರೆ ಆ ಕಥೆಯನ್ನು ಆಧರಿಸಿದ ಧಾರಾವಹಿಯು ನೋಡುಗನ ನೋಟಕ್ಕೆ ಸೀಮಿತವಾಗಿಬಿಡುತ್ತದೆ. ವೀಕ್ಷಕ ನೋಟ ಸಾಧ್ಯವಾಗಿಸಿಕೊಂಡ ಮೇಲೆ ಕಲ್ಪನಾವಿಹಾರಕ್ಕೆ ಅವಕಾಶವಿರುವುದಿಲ್ಲ. ಕಥೆಯೊಂದರಿಂದ ಕಲ್ಪನಾವಿಹಾರ ಮಾತ್ರವಲ್ಲ ; ಅದು ಚಿಂತನೆಯ ವಿವಿಧ ಹೊಳಹುಗಳನ್ನು ನಮ್ಮೊಳಗೆ ಹೊಳೆಸಬಹುದು. ಇದೇ ಪ್ರಭಾವಸಾಧ್ಯತೆಯನ್ನು ಕವಿತೆ ಸೇರಿದಂತೆ ಬರಹದ ವಿವಿಧ ಪ್ರಕಾರಗಳಿಗೆ ಅನ್ವಯಿಸಬಹುದು. ಇಲ್ಲೆಲ್ಲಾ ಭಾಷೆಯೇ ಮುಖ್ಯ.

ಸಂವಾದ, ಸಂಭಾಷಣೆ, ವಿನಿಮಯ ಮತ್ತು ಏಕಸ್ವರೂಪದ ಕ್ರಮದಲ್ಲಿಯೂ ಸಂವಹನವನ್ನು ವ್ಯಾಖ್ಯಾನಿಸಬಹುದು. ವಿಷಯವೊಂದಕ್ಕೆ ಸಂಬಂಧಿಸಿದಂತೆ ವ್ಯಕ್ತಿ–ವ್ಯಕ್ತಿಗಳು, ವ್ಯಕ್ತಿ–ಗುಂಪಿನ ನಡುವೆ ನಡೆಯುವ ಸಂವಾದ, ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಸಂಭಾಷಣೆ, ವಿಚಾರ–ಉದ್ದೇಶಗಳ ವಿನಿಮಯ, ನಿರ್ದಿಷ್ಟ ಪ್ರದೇಶದಲ್ಲಿ ಅಲ್ಲಿಯ ಸಂಸ್ಕೃತಿಗೆ ಅನುಗುಣವಾಗಿ ಎಲ್ಲರ ಗ್ರಹಿಕೆಗೆ ಎಟಕುವಂತೆ ನಡೆಯುವ ಒಪ್ಪಿತ ಸಂಜ್ಞಾವ್ಯವಸ್ಥೆಯ ಮೂಲಕ ನಡೆಯುವ ದಿನನಿತ್ಯದ ವ್ಯವಹಾರಗಳ ಸಂದರ್ಭಗಳಲ್ಲಿ 'ಸಂವಹನ' ಬಹುಮುಖೀ ಪಾತ್ರವನ್ನು ಗುರುತಿಸಬಹುದು.

ಸಂವಹನವನ್ನು ವ್ಯಾಖ್ಯಾನಿಸುವಾಗಲೆಲ್ಲಾ ಭರತನ 'ನಾಟ್ಯಶಾಸ್ತ್ರ'ದಲ್ಲಿ ಉಲ್ಲೇಖಿತವಾದ 'ಸಾಧಾರೀಕರಣ' ಎಂಬ ಪದವನ್ನು ಪ್ರಸ್ತಾಪಿಸಲಾಗುತ್ತದೆ. ಈ ಪದವು ಸಂವಹನ ಪದದೊಂದಿಗೆ ಹೊಂದಿರುವ ಸಾಮೀಪ್ಯವನ್ನು

ದೃಷ್ಟಿಯಲ್ಲಿರಿಸಿಕೊಂಡು ವಿಶ್ಲೇಷಿಸಲಾಗುತ್ತದೆ. 'ಸಾಧಾರೀಕರಣ'ವು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದು ಮುಕ್ತ ಗ್ರಹಿಕೆಯ ಸಾಮರ್ಥ್ಯವನ್ನು ಹೊಂದಿದ ಸಹೃದಯರ ನಡುವೆ ನಡೆಯುತ್ತದೆ. ಈ ಬಗೆಯ ಸಹೃದಯತೆಯ ಗುಣವು ಸಂಸ್ಕೃತಿ ಮತ್ತು ಅಧ್ಯಯನ ಕ್ರಮಗಳಿಂದ ಪ್ರಭಾವಿತವಾಗಿರುತ್ತದೆ. ಸಾಧಾರೀಕರಣದ ಪರಿಕಲ್ಪನೆಯಲ್ಲಿ ಸಂವಹನ ನಡೆಸುವುದಕ್ಕಿಂತ ಸಂವಹನ ಸ್ವೀಕರಿಸುವ ಕ್ರಿಯೆಯೇ ಮುಖ್ಯವೆನಿಸುತ್ತದೆ. ಸಂವಹನ ನಡೆಸುವವ ಮತ್ತು ಆ ಸಂವಹನ ಸ್ವೀಕರಿಸುವವರ ಮನಸ್ಥಿತಿಗಳೆರಡೂ ಒಂದೇ ಆಗಿರುತ್ತವೆ. ಈ ಸಮಾನಮನಸ್ಕ ಗುಣಲಕ್ಷಣವನ್ನೇ ಸಂಸ್ಕೃತದ ಈ ಪರಿಕಲ್ಪನೆ ಎತ್ತಿಹಿಡಿಯುತ್ತದೆ.

ಪಾಶ್ಚಿಮಾತ್ಯರ ವ್ಯಾಖ್ಯಾನಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅರ್ಥೈಸಿಕೊಳ್ಳಲು ಪ್ರಯತ್ನಿಸಿದಾಗ ಸಂವಹನಕ್ಕೆ ಇರುವ ಅರ್ಥದ ವಿವಿಧ ಆಯಾಮಗಳು ಅನಾವರಣಗೊಳ್ಳುತ್ತವೆ. ಅರಿಸ್ಟಾಟಲ್‌ನ ಝುಜಾಹಱುಭಿ ಪರಿಕಲ್ಪನೆಯು ಪಾಶ್ಚಿಮಾತ್ಯ ಸಂವಹನ ಸಿದ್ಧಾಂತ ಮತ್ತು ಮಾದರಿಗಳಿಗೆ ಮೂಲ ಅಡಿಪಾಯವನ್ನು ಹಾಕಿಕೊಟ್ಟಿದೆ. ರೆಟಾರಿಕ್ ಮಾತುಗಾರ, ಅವನ ಮಾತು ಮತ್ತು ಅವನ ಮಾತುಗಳನ್ನು ಕೇಳಿಸಿಕೊಳ್ಳುವವನನ್ನು ಕೇಂದ್ರೀಕರಿಸಿಕೊಂಡ ಪರಿಕಲ್ಪನೆಯಾಗಿದೆ. ರೆಟಾರಿಕ್ ತತ್ವವು ಅರ್ಥಗ್ರಹಿಕೆಗೆಟಕುವ ಸಾಧನಗಳ ಶೋಧಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತದೆ. ಅಮೆರಿಕದ ರಾಜ್ಯಶಾಸ್ತ್ರಜ್ಞ ಹೆರಾಲ್ಡ್ ಡಿ ಲಾಸ್‌ವೆಲ್ ಇದನ್ನು ಆಧರಿಸಿಯೇ ಸಮೂಹ ಸಂವಹನವನ್ನು ವ್ಯಾಖ್ಯಾನಿಸಿದ್ದಾರೆ. ಯಾರು, ಯಾವುದನ್ನು, ಯಾವ ಮಾಧ್ಯಮದ ಮೂಲಕ, ಯಾರಿಗೆ, ಯಾವ ಪರಿಣಾಮದಲ್ಲಿ ಹೇಳಿದ್ದಾರೆ ಎನ್ನುವ ಸೂತ್ರಕ್ಕನುಗುಣವಾಗಿ ಸಂವಹನವನ್ನು ಅರ್ಥೈಸಿದ್ದಾರೆ. ನಿರೀಕ್ಷಿತ ಪರಿಣಾಮ-ಪ್ರಭಾವಗಳಿಗಾಗಿ ಮಾಹಿತಿಯ ವಿನಿಮಯ ಅಥವಾ ರವಾನೆ ಈ ಸೂತ್ರದ ಹಿಂದಿನ ಸತ್ವಯುತ ಅಂಶವಾಗಿದೆ. ಮಾಹಿತಿಯ ಮೂಲ, ಸಂದೇಶ ಮತ್ತು ಗಮ್ಯ – ಈ ಮೂರೂ ಅಂಶಗಳು ಪಾಶ್ಚಿಮಾತ್ಯ ಸಂವಹನ ವ್ಯಾಖ್ಯಾನಗಳು ಕೇಂದ್ರೀಕರಿಸಿದ ಪ್ರಧಾನ ಅಂಶಗಳಾಗಿವೆ.

ಒಟ್ಟಾರೆ, ನಿರ್ದಿಷ್ಟ ಮಾಧ್ಯಮದ ಮೂಲಕ ಸಮೂಹವನ್ನು ತಲುಪುವ ಸಂವಹನಕ್ಕೆ 'ಭಾಷೆ'ಯ ಅಡಿಗಲ್ಲು ಬೇಕೇಬೇಕಾಗುತ್ತದೆ. ಭಾಷೆಗೆ ಇರುವ ವಿವಿಧ ಸಾಧ್ಯತೆಗಳನ್ನು ಗ್ರಹಿಸಿ ಅದಕ್ಕನುಗುಣವಾಗಿ ದುಡಿಸಿಕೊಳ್ಳುವ ಜಾಣ್ಮೆ ವೃತ್ತಿಪರ ಸಮೂಹ ಸಂವಹನಕಾರರಿಗೆ ಇರಬೇಕಾಗುತ್ತದೆ. ಭಾಷೆಯನ್ನು ಸಮರ್ಪಕವಾಗಿ ದುಡಿಸಿಕೊಳ್ಳುವ ಜಾಣ್ಮೆ ಕೇವಲ ಸಮಕಾಲೀನ ಸಂದರ್ಭದ ಬರಹಗಳನ್ನು ಓದುವುದರಿಂದ ಬರುವುದಿಲ್ಲ. ಆಯಾ ಸಮೂಹ ಮಾಧ್ಯಮದಲ್ಲಿ ಕಾರ್ಯನಿರ್ವಹಿಸುವ ವೃತ್ತಿಪರರು ತಾವು ಪ್ರತಿನಿಧಿಸುವ ಮಾಧ್ಯಮದ ಪೂರ್ವೇತಿಹಾಸದ ಕುರಿತು ಸಮಗ್ರವಾಗಿ ತಿಳಿದುಕೊಂಡಿರಬೇಕಾಗುತ್ತದೆ.

**ಜನಪದ ಮಾಧ್ಯಮಗಳು ಮತ್ತು ಭಾಷೆ**

ನಿರ್ದಿಷ್ಟ ಮಾಧ್ಯಮದ ಉಗಮಕಾಲದ ಬೆಳವಣಿಗೆ, ಉಚ್ಛ್ರಾಯ ಸ್ಥಿತಿಗೆ ತಲುಪುವವರೆಗೂ ಭಾಷಿಕವಾಗಿ ಆದ ಸ್ಥಿತ್ಯಂತರಗಳನ್ನು ಗಮನಿಸಬೇಕಾಗುತ್ತದೆ. ಜನರ ಬದುಕನ್ನು ಹೊರತುಪಡಿಸಿ ಭಾಷೆಯನ್ನು ನೋಡುವುದಕ್ಕಾಗದು. ಜನರ ಬದುಕಿನೊಂದಿಗೇ ಭಾಷೆ ತನ್ನನ್ನು ಉಳಿಸಿಕೊಳ್ಳುತ್ತದೆ. ಜನರ ಒಟ್ಟು ಅಸ್ತಿತ್ವ ಭಾಷೆಯನ್ನೇ ಅವಲಂಬಿಸಿರುತ್ತದೆ. ಸಂಸ್ಕಾರದ

ಜನಬದುಕು ಸುಸಂಸ್ಕೃತ ಭಾಷೆಗೆ ಅಡಿಪಾಯವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಜನಪದೀಯ ಪ್ರಕಾರಗಳ ಒಡಲಿಂದ ಬಂದ ಕಾಣ್ಕೆಗಳನ್ನು ಪ್ರಸ್ತಾಪಿಸಬಹುದು.

ಜನಪದ ಕಲೆಗಳ ಸಂವಹನದ ಕೇಂದ್ರವಸ್ತುಗಳೆಲ್ಲವೂ ಜನರ ಬದುಕಿನ ವಿವಿಧ ಅನುಭವಗಳ ಮೂಲಗಳನ್ನೇ ಆಧರಿಸಿವೆ. ಆ ಅನುಭವಗಳು ಸಾರ್ವಕಾಲಿಕ ಮೌಲಿಕ ತತ್ವಗಳ ಸಂವಹನಕ್ಕೆ ಪ್ರೇರಣೆಯಾಗಿವೆ. ಪ್ರತಿಯೊಂದು ಜನಪದೀಯ ಕಲೆಯೂ ತನ್ನದೇ ಆದ ಭಾಷಿಕ ಆಕೃತಿಯನ್ನು ರೂಪಿಸಿಕೊಂಡಿದೆ. ಆಯಾಕಾಲದ ಅಗತ್ಯಗಳಿಗೆ ಅನುಗುಣವಾಗಿ ಭಾಷಿಕವಾಗಿ ತನ್ನನ್ನು ತಾನು ಅಭಿವ್ಯಕ್ತಿಸಿಕೊಂಡಿದೆ. ಈ ಬಗೆಯ ಅಭಿವ್ಯಕ್ತಿಗೆ ಜನಭಾಷೆಯೇ ಮೂಲಾಧಾರ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಭಾಷಿಕ ಆಕೃತಿಗಳಿಲ್ಲದ ಕಾಲದಲ್ಲಿ ಆಡುಭಾಷೆಯ ಅಭಿವ್ಯಕ್ತಿಯನ್ನೇ ನೆಚ್ಚಿಕೊಂಡು ಸಂವಹನ ಸಾಧ್ಯವಾಗಿಸಿಕೊಂಡ ಹೆಗ್ಗಳಿಕೆ ಜನಪದ ಕಲೆಗಳದ್ದು. ಮಾತು ಕಲೆಯಾಗಿ ಮಾರ್ಪಟ್ಟು ಜನರನ್ನು ರಂಜಿಸಿದ ಅತ್ಯಂತ ವಿರಳ ನಿದರ್ಶನಗಳಾಗಿ ಜನಪದ ಕಲೆಗಳು ಮುಖ್ಯವೆನಿಸುತ್ತವೆ. ಈ ಕಾರಣಕ್ಕಾಗಿಯೇ ಅವು ಆರಂಭಿಕಕಾಲದ ನಿಜವಾದ ಸಮೂಹ ಮಾಧ್ಯಮಗಳಾಗಿ ಜನರಿಗೆ ಆಪ್ತವಾಗಿದ್ದವು. ಒಂದೊಂದು ಭಾಷೆಗೂ ಅದು ಅಸ್ತಿತ್ವದಲ್ಲಿರುವ ಪ್ರಾದೇಶಿಕ ಅಸ್ಮಿತೆಯ ಕರುಳಬಳ್ಳಿಯ ಸಂಬಂಧವಿರುತ್ತದೆ. ಈ ಸಂಬಂಧದ ಕಾರಣಕ್ಕಾಗಿಯೇ ಪ್ರದೇಶವೊಂದು ಪ್ರತಿನಿಧಿಸುವ ಭಾಷೆ ಉಳಿದವುಗಳಿಗಿಂತ ಭಿನ್ನವೆನಿಸುತ್ತದೆ. ಇಂಥದ್ದೊಂದು ಭಿನ್ನ ಭಾಷೆಯ ಮೂಲಕ ಸಂವಹನ ಸಾಧಿಸಿಕೊಳ್ಳುವ ಜನಪದ ಕಲೆಯು ಸಮೂಹ ಮಾಧ್ಯಮವಾಗಿ ಪಾತ್ರವನ್ನು ನಿರ್ವಹಿಸಲಾರಂಭಿಸುತ್ತದೆ. ಜನಪದ ಕಲೆಗಳ ಮೂಲವನ್ನು ಕೆದಕಲು ಹೋಗುವ ಬಹುತೇಕ ಸಂಶೋಧಕರು ಕಂಡುಕೊಳ್ಳುವ ಸತ್ಯವೇನೆಂದರೆ ಅವೆಲ್ಲವುಗಳೂ ಅನಾಮಿಕ ವ್ಯಕ್ತಿತ್ವದ ಕೊಡುಗೆಗಳು ಎಂಬುದು. ಈ ಅನಾಮಿಕ ಪ್ರತಿಭೆಗಳು ಸಾಮಾನ್ಯ ಜನರೇ ಆಗಿರುವುದು ಜನಪದ ಮಾಧ್ಯಮಗಳ ಸಂವಹನ ವೈಶಿಷ್ಟ್ಯ.

ಜನಪದ ಸಾಹಿತ್ಯವಾಗಲೀ, ಜನಪದ ಕಲೆಗಳಾಗಲೀ ಇವು ತತ್‌ಕ್ಷಣದ ಅಭಿವ್ಯಕ್ತಿ ಪ್ರಕಾರಗಳಾಗಿ ಚಾಲ್ತಿಗೆ ಬಂದವು. ಜನರೊಳಗೇ ಅಂತರ್ಗತವಾದ ಸಹಜ ಅಭಿವ್ಯಕ್ತಿಯ ಪ್ರವೃತ್ತಿ ಇಂಥದ್ದೊಂದು ಪ್ರಕಾರಗಳ ಆವಿರ್ಭಾವಕ್ಕೆ ಕಾರಣವಾಗಿರಬೇಕು. ಸಂಗ್ರಹಿತ ಮುದ್ರಿತ ಪ್ರತಿಗಳಲ್ಲಿ ನಾವು ಈಗ ಓದುವ ಜನಪದ ಸಾಹಿತ್ಯ, ಸಾಂದರ್ಭಿಕವಾಗಿ ಗಮನಿಸುವಂಥ ಜನಪದ ಕಲಾಪ್ರದರ್ಶನದ ಸಂದರ್ಭಗಳಲ್ಲೆಲ್ಲಾ ವೇದ್ಯವಾಗುವ ಸಂಗತಿ ಏನೆಂದರೆ ಈ ಅನಾಮಿಕ ಪ್ರತಿಭೆಗಳ ವೈವಿಧ್ಯಮಯ ಭಾಷಾ ಸೊಗಡು. ಕಂಡುಕೊಂಡ ಅಭಿವ್ಯಕ್ತಿಯ ಭಾಷಿಕ ಆಕೃತಿಯ ಕಾರಣಕ್ಕಾಗಿಯೇ ಆಯಾ ಪ್ರದೇಶಗಳ ಜನಪದೀಯ ಸಾಹಿತ್ಯ-ಕಲೆ ಗಮನ ಸೆಳೆಯುತ್ತವೆ. ಕೇವಲ ಮನರಂಜನೆಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳದೇ ನೈತಿಕ-ಧಾರ್ಮಿಕ-ಸಾಮಾಜಿಕ ಆಶಯಗಳ ಪ್ರತಿನಿಧೀಕರಣದ ಹೊಣೆಯನ್ನು ಅವು ನಿಭಾಯಿಸಿವೆ.

ನಿರ್ದಿಷ್ಟ ಭಾಷೆಯ ಮೂಲಕ ಕಟ್ಟಿಕೊಟ್ಟ ರೂಪಕಗಳು, ಅಕ್ಷರಗಳು, ದೃಶ್ಯ ವೈಶಿಷ್ಟ್ಯಗಳು ಆ ಭಾಷೆಯನ್ನಾಡುವವರ ಪ್ರಜ್ಞೆಯನ್ನು ರೂಪಿಸಿವೆ. ಶುದ್ಧ ಬದುಕಿನ ಕಡೆಗೆ ಮನುಷ್ಯ ಸಂವೇದನೆಗಳನ್ನು ಕೊಂಡಯ್ಯೊಯ್ಯುವ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿವೆ. ಮನುಷ್ಯರೊಳಗೇ ಪ್ರಾಮಾಣಿಕತೆಯ ಪ್ರಜ್ಞೆಯನ್ನು ನೆಲೆಗೊಳಿಸುವ ನೈತಿಕ ಕೆಲಸವನ್ನು ನಿರ್ವಹಿಸಿವೆ. ಈ ಸಂದರ್ಭದಲ್ಲೆಲ್ಲಾ ಬದುಕಿನ ವಿವಿಧ ಬಗೆಯ ಲಯಗಳು ಭಾಷೆಯನ್ನು ರೂಪಿಸಿವೆ. ಅದೇ ಭಾಷೆಯ ಮೂಲಕವೇ ಬದುಕನ್ನು ಸಂಸ್ಕರಿಸುವ ಪಾತ್ರವನ್ನು ನಿರ್ವಹಿಸಿವೆ. ಜನಪದ ಗೀತೆಯೊಂದು ಅನುಭವ ಮತ್ತು

ಕಲ್ಪನೆಯ ವಿವರಗಳನ್ನು ಪ್ರಸ್ತಾಪಿಸುತ್ತಾ ತಾತ್ವಿಕ, ನೈತಿಕ ನಿಲುವನ್ನು ಪ್ರತಿಪಾದಿಸುತ್ತದೆ. ಜನಪದ ಕಥೆಯೊಂದು ಬದುಕಿನ ವಿವರಗಳನ್ನು ಮುಂದಿಟ್ಟು ನಮ್ಮೊಳಗಿನ ಸಂವೇದನೆಗಳನ್ನು ಜಾಗೃತಗೊಳಿಸಿ ಸಂಸ್ಕಾರಕ್ಕೆ ಒಳಪಡಿಸುವ ಕೆಲಸವನ್ನು ನಿರ್ವಹಿಸುತ್ತದೆ. ಜನಪದ ಪ್ರದರ್ಶನ ಕೆಲೆಯೂ ಇಂಥದ್ದೇ ಮೂಲಕೃತಿಗಳನ್ನು ಆಧರಿಸಿ ಜನರಿಗೆ ಆಪ್ತವಾಗುತ್ತದೆ. ಇಲ್ಲೆಲ್ಲಾ ಬದುಕು–ಭಾಷೆ–ಬೌದ್ಧಿಕತೆಯ ಅನುಸಂಧಾನಾತ್ಮಕ ಸ್ವರೂಪದ್ದೇ ಮುಖ್ಯಪಾತ್ರ. ಬದುಕನ್ನು ಬಿಟ್ಟು ಭಾಷೆ ಗುರುತಿಸಿಕೊಳ್ಳಲಾಗದು. ಭಾಷೆಯನ್ನು ಬಿಟ್ಟು ಬೌದ್ಧಿಕವಾಗಿ ಗುರುತಿಸಿಕೊಳ್ಳಲಾಗದು. ಇವುಗಳ ನಡುವಿನ ವ್ಯವಸ್ಥಿತ ಸಂಯೋಜನೆ ಇದ್ದಾಗ ಮಾತ್ರ ನಿರ್ದಿಷ್ಟ ಮಾಧ್ಯಮದ ಮೂಲಕ ಕಾಣ್ಕೆಗಳು ಲಭ್ಯವಾಗುತ್ತವೆ. ಈ ಅಂತರ್ಗತ ಸಂಯೋಜನೆಯ ಮೂಲಕ ಅಂಥ ಕಾಣ್ಕೆಗಳನ್ನು ನೀಡಿದ ಹೆಗ್ಗಳಿಕೆ ಜನಪದ ಮಾಧ್ಯಮಗಳದ್ದು.

**ಜನಪದ ಸಂವಹನ : ಬದುಕು, ಭಾಷೆ, ಬೌದ್ಧಿಕತೆಯ ಸಂಯೋಜನೆ**

ಬದುಕು ಭಾಷೆಯಲ್ಲಿ ಮತ್ತು ಭಾಷೆಯ ಮುಖಾಂತರ ಸಂವಹನಗೊಳ್ಳುವ ವಿವಿಧ ಆಕೃತಿಗಳಲ್ಲಿ ಸಮ್ಮಿಳಿತವಾಗಿ ಒಟ್ಟು ಸಂವಹನ ಮೌಲಿಕವಾದ ವಿಶೇಷ ಗುಣಲಕ್ಷಣ ಜನಪದ ಮಾಧ್ಯಮಗಳದ್ದು. ಜನಪದ ಸಂವಹನ ಬಾಯಿಂದ ಬಾಯಿಗೆ ಹರಿದು, ಒಂದು ಕಾಲದಿಂದ ಮತ್ತೊಂದು ಕಾಲಕ್ಕೆ ಜಿಗಿದು ಜನಮಾನಸದೊಳಗೆ ಶಾಶ್ವತವಾಗಿ ಉಳಿಯುವ ಅವುಗಳ ಪ್ರಭಾವಶಕ್ತಿಯೇ ಅಂಥದ್ದು. ಸಾಮಾನ್ಯ ವ್ಯಕ್ತಿಯಿಂದ ಹೊರಡುವ ಅಸಮಾನ್ಯ ವಿಚಾರಗಳ ಭಾಷಿಕ ಸಂವಹನಕ್ಕೆ ಅಕ್ಷರಗಳ ಸ್ಪರ್ಶ ದಕ್ಕಿದಾಗ ಅದು ಮುದ್ರಿತ ದಾಖಲೆಯಗಿ ಪರಿಗಣಿಸಲ್ಪಡುತ್ತದೆ. ಮಾತನಾಡಿದ್ದು ಅಭಿವ್ಯಕ್ತಗೊಂಡ ತತ್‌ಕ್ಷಣವೇ ಮತ್ತೊಬ್ಬನ ಗ್ರಹಿಕೆಗೆಟುಕಿ ಇನ್ನೊಬ್ಬನೆಡೆಗೆ, ನಂತರದ ಅವಧಿಯಲ್ಲಿ ಇನ್ನೊಂದು ಕಾಲದ ಪೀಳಿಗೆಯ ಕಡೆಗೆ ಮರುಸಂವಹನಗೊಳ್ಳುವ ಪರಿಯೇ ಬೆರಗುಗೊಳಿಸುವಂಥದ್ದು. ವಚನ ಸಾಹಿತ್ಯದ ಶ್ರೇಷ್ಠತೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 12ನೇ ಶತಮಾನದಲ್ಲಿ ಜನಭಾಷೆಯ ಮೂಲಕ ಸಂವಹಿಸಿಕೊಂಡ ವೈಚಾರಿಕ ಆಕೃತಿಗಳು ಇಂದಿನ ಆಧುನಿಕ ಸಂದರ್ಭದಲ್ಲೂ ಸಮಕಾಲೀನ ಎಂದೆನಿಸುತ್ತಿರುವುದಕ್ಕೆ ಅವುಗಳ 'ಭಾಷಿಕ' ಅಸ್ಮಿತೆಯೇ ಕಾರಣ. ಜನಪದ ಹಾಡು, ಕಥೆ, ಪ್ರದರ್ಶನ ಕಲೆಗಳನ್ನು ಮತ್ತು ವಚನಸಾಹಿತ್ಯವನ್ನು ಪ್ರತ್ಯೇಕವಾಗಿ ನೋಡಿದರೆ ಇವುಗಳ ಭಾಷಿಕ ಅನನ್ಯತೆ ಮನವರಿಕೆಯಾಗುತ್ತದೆ. ಹಿಂದೊಮ್ಮೆ ಮಾತಿನ ಮುಖಾಂತರ ಸಂವಹನಗೊಂಡ ವೈಚಾರಿಕ ಆಶಯಗಳು ತದನಂತರ ಅಕ್ಷರದ ಸ್ಪರ್ಶ ಪಡೆದು ಈ ಹೊತ್ತಿಗೂ ಸಮಕಾಲೀನ ಎಂದೆನಿಸುವ ಅಧ್ಯಯನಯೋಗ್ಯ ಕಲಾಕೃತಿಗಳಾಗಿ ವಚನಗಳು ಪ್ರಾಮುಖ್ಯತೆ ಪಡೆದಿವೆ. ಭಾಷೆ, ವಚನ – ಕನ್ನಡದ ಈ ಪದಗಳೇ ಮನುಷ್ಯ ಬದುಕಿಗೆ ಇರಬೇಕಾದ ಕನಿಷ್ಠ ಬದ್ಧತೆಯನ್ನು ನಿರೂಪಿಸುವ ಅಕ್ಷರಾಕೃತಿಗಳಾಗಿವೆ. ಭಾಷೆ ಕೊಡುವುದು, ವಚನ ನೀಡುವುದು ಎಂದರೆ ಕನ್ನಡದಲ್ಲಿ ಹೇಳಿದ್ದಕ್ಕೆ ಬದ್ಧನಾಗಿರುವುದು ಎಂದರ್ಥ. ನಡೆ–ನುಡಿಗಳಲ್ಲಿ ಒಂದೇ ಆಗಿದ್ದ ಅನನ್ಯ ವ್ಯಕ್ತಿತ್ವದವರಾಗಿದ್ದ ವಚನಕಾರರು ತಮ್ಮ 'ವಚನ' ಮಾಧ್ಯಮಗಳ ಮೂಲಕ ಕಟ್ಟಿಕೊಟ್ಟಿದ್ದು ಬದುಕನ್ನು ಸಂಸ್ಕರಿಸುವಂಥ ಮೌಲಿಕ ಆಶಯಗಳನ್ನು. ನಡೆಯು ಬದುಕನ್ನು ಪ್ರತಿನಿಧಿಸಿದರೆ, ನುಡಿಯು ಭಾಷೆಯನ್ನು ಪ್ರತಿನಿಧಿಸುತ್ತದೆ. ಬದುಕು ಮತ್ತು ಭಾಷೆ ಒಂದಾಗಿ ಮೌಲಿಕತೆಯನ್ನು ಪ್ರತಿಧ್ವನಿಸುವ ವಿಸ್ಮಯ ಜನಪದ ಪ್ರಕಾರಗಳದ್ದು. ಈ ಬಗೆಯ ಒಟ್ಟಂದದ ಸಂಯೋಜನಾತ್ಮಕ ಹೆಗ್ಗುರುತುಗಳನ್ನು ಉಳಿದ ಮಾಧ್ಯಮಗಳೂ ಕಾಯ್ದುಕೊಳ್ಳಬಹುದು. ಉಳಿದ ಮಾಧ್ಯಮಗಳಿಗೆ ಮಾದರಿಯಾಗುವಷ್ಟು ಜನಪದ ಮಾಧ್ಯಮ ಪ್ರಕಾರಗಳು ಪ್ರಭಾವಿಯಾಗಿವೆ.

ಪ್ರಾದೇಶಿಕತೆ ಮತ್ತು ಭಾಷಿಕವಾಗಿ ಜನಪದ ಮಾಧ್ಯಮಗಳನ್ನು ವಿಂಗಡಿಸಬಹುದು. ವಿಶ್ವವನ್ನು ಪರಿಗಣನೆಗೆ ತೆಗೆದುಕೊಂಡರೆ ವಿವಿಧ ದೇಶಗಳ ಭಾಷಾ ವೈವಿಧ್ಯತೆಯ ದೃಷ್ಟಿಯಿಂದ ತರಹೇವಾರಿ ಜನಪದ ಪ್ರಕಾರಗಳು ಜನವಲಯದಲ್ಲಿ ಪ್ರಚುರವಾಗಿರುತ್ತವೆ. ಭಾರತದಂತಹ ವೈವಿಧ್ಯಮಯ ಸಂಸ್ಕೃತಿಯುಳ್ಳ ದೇಶದಲ್ಲಂತೂ ಜನಪದ ಮಾಧ್ಯಮಗಳು ವ್ಯಾಪಕವಾಗಿ ವೈವಿಧ್ಯಮಯ ಸ್ವರೂಪದೊಂದಿಗೇ ಗುರುತಿಸಿಕೊಂಡಿವೆ. ಒಂದೊಂದು ರಾಜ್ಯ, ಆ ರಾಜ್ಯದೊಳಗಿರುವ ಪ್ರದೇಶವಾರು ಭಾಷೆಗಳಿಗೆ ತಕ್ಕಂತೆ ಅಲ್ಲಿಯ ಭಾಷಿಕ ಸಂಸ್ಕೃತಿಗಳಿಗೆ ತಕ್ಕಂತೆ ಜನಪದ ಮಾಧ್ಯಮದ ಪ್ರಕಾರಗಳು ಹುಟ್ಟಿಕೊಂಡಿವೆ. ನಮ್ಮ ಜನಪದರ ಹಲವು ಕಥನಗಳು, ನಿರೂಪಣೆಗಳು ಪುರಾಣಗಳನ್ನು ಅವಲಂಬಿಸಿವೆ. ಅಥವಾ ಅವುಗಳ ಪ್ರಭಾವಳಿಯಿಂದ ಪ್ರೇರಿತಗೊಂಡು ಅಭಿವ್ಯಕ್ತಗೊಂಡಿವೆ. ವರ್ತಮಾನದ ಬದುಕನ್ನು ವಿಶ್ಲೇಷಿಸಲು ಬಳಸಲ್ಪಟ್ಟ ಕಥನ, ಗೀತೆ, ಪ್ರದರ್ಶನ ಕಲೆಗಳೆಲ್ಲವೂ ಒಳಿತು-ಕೆಡಕುಗಳ ಬಿಂಬಿಸುವಿಕೆಗಾಗಿ ದೈವದ ಆಧಾರವನ್ನು ಪಡೆದುಕೊಂಡಿವೆ. ಕರ್ನಾಟಕದ ಒಳಗೇ ಹತ್ತು-ಹಲವು ಜನಪದೀಯ ಪ್ರಕಾರಗಳನ್ನು ಗುರುತಿಸಬಹುದು.

ಉತ್ತರ ಕರ್ನಾಟಕದ ಜನಪದ ಮಾಧ್ಯಮಗಳ ಪ್ರಕಾರಗಳಿಗೂ ದಕ್ಷಿಣ ಕರ್ನಾಟಕದ ಜನಪದ ಪ್ರಕಾರಗಳಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸುವಾಗ ಪರಿಗಣಿತವಾಗುವ ಪ್ರಮುಖ ಅಂಶ ಭಾಷೆಯೇ ಆಗಿದೆ. ಅಭಿವ್ಯಕ್ತಿಯ ಕ್ರಮದಲ್ಲಿ ವ್ಯತ್ಯಾಸಗಳನ್ನು ಪ್ರಸ್ತಾಪಿಸುವಾಗ ಭಾಷೆಯ ಅಂಶ ಮುಖ್ಯವಾಗಿ ಪರಿಗಣಿಸಲ್ಪಡುತ್ತದೆ. ಭಿನ್ನ ಭಾಷೆ ಮತ್ತು ಅದರೊಂದಿಗೆ ತಳುಕು ಹಾಕಿಕೊಂಡಿರುವ ಬದುಕು, ಸಂಸ್ಕೃತಿ ಜನಪದೀಯ ಮಾಧ್ಯಮ ಪ್ರಕಾರಗಳನ್ನು ರೂಪಿಸುವಲ್ಲಿ ಗಮನಾರ್ಹ ಕೊಡುಗೆ ನೀಡುತ್ತವೆ. ಉತ್ತರ ಕರ್ನಾಟಕದಲ್ಲಿ ಬಯಲಾಟ ವ್ಯಾಪಕವಾಗಿ ಮನ್ನಣೆಯನ್ನು ಗಳಿಸಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಯಕ್ಷಗಾನವೇ ಹಲವರಿಗೆ ಅಚ್ಚುಮೆಚ್ಚು. ಇವುಗಳಲ್ಲಿ ಯಾವುದು ಹೆಚ್ಚು, ಯಾವುದು ಕಡಿಮೆ ಎಂಬ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಆಯಾ ಪ್ರದೇಶಗಳಲ್ಲಿರುವ ಜನರು ಹೊಂದಿರುವ ಬದುಕು, ಒಪ್ಪಿಕೊಂಡ ಮೌಲ್ಯಗಳು, ಅವುಗಳನ್ನು ಒಳಗೊಂಡ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯಲ್ಲಿ ಜನಪದೀಯ ಮಾಧ್ಯಮಗಳು ಅಸ್ತಿತ್ವವನ್ನು ಕಂಡುಕೊಳ್ಳುತ್ತವೆ. ಜನಬಳಕೆಯ ಪ್ರೀತಿ ಇರುವವರೆಗೂ ಅವುಗಳ ಪ್ರಭಾವಕ್ಕೆ ಯಾವತ್ತೂ ಧಕ್ಕೆಯಾಗುವುದಿಲ್ಲ. ಜನರೊಂದಿಗೆ ಆಪ್ತತೆಯನ್ನು ಕಳೆದುಕೊಂಡ ಕ್ಷಣದಿಂದ ಅವುಗಳು ಕ್ರಮೇಣ ಹಿನ್ನೆಲೆಗೆ ಸರಿಯಲಾರಂಭಿಸುತ್ತವೆ. ಬದುಕಿನ ಗತಿಶೀಲತೆಗೆ ತಕ್ಕಂತೆ ಬದಲಾದ ಮೌಲ್ಯಗಳು, ಬದಲಾದ ವ್ಯವಸ್ಥೆಯ ಕಾರಣಗಳಿಂದಲೂ ನಿರ್ದಿಷ್ಟ ಜನಪದ ಮಾಧ್ಯಮಗಳು ಪ್ರಾಮುಖ್ಯತೆ ಕಳೆದುಕೊಳ್ಳಬಹುದು. ಹೀಗಾಗಿ ಜನಪದ ಮಾಧ್ಯಮಗಳು ಬದುಕು-ಭಾಷೆ-ಸಂಸ್ಕೃತಿಯ ಪರಸ್ಪರ ಅನುಸಂಧಾನಾತ್ಮಕ ಆಧಾರವನ್ನು ಪಡೆದೇ ಜೀವಂತಿಕೆಯನ್ನು ಉಳಿಸಿಕೊಂಡಿರುತ್ತವೆ.

ಈ ಬಗೆಯ ಅನುಸಂಧಾನ ನಂತರ ಹುಟ್ಟಿಕೊಂಡ ಮಾಧ್ಯಮಗಳಿಗೂ ಅನ್ವಯಿಸುತ್ತದಾ ? ಇಂಥದ್ದೊಂದು ಪ್ರಶ್ನೆಯೊಂದಿಗೆ ಪರಿಶೀಲಿಸಿದಾಗ ಅನ್ವಯಿಸುವಿಕೆಯ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಈ ಒಟ್ಟಂದದ ಅನುಸಂಧಾನ ನಂತರದ ಮಾಧ್ಯಮಗಳಿಂದ ಸಾಧ್ಯವಾಗದಿದ್ದರೆ ಅವುಗಳೂ ನಿರಂತರತೆಯನ್ನು ಕಾಯ್ದುಕೊಳ್ಳುವುದು ದುಸ್ತರವಾಗುತ್ತದೆ. ಜನಬಳಕೆಯ ಸ್ಪರ್ಶವನ್ನು ಕಳೆದುಕೊಂಡ ಭಾಷೆ ಬಹುಬೇಗ ಅಂತ್ಯಕಾಣುವ ಹಾಗೆಯೇ ಜನಮನ್ನಣೆಯ ಬಲವಿಲ್ಲದೇ ಮಾಧ್ಯಮಗಳು ನಿರಂತರ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಹೊಸ ಮಾಧ್ಯಮದ ಆವಿರ್ಭಾವವೂ ಬದಲಾದ ಬದುಕು, ಭಾಷೆಯ ಆಧಾರವನ್ನು ಪಡೆದೇ ಆಗುತ್ತದೆ. ಪ್ರತಿಕಾಲಘಟ್ಟದಲ್ಲಿಯೂ ಹುಟ್ಟಿಕೊಳ್ಳುವ

ನವಮಾಧ್ಯಮಗಳು ಕ್ರಮೇಣ ಬದುಕಿನ ಭಾಗವಾಗುವುದು ಈ ನೆಲೆಯಲ್ಲಿಯೇ. ಪ್ರತಿಯೊಂದು ಹೊಸ ಮಾಧ್ಯಮವೂ ಹಿಂದಿನ ಮಾಧ್ಯಮಗಳ ನೆರವನ್ನು ಪಡೆದುಕೊಂಡೇ ಮುಂದಡಿಯಿಡಬೇಕಾಗುತ್ತದೆ. ಎಷ್ಟು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ಪ್ರಯತ್ನಿಸಿದರೂ ಗತದ ಮೌಲಿಕ ಬೆಂಬಲವನ್ನು ಜೊತೆಗಿಟ್ಟುಕೊಂಡೇ ಪ್ರಭಾವವನ್ನು ನೆಲೆಗೊಳಿಸಿಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ.

**ವಿವಿಧ ಸಮೂಹ ಮಾಧ್ಯಮಗಳು**

ಮಾಧ್ಯಮ ಜಗತ್ತು ಹಿಂದೆಂದಿಗಿಂತಲೂ ಇಂದು ತನ್ನ ಪ್ರಭಾವೀ ಸಾಧ್ಯತೆಗಳನ್ನು ವ್ಯಾಪಕವಾಗಿ ವಿಸ್ತರಿಸಿಕೊಂಡಿದೆ. ತಂತ್ರಜ್ಞಾನದ ಆವಿಷ್ಕಾರ ಮತ್ತು ಅದಕ್ಕನುಗುಣವಾಗಿ ಅನ್ವಯಿಸಿಕೊಂಡು ಪ್ರಯೋಜನ ಪಡೆಯುವ ಉತ್ಸಾಹ ಇದಕ್ಕೆ ಕಾರಣ. ಪತ್ರಿಕೆ, ರೇಡಿಯೋ, ಟೆಲಿವಿಷನ್, ಸಿನಿಮಾ, ಪುಸ್ತಕ – ಇವಷ್ಟಕ್ಕೇ ಮಾತ್ರ ಮಾಧ್ಯಮ ವಲಯ ತನ್ನನ್ನು ಸೀಮಿತಗೊಳಿಸಿಕೊಂಡಿಲ್ಲ. ಇವುಗಳೊಂದಿಗೆ ಅಂತರ್ಜಾಲ ಮಾಧ್ಯಮವೂ ಸೇರಿಕೊಂಡಿದೆ. ಇದರ ಸೇರ್ಪಡೆಯಿಂದ ಇಡೀ ಸಂವಹನ ಕ್ರಮಕ್ಕೆ ವಿಭಿನ್ನ ಆಯಾಮ ದೊರಕಿದೆ. ಈ ಕಾರಣಕ್ಕಾಗಿಯೇ ಇಂದಿನ ಕಾಲವನ್ನು 'ಮಾಹಿತಿ ಯುಗ' (ಖಟಜಿಡಿಟಚಿಣಥಿ ಂಡಿ) ನೆಲೆಯಲ್ಲಿ ಗುರುತಿಸಲಾಗುತ್ತಿದೆ. ಇಡೀ ಮಾಧ್ಯಮ ರಂಗದ ವಿವಿಧ ಸಂವಹನ ವಲಯಗಳ ಸ್ವರೂಪವನ್ನೇ ಬದಲಾಯಿಸುವಷ್ಟರ ಮಟ್ಟಿಗೆ ಈ ಮಾಹಿತಿ ಯುಗದ ಪರಿಧಿಯಲ್ಲಿ ನಡೆಯುತ್ತಿರುವ ತಂತ್ರಜ್ಞಾನ ಆವಿಷ್ಕಾರದ ತೀವ್ರತೆಯಿದೆ. ಜಗತ್ತೇ ಹಳ್ಳಿಯಾದ, ಆ ಹಳ್ಳಿಯೇ ಜಗತ್ತಾದ ಕಾಲಘಟ್ಟವಿದು.

ಇಂಥದ್ದೊಂದು ವಿಶ್ವಗ್ರಾಮದ ನಕಾಶೆಯಲ್ಲಿ ಭಾರತ ಎಲ್ಲಿದೆ? ಮಾಹಿತಿ ಯುಗದ ಆಗುಹೋಗುಗಳಿಗೆ ಭಾರತ ಯಾವ ರೀತಿ ಸ್ಪಂದಿಸುತ್ತದೆ? ಇಡೀ ವಿಶ್ವವೇ ಗ್ರಾಮವಾಗಿ ಬದಲಾಗುವ ಪ್ರಕ್ರಿಯೆ ಭಾರತದ ಪರಿಧಿಯೊಳಗೆ ಮಹತ್ವದ ಬದಲಾವಣೆಗಳನ್ನು ನೆಲೆಗೊಳಿಸುವಲ್ಲಿ ಯಶಸ್ವಿಯಾಗಿದೆಯೇ? ಈ ವಿಶ್ವಗ್ರಾಮದಲ್ಲಿ ಭಾರತದ ಹಳ್ಳಿಗಳು ಯಾವ ಆದ್ಯತೆಯನ್ನು ಪಡೆಯುತ್ತಿವೆ? ವಿಶ್ವಗ್ರಾಮದ ಸಮಸ್ತ ಶಕ್ತಿಯ ಬೆಂಬಲದೊಂದಿಗೆ ಅವು ಮೈಕೊಡವಿಕೊಂಡು ಎದ್ದುನಿಲ್ಲಲು ಸಾಧ್ಯವಾಗುತ್ತಿದೆಯೇ? ಈ ವಿಶ್ವಗ್ರಾಮದಲ್ಲಿ ಸಮೂಹ ಮಾಧ್ಯಮಗಳು ಹೇಗೆ ಕಾರ್ಯೋನ್ಮುಖವಾಗಿವೆ? ಅವುಗಳ ಧ್ಯೇಯಘೋಷಗಳಾದ ಮಾಹಿತಿ, ಶಿಕ್ಷಣ ಮತ್ತು ಮನೋರಂಜನೆ ಯಾವ ಬಗೆಯಲ್ಲಿ ಆದ್ಯತೆಯನ್ನು ಪಡೆಯುತ್ತಿವೆ?... ಈ ಪ್ರಶ್ನೆಗಳನ್ನು ಸಮಗ್ರ ನೆಲೆಯಲ್ಲಿ ನಮ್ಮ ಮಾಧ್ಯಮ ಲೋಕ ಕಾಡಿಸಿಕೊಂಡಂತೆ ಕಾಣುತ್ತಿಲ್ಲ.

**ಪ್ರಭಾವ ಮತ್ತು ಹೊಣೆಗಾರಿಕೆ**

ಒಂದೊಂದು ಕಾಲಘಟ್ಟದಲ್ಲೂ ಒಂದೊಂದು ಮಾಧ್ಯಮವು ಉಳಿದೆಲ್ಲವುಗಳಿಗಿಂತ ಹೆಚ್ಚಿನ ಪ್ರಭಾವವನ್ನು ತನ್ನದಾಗಿಸಿಕೊಂಡಿರುತ್ತದೆ. ದಿನಪತ್ರಿಕೆಗಳು ಜನಪ್ರಿಯತೆಯ ಮನ್ನಣೆಯನ್ನು ಪಡೆದ ಕಾಲದಲ್ಲಿ ರೇಡಿಯೋ, ರೇಡಿಯೋ ಅಸ್ತಿತ್ವ ಉಳಿಸಿಕೊಂಡ ಕಾಲದಲ್ಲಿಯೇ ಟೆಲಿವಿಷನ್ ಎಂಬ ಮಾಯಾಪೆಟ್ಟಿಗೆ ಜನರನ್ನು ಬಹುವಾಗಿ ಆವರಿಸಿಕೊಂಡದ್ದು,

ಟೆಲಿವಿಷನ್ ವ್ಯಾಪಕ ಪ್ರಭಾವವನ್ನು ಉಳಿಸಿಕೊಂಡಿರುವಾಗಲೇ ಕಂಪ್ಯೂಟರ್ ತಂತ್ರಜ್ಞಾನದ ಬಹುಮುಖೀ ಸಾಧ್ಯತೆಗಳು ಗೋಚರಿಸುವುದು... ಇವೆಲ್ಲವೂ ಪ್ರತಿಯೊಂದು ಮಾಧ್ಯಮದ ಸಾಂದರ್ಭಿಕ ಪ್ರಭಾವಳಿಯನ್ನು ಸ್ಪಷ್ಟಪಡಿಸುತ್ತವೆ. ಇಂಥದ್ದೊಂದು ಪ್ರಭಾವೀ ಗುಣವಿರುವಾಗಲೇ ಸಾಮಾಜಿಕವಾಗಿ ಅಮೂಲ್ಯ ಎಂದೆನಿಸುವ ಕಾರ್ಯವನ್ನು ನಿಭಾಯಿಸುವುದರಲ್ಲಿಯೇ ಅವುಗಳ ಹೆಗ್ಗಳಿಕೆ ಇರುತ್ತದೆ. ಈ ಬಗೆಯ ಸಾಮಾಜಿಕ ಹೊಣೆಗಾರಿಕೆಯೇ ಮಾಧ್ಯಮಗಳಿಗೆ ಚರಿತ್ರೆಯಲ್ಲಿ ಭಿನ್ನ ಸ್ಥಾನವನ್ನು ಕಲ್ಪಿಸಿಕೊಡುತ್ತದೆ. ಶಿಕ್ಷಣವು ಈ ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸಲು ಮಾಧ್ಯಮಗಳಿಗೆ ಅನುವು ಮಾಡಿಕೊಡುವ ಮಹತ್ವದ ಜ್ಞಾನಶಿಸ್ತು.

ಮಾಹಿತಿ, ಶಿಕ್ಷಣ ಮತ್ತು ಮನರಂಜನೆ – ಇವು ಮಾಧ್ಯಮವಲಯದ ಧ್ಯೇಯಘೋಷಗಳಷ್ಟೇ ಅಲ್ಲ. ಇವು ಅವುಗಳ ಮೂರು ಆದ್ಯತೆಗಳು. ಸಕಾರಾತ್ಮಕ ಬದಲಾವಣೆಯನ್ನು ನೆಲೆಗೊಳಿಸುವ ಪೂರಕ ಚಾಲಕ ಶಕ್ತಿಗಳು. ಸಾಮಾಜಿಕ ಬದಲಾವಣೆಯ ಚಲನೆ ಈ ಮೂರು ಧ್ಯೇಯಘೋಷ ಅಥವಾ ಆಧಾರಪ್ರಕ್ರಿಯೆಗಳ ನೆಲೆಯಲ್ಲಿಯೇ ನಡೆಯುತ್ತದೆ. ಇಂಥದ್ದೊಂದು ಸಂಚಲನಾತ್ಮಕ ಸಂವಹನವು ಕ್ರಮಾನುಗತ ಬದಲಾವಣೆಯನ್ನು ನೆಲೆಗೊಳಿಸುತ್ತದೆ. ಬದಲಾವಣೆಯು ದಿಢೀರ್ ಸಾಧ್ಯವಾಗುವಂಥದ್ದಲ್ಲ. ವಿವಿಧ ಪ್ರಭಾವಗಳ ಫಲಶ್ರುತಿಗಳಿಂದ ಅದು ಕ್ರಮೇಣ ಸಾಧ್ಯವಾಗುವಂಥ ಪ್ರಕ್ರಿಯೆ. ಇದನ್ನು ಸಾಧ್ಯವಾಗಿಸುವಂಥ ಅಂಶಗಳಲ್ಲಿ ಸಮೂಹ ಸಂವಹನವೂ ಒಂದು. ಪತ್ರಿಕೆ, ರೇಡಿಯೋ, ಟೆಲಿವಿಷನ್, ಸಿನಿಮಾ, ಪುಸ್ತಕ ಮತ್ತು ಅಂತರ್ಜಾಲ ಮಾಧ್ಯಮ ಸಮೂಹವನ್ನು ತಲುಪುವುದು ಭಾಷೆಯ ಮುಖಾಂತರವೇ. ಭಾಷೆಯ ನೆರವಿಲ್ಲದೇ ಪರಿಣಾಮಕಾರಿಯಾದ ಮತ್ತು ವಿಸ್ತೃತ ಪ್ರಭಾವನ್ನು ನೆಲೆಗೊಳಿಸುವಂಥ ಸಂವಹನ ಸಾಧ್ಯವಾಗುವುದೇ ಇಲ್ಲ. ಅಷ್ಟರ ಮಟ್ಟಿಗೆ ಭಾಷೆಯದು ಸಮೂಹ ಸಂವಹನದಲ್ಲಿ ನಿರ್ಣಾಯಕ ಪಾತ್ರ.

ಸಮೂಹ ಸಂವಹನ ಮಾಧ್ಯಮಗಳ ಭಾಷೆ ಆಯಾ ಕಾಲಘಟ್ಟಗಳ ಅಗತ್ಯಗಳಿಗೆ ತಕ್ಕಂತೆ ಬದಲಾಗುತ್ತಿರುತ್ತದೆ. ಸಮೂಹ ಮಾಧ್ಯಮಗಳು ಜನರ ತತ್‌ಕ್ಷಣದ ಮನ್ನಣೆಗೆ ಪಾತ್ರವಾಗಿ ತಮ್ಮನ್ನು ತಾವು ಜೀವಂತವಾಗಿಸಿಕೊಳ್ಳುವ ಅನಿವಾರ್ಯತೆಯನ್ನು ಎದುರಿಸುತ್ತಿರುತ್ತವೆ. ಈ ಅನಿವಾರ್ಯತೆಯನ್ನು ಮನಗಂಡು ನಿರಂತರವಾಗಿ ಮನ್ನಣೆಯನ್ನು ಬಹುದಿನಗಳವರೆಗೆ ಕಾಯ್ದುಕೊಳ್ಳುವಾಗ ಮಾಧ್ಯಮ ಸಂಸ್ಥೆಗಳು ಭಾಷೆಯ ಕಡೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತವೆ. ಮಾಧ್ಯಮಗಳ ಅನೇಕ ಪ್ರಯೋಗಗಳು ಭಾಷೆಯನ್ನು ದೃಷ್ಟಿಯಲ್ಲಿರಿಸಿಕೊಂಡೇ ನಡೆಯುತ್ತವೆ.

**ಅಕ್ಷರ ಸಂವಹನದ ಭಾಷಾ ವೈಶಿಷ್ಟ್ಯ**

ಅಕ್ಷರಗಳಿಗಿರುವಷ್ಟು ಸಾರ್ವಕಾಲಿಕ ಮನ್ನಣೆ ಬೇರಾವ ಸಂವಹನ ಪ್ರಕಾರಗಳಿಗೂ ಇಲ್ಲ. ಆರಂಭದಿಂದಲೂ ಅಕ್ಷರ ಸಂಸ್ಕೃತಿ ಮನುಷ್ಯ ಬದುಕನ್ನು ಜ್ಞಾನದ ನೆಲೆಯಲ್ಲಿ ಉದ್ಧರಿಸುವ ಮಹತ್ವದ ಹೊಣೆಗಾರಿಕೆಯನ್ನು ನಿಭಾಯಿಸುತ್ತಲೇ ಬಂದಿದೆ. ಬೆಳೆವ ಕನಸುಗಳನ್ನಿರಿಸಿಕೊಂಡವರ ಜ್ಞಾನಾಭಿವೃದ್ಧಿಗೆ ಸಂವಾಹಕ ಶಕ್ತಿಯಾಗಿದೆ. ಅಜ್ಞಾನದ ಪ್ರಬಲ ಎದುರಾಳಿಯಾಗಿ ಗಮನಾರ್ಹ ಪಾತ್ರವನ್ನು ನಿರ್ವಹಿಸಿದೆ. ಮೌಢ್ಯದ ಜಾಡ್ಯ ಬೃಹದಾಕಾರವಾಗಿ ಬೆಳೆದ ಕಡೆಗೆಲ್ಲಾ ನಮ್ಮ ಅಕ್ಷರಗಳು ಸಮರ ಸಾರಿವೆ. ಮೌಢ್ಯಾಳುಗಳನ್ನು ಸದೆಬಡೆದು ಅಲ್ಲಿ ಜ್ಞಾನಸಾಮ್ರಾಜ್ಯವನ್ನು ಸ್ಥಾಪಿಸಿವೆ. ಅನಕ್ಷರಸ್ಥರನ್ನು

ಸ್ನೇಹಿತರಾಗಿಸಿಕೊಳ್ಳಲು ಪ್ರಯತ್ನಿಸಿವೆ. ಅಕ್ಷರಗಳ ಸ್ನೇಹಿತರಾಗುತ್ತಲೇ ಅವರು 'ಅನಕ್ಷರ ಕುಕ್ಷಿಗಳು' ಎಂಬ ಹಣೆಪಟ್ಟಿಯನ್ನು ಕಳಚಿಕೊಳ್ಳುತ್ತಿದ್ದರು.

ವೈಚಾರಿಕ ದೀಪ್ತಿಯನ್ನು ಬೆಳಗಲೂ ಅಕ್ಷರಗಳು ಬಳಕೆಯಾಗಿವೆ. ಶೋಷಣೆ, ದೌರ್ಜನ್ಯ ಹೆಚ್ಚಾದ ಕಡೆಗೆಲ್ಲಾ ಅಕ್ಷರ ಪ್ರಜ್ಞೆಯು ಪ್ರಜಾಪ್ರಭುತ್ವದ ಅಮೂಲ್ಯ ಪಾಠಗಳನ್ನು ಹೇಳಿಕೊಟ್ಟಿದೆ. ವಿವಿಧ ಕಾರಣಗಳಿಗಾಗಿ ನೊಂದ ಮನಸ್ಸುಗಳಿಗೆ ಸಾಂತ್ವನ ಹೇಳಿದೆ. ಬದುಕಿನ ಬಗ್ಗೆ ಆಸಕ್ತಿಯನ್ನೇ ಕಳೆದುಕೊಂಡು ಆತ್ಮಹತ್ಯೆಯ ಮಾರ್ಗದಲ್ಲಿದ್ದವರನ್ನು ತಡೆದು 'ಬದುಕಿನಲ್ಲಿ ಇವೆಲ್ಲಾ ಇದ್ದದ್ದೇ. ಇವೆಲ್ಲವುಗಳ ನಡುವೆಯೇ ಬದುಕಿ ಹಲವರು ಮಹಾತ್ಮರಾಗಿದ್ದಾರೆ' ಎಂಬುದನ್ನು ಮನಗಾಣಿಸಿ ಅವರೊಳಗೆ ಆಶಾವಾದದ ಮೊಳಕೆಯೊಡೆಸಿದೆ. ತಮ್ಮವರನ್ನು ಕಳೆದುಕೊಂಡ ನಿರ್ಗತಿಕರ ಕಣ್ಣೀರು ಒರೆಸಿದೆ. ಜಾತಿಯ ಕಾರಣಗಳನ್ನು ಮುಂದಿಟ್ಟು ಅನೇಕ ಜನರನ್ನು ಬೇರ್ಪಡಿಸುವ ಹುನ್ನಾರಗಳನ್ನು ಹೆಣೆದವರಿಗೆ ತಕ್ಕ ಉತ್ತರ ನೀಡಿದೆ. ಆ ಹುನ್ನಾರಗಳ ಕಾರಣಕ್ಕಾಗಿಯೇ ಹಲವು ಅವಕಾಶಗಳಿಂದ ವಂಚಿತರಾದ ಅಂಥ ಅನೇಕರಿಗಾಗಿ ಅಕ್ಷರಗಳು ಸ್ನೇಹದ ಬಾಗಿಲುಗಳನ್ನು ತೆರೆದೆವು. ಅಂತಹ ಬಾಗಿಲುಗಳ ಮೂಲಕ ಜ್ಞಾನದ ವಿವಿಧ ಮಜಲುಗಳನ್ನು ತಲುಪಿಕೊಂಡ ಅನೇಕರು ಅವಕಾಶಗಳನ್ನು ಪಡೆದುಕೊಳ್ಳುವಂತಾಯಿತು.

ಅಕ್ಷರಗಳು ವಿವಿಧ ಬರಹ ಪ್ರಕಾರಗಳ ಮೂಲಕ ಜನರನ್ನು ತಲುಪಿದ್ದು ವಿಶೇಷ. ಕತೆ, ಕವಿತೆ, ಲೇಖನ, ನುಡಿಚಿತ್ರ ಮತ್ತಿತರ ಬರಹ ಪ್ರಕಾರಗಳು ಜನರ ಬದುಕಿಗೆ ಬೇಕಾಗುವ ಹಲವು ಮಾರ್ಗದರ್ಶಿ ಸೂತ್ರಗಳನ್ನು ಕಟ್ಟಿಕೊಟ್ಟಿವೆ. ಪ್ರೀತಿ, ನಿಸರ್ಗ, ಮೌಲ್ಯ, ಸನ್ಮಾರ್ಗ, ವರ್ತಮಾನದ ಅತಿರೇಕಗಳು, ಅನಾವಶ್ಯಕವಾಗಿ ವಿಜೃಂಭಿಸುವ ಮನುಷ್ಯ ವರ್ತನೆಗಳು, ಅರ್ಥಹೀನವಾಗುವ ಮನುಷ್ಯ ಸಂಬಂಧಗಳು, ಹದಗೆಟ್ಟ ಸ್ಥಿತಿಗೆ ತಳ್ಳಲ್ಪಡುವ ಸಮಾಜದ ಸ್ವಾಸ್ಥ್ಯ ಸೇರಿದಂತೆ ಅನೇಕ ಅಂಶಗಳೆಡೆಗೆ ಓದುಗವಲಯವನ್ನು ಕವಿತೆಗಳು ಸೆಳೆದಿವೆ. ಕವಿ ಮನಸ್ಸುಗಳ ಆಶಯಗಳನ್ನು ಕಟ್ಟಿಕೊಟ್ಟು ಅವುಗಳು ಕಾಲ–ದೇಶಗಳಾಚೆ ಚರ್ಚೆಯಾಗುವುದಕ್ಕೆ ಪೂರಕವಾಗಿವೆ. 'ಏನಾದರೂ ಆಗು, ಮೊದಲು ಮಾನವನಾಗು' ಎಂಬಂತಹ ಸಾರ್ವಕಾಲಿಕ ತತ್ವಗಳನ್ನು ಕವಿತೆಗಳ ಕಟ್ಟಿಕೊಟ್ಟಿವೆ. ಕಾಲದ ಅಗತ್ಯಗಳನ್ನು ಮನಗಾಣಿಸಲು ಇತಿಹಾಸ ಮತ್ತು ವರ್ತಮಾನಗಳ ಬೆಂಬಲ ಪಡೆದು ರಚಿತವಾದ ಕಥೆಗಳೂ ಅಕ್ಷರ ಸಂಸ್ಕೃತಿಯಲ್ಲಿ ಭಿನ್ನ ಪಾತ್ರಗಳನ್ನು ನಿರ್ವಹಿಸಿವೆ. ಕಥಾಕಲ್ಪನೆಯ ಬಲದೊಂದಿಗೆ ಹೊಸ ಬಗೆಯ ಸಂವಹನವನ್ನು ಸಾಧಿಸಿವೆ. ವೈವಿಧ್ಯಮಯ ಆಶಯಗಳನ್ನು ಕಟ್ಟಿಕೊಡಲು ಕಾದಂಬರಿ ಪ್ರಕಾರ ಪೂರಕವಾಗಿದೆ. ಕೆಟ್ಟ ಮನಸುಗಳನ್ನು ಸೌಜನ್ಯಯುತ ಭಾಷೆಯಲ್ಲಿ ಕುಟುಕಲು ವಿಡಂಬನೆಯ ಬರಹಗಳೂ ಸಹಾಯಕವಾಗಿವೆ.. ಒತ್ತಡದ ಬದುಕಿನ ಭಾರ ಹೋಗಲಾಡಿಸುವ ಉದ್ದೇಶದಿಂದ ಹಾಸ್ಯ ಚಟಾಕಿಗಳನ್ನು ಹಾರಿಸಲು ನೆರವಾಗಿವೆ. ಜಾಗೃತಿಯನ್ನು ಮೂಡಿಸಲು ಲೇಖನಗಳು ಪೂರಕವಾಗಿವೆ.

ದಿನಪತ್ರಿಕೆಗಳ ಆವಿಷ್ಕಾರವಾದಾಗಲಂತೂ ಅಕ್ಷರಗಳು ಹೊಸಬಗೆಯ ಪಾತ್ರವನ್ನು ನಿರ್ವಹಿಸಲಾರಂಭಿಸಿದವು. ಪುಸ್ತಕಗಳಿಗೆ ಪರ್ಯಾಯವಾಗಿ ದಿನಪತ್ರಿಕೆಗಳು ಮನೆ–ಮನಗಳಿಗೆ ತಲುಪಲಾರಂಭಿಸಿದಾಗ ಅಕ್ಷರಗಳ ಬಹುಮುಖೀ ಶಕ್ತಿ ವಿಸ್ತೃತಗೊಂಡಿತು. ಸುದ್ದಿ, ವಿಶೇಷ ಸುದ್ದಿ, ಅಂಕಣ, ಲೇಖನ, ಸಂಪಾದಕೀಯ, ವಾಚಕರ ವಾಣಿ, ಕಥೆ, ಕವಿತೆ, ಕಾದಂಬರಿ ಮತ್ತಿತರ ಬರಹ ಪ್ರಕಾರಗಳ ಸ್ವರೂಪದಲ್ಲಿ ದಿನಪತ್ರಿಕೆಗಳ ಮುಖಾಂತರ ಪ್ರಜ್ಞಾಶೀಲ ಆಶಯಗಳು ಜನರನ್ನು ತಲುಪಿದವು.

**ಮುದ್ರಣ ಮಾಧ್ಯಮ, ಬರಹ ಮತ್ತು ಭಾಷೆ**

ಮುದ್ರಣ ಮಾಧ್ಯಮ ಜನರನ್ನು ತಲುಪುವುದು ಬರಹಗಳ ಮುಖಾಂತರ. ಪ್ರತಿಯೊಂದು ಬರಹವೂ ಬದುಕನ್ನು ಕೇಂದ್ರೀಕರಿಸಿಕೊಂಡೇ ನಿರೂಪಿತವಾಗುತ್ತದೆ. ಜನಪದೀಯ ಮಾಧ್ಯಮಗಳು ಮೌಖಿಕವಾಗಿ ಜನರನ್ನು ತಲುಪಿದರೆ ಮುದ್ರಣ ಮಾಧ್ಯಮ ಬರಹದ ವಿವಿಧ ಪ್ರಕಾರಗಳ ಮುಖಾಂತರ ಜನರಿಗೆ ಆಪ್ತವಾಗುತ್ತದೆ. ಮುದ್ರಣ ಮಾಧ್ಯಮದ ಉದ್ದೇಶಿತ ಜನಸಮೂಹದ ವ್ಯಾಪ್ತಿಯಲ್ಲಿ ಸಾಕ್ಷರರು, ಅಕ್ಷರಗಳೊಂದಿಗೆ ನಿರಂತರ ಒಡನಾಟವಿರುವವರು, ಶೈಕ್ಷಣಿಕವಾಗಿ ಕನಿಷ್ಠ ಅರ್ಹತೆಯನ್ನು ಪಡೆದವರು, ಬೌದ್ಧಿಕವಾಗಿ ಸಶಕ್ತವಾಗಿರುವವರನ್ನೆಲ್ಲರನ್ನೂ ಸೇರ್ಪಡೆಗೊಳಿಸಬಹುದು. ಸಾಕ್ಷರರು ಅಕ್ಷರ ಪ್ರಜ್ಞೆಯನ್ನು ಉಳ್ಳವರು. ಸರಳ ಮಾಹಿತಿಯ ಸರಳ ನಿರೂಪಣೆಯ ಸುಲಭವಾಗಿ ಗ್ರಹಿಕೆಗೆ ಎಟಕುವ ಬರಹಗಳನ್ನು ಓದಿ ಗ್ರಹಿಸುವ ಸಾಮರ್ಥ್ಯ ಇವರಿಗೆ ಇರುತ್ತದೆ. ಇಂತಹ ಬರಹಗಳನ್ನು ಓದುತ್ತಾ ಅಕ್ಷರಗಳೊಂದಿಗೆ ನಿರಂತರವಾಗಿ ಒಡನಾಟವಿರಿಸಿಕೊಳ್ಳುವವರು ಕ್ರಮೇಣ ಕ್ಲಿಷ್ಟಕರವಾದ ಪದಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶೈಕ್ಷಣಿಕವಾಗಿ ಕನಿಷ್ಠ ಅರ್ಹತೆಯನ್ನು ಉಳ್ಳವರು ಎಲ್ಲ ಬಗೆಯ ಬರಹಗಳನ್ನು ಓದಬಲ್ಲವರಾಗಿರುತ್ತಾರೆ. ಆದರೆ, ಕೆಲವು ಬರಹಗಳೆಡೆಗೆ ಮಾತ್ರ ಆಸಕ್ತಿಯನ್ನು ತೋರುತ್ತಾರೆ. ಬೌದ್ಧಿಕವಾಗಿ ಸಶಕ್ತವಾಗಿರುವವರು ಸಂಕೀರ್ಣ ಬರಹಗಳನ್ನೂ ಗ್ರಹಿಕೆಗೆಟುಕಿಸಿಕೊಂಡು ಮಹತ್ವದ ವಿಚಾರಗಳನ್ನು ಹೊಳೆಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಬರಹವನ್ನು ಸಂವಹಿಸುವ ಬರಹಗಾರನು ಯಾರಿಗಾಗಿ ಬರಹವನ್ನು ಕಟ್ಟಿಕೊಡುತ್ತಿದ್ದೇನೆ ಎಂಬ ಸ್ಪಷ್ಟತೆಯೊಂದಿಗೆ ಬರೆದಾಗ ಮಾತ್ರ ಆತನ ಬರಹವು ಆಯಾ ಓದುಗವಲಯವನ್ನು ಸಮರ್ಪಕವಾಗಿ ತಲುಪುತ್ತದೆ. ಇಲ್ಲೆಲ್ಲಾ ಭಾಷೆಯೇ ನಿರ್ಣಾಯಕವಾಗುತ್ತದೆ. ಭಾಷೆಯನ್ನು ಬಳಸಿಕೊಳ್ಳುವ ಕೌಶಲ್ಯದ ಬಳಕೆಯ ವೇಳೆ ಬದುಕಿನ ಅನುಭವಗಳ ವಿವರಗಳು ಮಹತ್ವದ ಸಂಪನ್ಮೂಲಗಳಾಗುತ್ತವೆ. ಬರೀ ಭಾಷಾ ಪ್ರೌಢಿಮೆಯೊಂದರಿಂದ ಮಾತ್ರ ಬರಹವು ಸಮಂಜಸವೆನಿಸುವಂತೆ ನಿರೂಪಿತವಾಗುವುದಿಲ್ಲ. ಬದುಕಿನ ವಿವಿಧ ವಿವರಗಳನ್ನು ಸಂವಹನದ ಸಂಪನ್ಮೂಲಗಳನ್ನಾಗಿ ಪರಿಗಣಿಸುವ ಮನಸ್ಸು ಬರಹಗಾರನಿಗೆ ಇರಬೇಕಾಗುತ್ತದೆ. ಹಾಗಾದಾಗ ಮಾತ್ರ ಬದುಕು, ಭಾಷೆ ಮತ್ತು ಮಾಧ್ಯಮದ ನಡುವಿನೆ ಅನುಸಂಧಾನಾತ್ಮಕ ಪ್ರಕ್ರಿಯೆ ಮುಂದುವರಿದಂತಾಗುತ್ತದೆ.

ಬರೆಯುವುದೆಂದರೆ ಅಕ್ಷರ, ಪದ, ವಾಕ್ಯಗಳ ಸಂಯೋಜನೆಯಷ್ಟೇ ಅಲ್ಲ. ಅದೊಂದು ಧ್ಯಾನ. ಆಲೋಚನೆಗಳ ಪ್ರವಾಹವನ್ನು ಅಕ್ಷರಗಳಲ್ಲಿ ಹಿಡಿದಿಡುವ ಕ್ರಮ. ಕಾಲದ ನಡಿಗೆಯನ್ನು ದಾಖಲಿಸುವ ಮಾರ್ಗ. ವಿವಿಧ ಕ್ಷಣಗಳನ್ನು ಕಂಡರಿಸುವ ವಿನೂತನ ಪ್ರಯತ್ನ. ಕಂಡುಕೊಂಡ ಅನುಭವಗಳನ್ನು ಅಕ್ಷರಗಳ ಮೂಲಕ ದೃಶ್ಯೀಕರಿಸುವ ಭಾವಯಾನ. ಗೊತ್ತಿದ್ದನ್ನು ಗೊತ್ತಿಲ್ಲದವರಿಗೆ ಕೊಡಮಾಡುವ ಜ್ಞಾನಾನುಸಂಧಾನ. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವ ಮನಸ್ಸುಗಳಿಗೆ ಸರಿದಾರಿ ತೋರಿಸುವ ಬೆಳಕು ಚೆಲ್ಲುವ ಕ್ರಿಯೆ. ಬರೆಯುವುದೆಂದರೆ ಪಾಂಡಿತ್ಯಪ್ರದರ್ಶನವಲ್ಲ. ಕೆಡಕುಗಳನ್ನು ಅನಾವರಣಗೊಳಿಸಿ ಒಳಿತನ್ನು ಪ್ರತಿಷ್ಠಾಪಿಸುವ ಮಹತ್ವದ ಕ್ರಿಯೆ. ಇಂದು-ನಿನ್ನೆ-ನಾಳೆಗಳನ್ನು ಬೌದ್ಧಿಕ ಬಲದಲ್ಲಿ ಬದುಕು ಕಟ್ಟಿಕೊಳ್ಳುವ ಕ್ರಮಗಳನ್ನು ಸಂವಹಿಸುವ ಪ್ರಕ್ರಿಯೆ. ಒಂದೊಂದು ಬರಹವೂ ಓದುಗರೊಂದಿಗೆ ಸಂವಾದವನ್ನು ಏರ್ಪಡಿಸಿಕೊಳ್ಳುವಾಗಲೆಲ್ಲಾ ಭಾಷೆಯ ವೈವಿಧ್ಯಮಯ ಸ್ವರೂಪ ಗಮನಕ್ಕೆ ಬರುತ್ತದೆ. ಬರಹವೊಂದು ಮತ್ತೊಂದು ಬರಹದಿಂದ ಭಿನ್ನವೆನ್ನಿಸಿಕೊಳ್ಳಲು ಬಳಸಿದ ಭಾಷೆಯೂ ಕೊಡುಗೆಯನ್ನು ನೀಡುತ್ತದೆ. ಬರಹದ ಸಂವಹನ ಪ್ರಭಾವದ ಮಾನದಂಡಗಳಲ್ಲಿ ಭಾಷೆಯೇ ಮೊದಲಿನ ಸ್ಥಾನವನ್ನು ಪಡೆಯುತ್ತದೆ. ನಂತರ ಆ ಬರಹವನ್ನು ಬರೆದ ಬರಹಗಾರನ

ವೈಚಾರಿಕ ನಿಲುವುಗಳು ಬರಹವನ್ನು ಗಟ್ಟಿಗೊಳಿಸಲು ಕಾರಣವಾಗುತ್ತವೆ. ಅಗಾಧ ವೈಚಾರಿಕತೆಯನ್ನು ಹೊಂದಿದವರೊಳಗೆ ಸಹಜವಾಗಿಯೇ ಭಾಷಾ ಪ್ರೌಢಿಮೆ ಅಂತರ್ಗತವಾಗಿರುತ್ತದೆ. ಬರೀ ಭಾಷಾ ಪಾಂಡಿತ್ಯವನ್ನು ಹೊಂದಿ ವೈಚಾರಿಕತೆಯಲ್ಲಿ ಸೋಲನ್ನು ಕಾಣುವವರೂ ಇದ್ದಾರೆ. ನಿಜವಾದ ಬರಹಗಾರನ ಹೆಗ್ಗಳಿಕೆ ಇರುವುದು ಭಾಷೆ ಮತ್ತು ವೈಚಾರಿಕತೆ ಎರಡರಲ್ಲೂ ಇರುವ ಸಾಮರ್ಥ್ಯದಲ್ಲಿ. ವೈಚಾರಿಕವಾಗಿ ದುರ್ಬಲನಾಗಿರುವ ಬರಹಗಾರನು ತನ್ನ ಭಾಷಾ ಪಾಂಡಿತ್ಯದ ಮುಖಾಂತರ ಅನೇಕ ಊನಗಳನ್ನು, ದುರ್ಬಲ ವಿಚಾರಗಳನ್ನು, ಒಪ್ಪಿಕೊಳ್ಳಲು ಆಗದಂಥ ಅತಾರ್ಕಿಕ ವಿವರಗಳನ್ನು ಕಟ್ಟಿಕೊಡಬಹುದು. ಅಂಥ ಬರಹಗಳು ಕಾಲಾತೀತವಾಗಿ ಉಳಿಯುವ ಗುಣವನ್ನು ಪಡೆಯುವುದಿಲ್ಲ. ಭಾಷಾ ಜಾಣ್ಮೆಯ ಕಾರಣಕ್ಕಾಗಿ ತತ್‌ಕ್ಷಣಕ್ಕೆ ಅಂಥ ಬರಹಗಳು ಗಮನಸೆಳೆಯಬಹುದಾದರೂ ಅವು ಶಾಶ್ವತ ಪ್ರಭಾವವನ್ನು ನೆಲೆಗೊಳಿಸುವಲ್ಲಿ ವಿಫಲವಾಗುತ್ತವೆ. ಅಂಥ ಬರಹಗಳು ಶಾಶ್ವತ ಪ್ರಭಾವವನ್ನು ನೆಲೆಗೊಳಿಸಿದರೆ ವಿವಿಧ ಕಾಲಗಳ ಪೀಳಿಗೆಗಳು ವೈಚಾರಿಕವಾಗಿ ದಿವಾಳಿಗೀಡಾಗುವ ಅಪಾಯವಿರುತ್ತದೆ. ವೈಚಾರಿಕತೆ ಮತ್ತು ಭಾಷೆ ಎರಡರಲ್ಲೂ ಸಮರ್ಥನಾದ ಬರಹಗಾರನು ತನ್ನ ಆ ಬಗೆಯ ಸಾಮರ್ಥ್ಯದ ಮುಖಾಂತರ ತನ್ನ ಬರಹಕ್ಕೆ ಭಿನ್ನ ಆಯಾಮವನ್ನು ತಂದುಕೊಳ್ಳಬಹುದು.

ಬರೆಯುವುದಕ್ಕೆ ಮತ್ತು ಒಂದು ಬರಹ ಬರೆಸಿಕೊಳ್ಳುವುದಕ್ಕೆ ಹಲವು ಕಾರಣಗಳಿರುತ್ತವೆ. ಹೇಳಲೇಬೇಕಾದ ಅನಿವಾರ್ಯತೆ ಒಂದು ಬರಹದ ಹಿಂದಿರುತ್ತದೆ. ಅದುಮಿಡಲಾಗದ ಭಾವನೆಗಳನ್ನು ಹೊರಗೆಡಹಲೂ ಬರೆಯಲಣಿಯಾಗಬಹುದು. ಕಣ್ಣ ಮುಂದಿನ ಸತ್ಯಗಳನ್ನು ಅನಾವರಣಗೊಳಿಸಲೇಬೇಕಾದ ತುಡಿತ ಬರೆಯುವುದಕ್ಕೆ ಪ್ರೇರಣೆ ನೀಡಬಹುದು. ಹೊಚ್ಚಹೊಸ ಸಂಗತಿಗಳ ವಿವರವನ್ನು ವಿನೂತನವಾಗಿ ಕಟ್ಟಿಕೊಡುವ ಉಮೇದಿಯಲ್ಲಿ 'ಬರಹ'ವೊಂದು ಅರಳಿಕೊಳ್ಳಬಹುದು. ಎಂದೋ ಆಗಿಹೋದ ವಿವರಗಳನ್ನು ಗ್ರಹಿಸಿ ಸಮರ್ಥನೀಯ ಎನ್ನಿಸುವ ಹಾಗೆ ಪ್ರಸ್ತುತಪಡಿಸುವ ಉದ್ದೇಶ ಅಮೂಲ್ಯವೆನಿಸುವಂತಹ ಬರಹವೊಂದನ್ನು ಬರೆಸಬಲ್ಲದು. ವರ್ತಮಾನದಲ್ಲಿ ನಡೆಯುತ್ತಿರುವ ಎಲ್ಲ ಬಗೆಯ ಅತಿರೇಕಗಳನ್ನು ನೋಡಿ ಬೇಸತ್ತ ಸ್ವಸ್ಥ ಮನಸ್ಸು ತನ್ನೊಳಗಿನ ಎಲ್ಲ ಆತಂಕಗಳನ್ನು ಹಂಚಿಕೊಳ್ಳಲು 'ಬರಹ'ದ ನೆರವನ್ನು ಪಡೆಯಬಹುದು. 'ಮನುಷ್ಯ ಅಸ್ತಿತ್ವ'ಕ್ಕಾಗಿ ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿಪಾದಿಸಲೂ ಬರಹವೊಂದು ಪ್ರಬಲ 'ಬೌದ್ಧಿಕ ಸಾಧನ'ವಾಗಬಲ್ಲದು.

ಬರೆಯುತ್ತಾ, ಬರೆದುದನ್ನು ಮೀರಿ ಪರಿಪಕ್ವವಾಗುತ್ತ, ಹೊಸ ಬಗೆಯ ಬರಹ ಕ್ರಮವನ್ನು ತಮ್ಮದಾಗಿಸಿಕೊಂಡ ಬರಹಗಾರರನೇಕರು ನಂತರದ ಉದಯೋನ್ಮುಖರಿಗೆ ಮಾದರಿಯಾಗಿದ್ದಾರೆ. ಹಾಗೆ ಮಾದರಿಯಾಗುತ್ತಲೇ ಹೊಸದನ್ನು ಕಟ್ಟಿಕೊಟ್ಟಿದ್ದಾರೆ. ವರ್ತಮಾನದ ಸಂಗತಿಗಳನ್ನು ಭಿನ್ನ ನೆಲೆಯಲ್ಲಿ ನೋಡುತ್ತಾ ಉಜ್ವಲ ಭವಿಷ್ಯದ ನಿರೀಕ್ಷೆಯಲ್ಲಿ ವಿಭಿನ್ನ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ಅಂತಹ ವಿಚಾರಗಳನ್ನು ಓದಿದ ಮನಸ್ಸುಗಳು ಆಯಾ ಕಾಲದ ಅಗತ್ಯಗಳಿಗೆ ಅನುಗುಣವಾಗಿ ತಾವೂ ಬರೆದು 'ಸ್ಪಂದಿಸುವ' ಮನಸ್ಸು ಮಾಡಿವೆ. ಈ ಬಗೆಯ ಬರೆಯುವಿಕೆ ಮತ್ತು ಓದುವಿಕೆಗಳ ಪ್ರಕ್ರಿಯೆಗಳೇ 'ಬರಹ' ಹೊಸ ಸ್ವರೂಪ ಪಡೆದು ವಿಸ್ತೃತವಾಗಲು ಕಾರಣವಾಗಿವೆ. ಈ ಪ್ರಕ್ರಿಯೆ ಓದುಗರ ಪ್ರಜ್ಞಾವಲಯವನ್ನು ವಿಸ್ತರಿಸುವುದಷ್ಟೇ ಅಲ್ಲದೇ ಅವರೊಳಗೆ ಭಾಷೆಯ ವಿವಿಧ ಸಾಧ್ಯತೆಗಳನ್ನು ಮನಗಾಣಿಸಲು ನೆರವಾಗುತ್ತದೆ.

ಜಯ ಭಾರತ ಜನನಿಯ ತನುಜಾತೆ; ಜಯಹೇ ಕರ್ನಾಟಕ ಮಾತೆ (ಕುವೆಂಪು ಬರೆದ ನಾಡಗೀತೆ), ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲುಮಣ್ಣುಗಳ ಗುಡಿಯೊಳಗೆ; ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ

(ಜಿ ಎಸ್ ಶಿವರುದ್ರಪ್ಪ ಕವಿತೆ), ಗುಡಿಸಿಲಿನಲ್ಲಿ ಅರಳುವ ಗುಲಾಬಿ ನಕ್ಷತ್ರ ನನ್ನ ಕವನ (ಸತ್ಯಾನಂದ ಪಾತ್ರೋಟ ಕವಿತೆ), ಗಾಂಧಿ– ಹುಟ್ಟು ಕುರುಡರ ಓಣಿಯಲ್ಲಿ ಚಾಳೀಸು ಮಾರಿದಾತ (ಜಂಬಣ್ಣ ಅಮರಚಿಂತ ಚುಟುಕು), 'ಬಿಸಿ ನೆತ್ತರುಕ್ಕುತಿಹ ಹೇ ಯುವಕ, ಹೊಸದೊಂದು ಬ್ರಹ್ಮಾಂಡ ಕಟ್ಟೋಣ ಬಾ' (ಚಂದ್ರಶೇಖರ ಕಂಬಾರ ಕವಿತೆ), ನನ್ನ ಕಾವ್ಯದ ಒಡಲ ಒಳಗಡೆ ದುಡಿವ ಜನಗಳ ಕತೆಯಿದೆ; ಮೇಲುವರ್ಗದ ಚಿರತೆ ಕೈಯಲಿ ಸಿಕ್ಕ ಜಿಂಕೆಯ ವ್ಯಥೆಯಿದೆ (ಪ್ರಭುದೇವ ಹಾದಿಮನಿ ಕವಿತೆ)... ಹೀಗೆ ಒಂದೊಂದು ಕವಿತೆಯ ಹಿಂದೆ ಸದಾಶಯಗಳಿರುತ್ತವೆ. ಕಥೆಗಾರನಾದವ ತಾನು ಕಂಡುಂಡ ಅನುಭವಗಳನ್ನು ಕಥೆಯಾಗಿಸುತ್ತಾನೆ. ತನ್ನ ಸೃಜನಶೀಲತೆಯ ಬೆಂಬಲದೊಂದಿಗೆ ಲೋಕದ ವಿವರಗಳನ್ನು ಭಿನ್ನವಾಗಿ ಕಟ್ಟಿಕೊಡುತ್ತಾನೆ. 'ಕಥನ ಕ್ರಮ'ವು ಕಥೆಗಾರನಾದವನಿಗೆ ಹೇಳಲೇಬೇಕಾದದ್ದನ್ನು ಹೇಳುವ ವೇದಿಕೆಯನ್ನು ಒದಗಿಸಿಕೊಡುತ್ತದೆ. ಹಲವು ಕಥೆಗಾರರು ತಮ್ಮ ವಿಭಿನ್ನ ಕಥನಕ್ರಮ ಮತ್ತು ಕಥೆಯ ಒಡಲಾಳದ ಸದಾಶಯಗಳ ಕಾರಣದಿಂದಲೇ ಮುಖ್ಯರೆನಿಸುತ್ತಾರೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಬರಹಗಾರ ತನ್ನ ಭಾಷಿಕ ಪ್ರಯೋಗಗಳ ಮುಖಾಂತರವೇ ತನ್ನನ್ನು ಉಳಿದವರಿಗಿಂತ ಭಿನ್ನವಾಗಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಕವಿತೆ, ಕಥೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ, ವಿಡಂಬನೆ, ವರದಿ, ವಿಶೇಷ ವರದಿ, ಅಂಕಣಗಳು, ಲೇಖನಗಳು, ಸಂಪಾದಕೀಯ, ಸಂದರ್ಶನ ಬರಹಗಳು ಎಲ್ಲವುಗಳ ಹಿಂದೆ ಸಕಾರಾತ್ಮಕ ಆಲೋಚನೆಯಿರುತ್ತದೆ. ಬರಹ ಎಂದಾಗಲೇ ಅದು ಒಳಿತಿನ ಉದ್ದೇಶದೊಂದಿಗಿರುವಂಥದ್ದು ಎಂಬ ಭಾವನೆ ಮೂಡುವ ಹಾಗೆ ನಮ್ಮಲ್ಲಿ ಸಾಹಿತ್ಯಿಕ ಪರಂಪರೆಯಿದೆ. ಆದರೆ, ಈ ಹೊತ್ತಿನ 'ಮನುಷ್ಯ' ಬದಲಾಗಿದ್ದಾನೆ. ಆ ಕಾರಣಕ್ಕೆ 'ಕಾಲ'ವೂ ಬದಲಾದಂತೆ ಅನ್ನಿಸುತ್ತಿದೆ. ಬರಹ ಬರೆಯುವಿಕೆ ಧ್ಯಾನವಾಗುವ ಬದಲು ಹಲವು ಅಧ್ವಾನಗಳನ್ನು ಆಹ್ವಾನಿಸುವ ಹುನ್ನಾರಗಳ ಭಾಗವಾಗುತ್ತಿದೆ. ಎಂದೋ ಹೇಳಿದ ಮಾತುಗಳನ್ನು ಇವತ್ತು ಅವರವರ ಮೂಗಿನ ನೇರಕ್ಕೆ ವಿಶ್ಲೇಷಿಸಿ ದ್ವೇಷ ಭಾವನೆ ಹುಟ್ಟಿಸುವ, ಮುಳ್ಳಿಗೆ ಮುಳ್ಳೇ ಮದ್ದು ಎನ್ನುವ ಹುಚ್ಚು ಪ್ರತಿಪಾದನೆ ಮಾಡಲು 'ಬರಹ' ಬಳಕೆಯಾಗುತ್ತಿದೆ. 'ಈ ದೇಶದಲ್ಲಿ ಬಹುಸಂಖ್ಯಾತ ಧರ್ಮದವರೇ ಬದುಕಬೇಕು; ಅವರಲ್ಲದೇ ಉಳಿದ ಧರ್ಮೀಯರು ಬದುಕಬಾರದು' ಎಂಬ ಅಲಿಖಿತ ಸಂವಿಧಾನದ ನೀತಿಯನ್ನು ಜಗಜ್ಜಾಹೀರುಗೊಳಿಸುವ ವಿಚಿತ್ರ ಆಸೆಗಳಿಗೆ 'ಬರಹ' ಬಲಿಯಾಗುತ್ತಿದೆ. ಹಾಗೆ ಬರಹವನ್ನು ಬಲಿ ತಗೆದುಕೊಂಡಿದ್ದಷ್ಟೇ 'ಒಂದಾಗಿ ಬಾಳುವ' ಮನಸ್ಸುಗಳನ್ನು ಕಲುಷಿತಗೊಳಿಸಲಾಗುತ್ತಿದೆ.

ಬರಹಗಳು ಮುದ್ರಣ ಮಾಧ್ಯಮದ ಜೀವಾಳ. ಅವುಗಳು ವಿವಿಧ ಕೃತಿಗಳ ಮುಖಾಂತರ ತಲುಪುತ್ತವೆ. ಪತ್ರಿಕೆಗಳ ಮೂಲಕವೂ ವಿವಿಧ ಬಗೆಯ ಬರಹಗಳು ಜನರನ್ನು ತಲುಪುತ್ತವೆ. ಪುಸ್ತಕಗಳು ಸೀಮಿತ ವಲಯಕ್ಕೆ ಮಾತ್ರ ಮೀಸಲಾದರೆ, ಪತ್ರಿಕೆಗಳು ವಿವಿಧ ಜನವರ್ಗಗಳನ್ನು ಪ್ರಭಾವಿಸುತ್ತವೆ. ಭಾರತದಲ್ಲಿ ಪತ್ರಿಕೆಗಳ ಉಗಮವಾಗಿದ್ದು ಹೊರಗಿನವರ ಪ್ರೇರಣೆಯಿಂದಲೇ. ನಮ್ಮದಲ್ಲದ ಭಾಷೆಯಲ್ಲಿ ಪ್ರಕಟವಾಗಲಾರಂಭಿಸಿದ ಪತ್ರಿಕೆಗಳು ನಂತರದ ಭಾರತದ ವಿವಿಧ ಪ್ರದೇಶಗಳಲ್ಲಿ ಮಾತನಾಡುವವರ ಭಾಷೆಗಳಲ್ಲಿ ಪ್ರಕಟವಾಗುವಂತೆ ಪ್ರೇರಣೆ ನೀಡಿದ್ದು ಪತ್ರಿಕಾ ಮಾಧ್ಯಮದ ಇತಿಹಾಸದಲ್ಲಿ ಬಹುಮುಖ್ಯ ಘಟ್ಟವಾಗಿದೆ. ಸಮಾಜ ಸುಧಾರಕ ರಾಜಾರಾಮ್ ಮೋಹನ್‌ರಾಯ್ ಅವರು ದೇಶಭಾಷಾ ಪತ್ರಿಕಾರಂಗದ ಪಿತಾಮಹ ಎಂದೇ ಖ್ಯಾತರಾಗಿದ್ದಾರೆ. ಭಾಷೆ, ವಿಜ್ಞಾನ ಮತ್ತು ತತ್ವಜ್ಞಾನದ ಮೂಲಕ ಭಾರತ ಎಲ್ಲ ಬಗೆಯ ಮಿತಿಗಳಿಂದ ಮೈಕೊಡವಿಕೊಂಡು ಮೇಲೇಳಬಹುದು ಎಂಬುದರಲ್ಲಿ ದೃಢವಿಶ್ವಾಸವನ್ನು ಹೊಂದಿದ್ದ ಅವರು ಅದನ್ನು ತಮ್ಮ ಹತ್ತುಹಲವು

ರಚನಾತ್ಮಕ ಕೊಡುಗೆಗಳ ಮುಖಾಂತರ ನಿರೂಪಿಸಿದರು. ಭಾರತೀಯ ಜನರ ಬದುಕಿನೊಂದಿಗೆ ತಳುಕು ಹಾಕಿಕೊಂಡ ಅನೇಕ ಸಾಮಾಜಿಕ ಜಾಡ್ಯಗಳನ್ನು ನಿರ್ಮೂಲನೆ ಮಾಡುವ ಸಂಕಲ್ಪ ತೊಟ್ಟ ರಾಜಾರಾಮ್ ಮೋಹನ ರಾಯ್ ಅವರಿಗೆ ಇಲ್ಲಿಯ ಜನಭಾಷೆಯಲ್ಲಿಯೇ ತಮ್ಮೊಳಗಿನ ಮಹತ್ವದ ವಿಚಾರಗಳನ್ನು ತಲುಪಿಸಬೇಕು ಎನ್ನುವ ತುಡಿತ ಆರಂಭವಾದದ್ದೇ ತಡ, ಭಾರತೀಯ ಭಾಷೆಗಳಲ್ಲಿಯೇ ಪತ್ರಿಕೆಗಳು ಜನರನ್ನು ತಲುಪಬೇಕು ಎಂಬ ಆಶಯದೊಂದಿಗೆ ಪ್ರಯೋಗಗಳನ್ನು ನಡೆಸಿದರು. ಕ್ರೈಸ್ತಪಾದ್ರಿಗಳು ಹೊರಡಿಸುತ್ತಿದ್ದ 'ಸಮಾಚಾರ ದರ್ಪಣ' ಎಂಬ ಪತ್ರಿಕೆಯಲ್ಲಿ ವೇದಾಂತ ತತ್ವಗಳ ಕುರಿತಾದ ವ್ಯಾಪಕವಾದ ಟೀಕೆಗಳು ವ್ಯಕ್ತವಾದವು. ದೇಶಾಭಿಮಾನ, ತಾಳ್ಮೆ, ಶಕ್ತಿಯುತ ಬರವಣಿಗೆ, ಪ್ರಾಮಾಣಿಕತೆ ಮತ್ತು ಸ್ಫೂರ್ತಿಗೆ ಹೆಸರಾಗಿದ್ದ ರಾಜಾರಾಮ್ ಮೋಹನ್‌ರಾಯ್ ಅವರು ಸಂಪಾದಕರಿಗೆ ಪತ್ರ ಬರೆದು ವೇದಾಂತ ತತ್ವಗಳ ಕುರಿತಾದ ತಪ್ಪುಗ್ರಹಿಕೆಗಳನ್ನು ನಿವಾರಿಸಲು ಪ್ರಯತ್ನಿಸಿದ್ದರು. ಆದರೆ, ಅವರ ಪತ್ರ ಪ್ರಕಟವಾಗಲಿಲ್ಲ. ಬಂಗಾಳಿ ಭಾಷೆಯಲ್ಲಿ ಈ ಬಗೆಯ ನಿರಾಧಾರ ಟೀಕೆಗಳಿಗೆ ಪ್ರತ್ಯುತ್ತರ ನೀಡುವ ಉದ್ದೇಶದೊಂದಿಗೆ ಪತ್ರಿಕೆ ಆರಂಭಿಸುವ ಯೋಚನೆ ಮೊಳಕೆಯೊಡೆಯಿತು. ಇಂಗ್ಲಿಷ್ ಮತ್ತು ಬಂಗಾಳಿ ಎರಡೂ ಭಾಷೆಗಳಲ್ಲೂ ಬ್ರಾಹ್ಮಿನ್ ಸೇವಡಿ ಎಂಬ ಪತ್ರಿಕೆ ಪ್ರಕಟವಾಗಲಾರಂಭಿಸಿತು. ಈ ಪತ್ರಿಕೆಯ ಮುಖಾಂತರ ವೇದಾಂತ ತತ್ವಗಳ ಕುರಿತಾದ ಟೀಕೆಗಳಿಗೆ ತಕ್ಕುದಾದ ತಾರ್ಕಿಕ ಪ್ರತಿಕ್ರಿಯೆಗಳನ್ನು ಒಳಗೊಂಡ ಬರಹಗಳು ಪ್ರಕಟವಾದವು. ಅಲ್ಲದೇ ಈ ಬಗೆಯ ಪ್ರಯೋಗವು ಭಾರತದ ವಿವಿಧ ಪ್ರದೇಶಗಳಲ್ಲಿದ್ದ ಉತ್ಸಾಹಿಗಳಿಗೆ ತಮ್ಮ ಭಾಷೆಯಲ್ಲಿ ಪತ್ರಿಕೆಗಳನ್ನು ಪ್ರಕಟಿಸುವ ನಿಟ್ಟಿನಲ್ಲಿ ಪ್ರೇರಣೆಯನ್ನು ನೀಡಿತು.

ಸ್ವಾತಂತ್ರ್ಯಪೂರ್ವದಲ್ಲಿಯೂ ಬ್ರಿಟಿಷರಿಂದ ಮುಕ್ತರಾಗಬೇಕು ಎನ್ನುವ ಸ್ವಾತಂತ್ರ್ಯದ ಹಸಿವು ಹಲವು ಪತ್ರಿಕಾ ಬರಹಗಳಿಗೆ ಪ್ರೇರಣೆಯಾಯಿತು. ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕತ್ವ ವಹಿಸಿದ್ದ ಮಹಾತ್ಮಾ ಗಾಂಧಿ ಸ್ವತಃ ಪತ್ರಕರ್ತರಾಗಿ ಗುರುತಿಸಿಕೊಂಡು ಸ್ವಾತಂತ್ರ್ಯದ ಕನಸನ್ನು ಬಿತ್ತುವ ಮಹತ್ವದ ಉದ್ದೇಶವನ್ನಿಟ್ಟುಕೊಂಡು ಬರಹಗಳನ್ನು ಬರೆದರು. ಪತ್ರಿಕೋದ್ಯಮದ ಇತಿಹಾಸ ಈ ವಿವರವಿಲ್ಲದೆ ಪೂರ್ಣವೆನಿಸದು. ಸ್ವಾತಂತ್ರ್ಯಾನಂತರವೂ ಕೂಡ ಅಭಿವೃದ್ಧಿಯ ನಿರೀಕ್ಷೆಯನ್ನಿಟ್ಟುಕೊಂಡು ಹಲವು ಪತ್ರಕರ್ತರು ಮಹತ್ವದ ವರದಿಗಳನ್ನು ವಿಶೇಷ ಬರಹಗಳನ್ನು ಕೊಡುಗೆಯನ್ನಾಗಿ ನೀಡಿದ್ದಾರೆ. ಭಾರತದ ಕೃಷಿ ಬದುಕು ರೈತರ ಆತ್ಮಹತ್ಯೆಗಳೊಂದಿಗೆ ತಳುಕು ಹಾಕಿಕೊಂಡಾಗ ಪಿ ಸಾಯಿನಾಥ (ದಿ ಹಿಂದೂ ಪತ್ರಿಕೆ) ಅವರೊಳಗಿನ ವೃತ್ತಿಬದ್ಧತೆ ಅವರನ್ನು ದೇಶದ ಹಳ್ಳಿಗಳಿಗೆ ಭೇಟಿ ನೀಡುವಂತೆ ಮಾಡಿ ರೈತರ ದಾರುಣ ಸ್ಥಿತಿಯನ್ನು ಅನಾವರಣಗೊಳಿಸುವಂತೆ ಪ್ರೇರಣೆ ನೀಡುತ್ತದೆ.

ಕನ್ನಡದಲ್ಲೂ ದಿಢೀರನೇ ಪತ್ರಿಕಾ ಮಾಧ್ಯಮದ ಉಗಮವಾಗಲಿಲ್ಲ. ಇಲ್ಲಿಯೂ ಕ್ರೈಸ್ತ ಪಾದ್ರಿಗಳ ಪ್ರಯತ್ನಗಳು ಕನ್ನಡ ಪತ್ರಿಕಾ ರಂಗ ಜನ್ಮ ತಳೆಯಲು ಕಾರಣವಾದವು. ಕನ್ನಡದ ಮೊಟ್ಟಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' 1812ರಲ್ಲಿ ಬಳ್ಳಾರಿಗೆ ಬಂದ ಜರ್ಮನ್ ಪಾದ್ರಿಗಳು ಕನ್ನಡಿಗರನ್ನು ತಮ್ಮ ದೇಶಕ್ಕೆ ಕರೆದೊಯ್ದು ಕನ್ನಡ ಮೊಳೆ ಎರಕ ಹೊಯ್ಯುವ ವಿಧಾನದ ಕುರಿತು ತರಬೇತಿ ನೀಡಿಸಿದರು. ಕಲ್ಲಚ್ಚು ಎಂಬ ಕಲ್ಲಿನಿಂದ ತಯಾರಿಸಿದ ಮುದ್ರಣ ಯಂತ್ರದಲ್ಲಿ ಅವರು 'ಮಂಗಳೂರು ಸಮಾಚಾರ' ಪತ್ರಿಕೆಯನ್ನು ಪ್ರಕಟಿಸಿದರು. ಕ್ರೈಸ್ತ ಧರ್ಮ ಪ್ರಚಾರದ ಉದ್ದೇಶಕ್ಕೆ ಈ ಪತ್ರಿಕೆ ಮೀಸಲಾಗಿದ್ದರೂ ಕನ್ನಡದಲ್ಲಿ ವಿವಿಧ ಪತ್ರಿಕೆಗಳ ಆರಂಭಕ್ಕೆ ಈ ಪತ್ರಿಕೆ ಪ್ರೇರಣೆಯಾಯಿತು. ನಂತರದ ದಿನಗಳಲ್ಲಿ ಕನ್ನಡ ಪತ್ರಿಕಾ ರಂಗವೂ ಬ್ರಿಟಿಷ್ ಹಿಡಿತದ ವಿರುದ್ಧ ದೊಡ್ಡ ಧ್ವನಿ ಎತ್ತಿತು. ಕನ್ನಡ ಭಾಷೆಯಲ್ಲಿಯೇ ಕನ್ನಡ ಜನರು

ಅನುಭವಿಸುತ್ತಿದ್ದ ತಲ್ಲಣಗಳು ಅಭಿವ್ಯಕ್ತವಾಗಬೇಕು ಎಂಬ ಧೋರಣೆ ಆಗಿನ ಪತ್ರಿಕೆಗಳ ಹಿಂದೆ ಇತ್ತು. ಈ ನೆಲೆಯಲ್ಲಿ ಮುದ್ರಣ ಮಾಧ್ಯಮ, ಇಲ್ಲಿಯ ಬದುಕು ಮತ್ತು ಸ್ಥಳೀಯ ಭಾಷೆ ಪರಸ್ಪರ ಕೊಡುಕೊಳ್ಳುವಿಕೆಯ ಕ್ರಮದಲ್ಲಿ ಅಭಿವ್ಯಕ್ತಿಯನ್ನು ಕಂಡುಕೊಂಡವು.

**ಕನ್ನಡ ಪತ್ರಿಕೋದ್ಯಮ**

ಅಭಿವ್ಯಕ್ತಿ ಸ್ವಾತಂತ್ರ್ಯದ ವಿನೂತನ ಸಾಧ್ಯತೆಗಳ ಪ್ರಯೋಗಶಾಲೆಯಾಗಿ ಗಮನಸೆಳೆಯುವ ಭಾರತೀಯ ಪತ್ರಿಕೋದ್ಯಮದ್ದು ವೈವಿಧ್ಯಮಯ ಸ್ವರೂಪ. ಅಭಿವ್ಯಕ್ತಿ ಸ್ವಾತಂತ್ರ್ಯವು ದೇಶವೊಂದನ್ನು ದಾಸ್ಯದ ಸಂಕೋಲೆಯಿಂದ ಮುಕ್ತಗೊಳಿಸುವ ಆಶಯಗಳಿಗೆಲ್ಲಾ ಭದ್ರಭೂಮಿಕೆಯನ್ನು ಒದಗಿಸಿಕೊಟ್ಟ ಹೆಗ್ಗಳಿಕೆಯ ಕಥೆಯನ್ನು ಅದು ತನ್ನೊಡಲಲ್ಲಿರಿಸಿಕೊಂಡಿದೆ. ದೇಶವೊಂದರ ಸ್ವಾತಂತ್ರ್ಯದ ಹಸಿವು ಇಡೀ ಜನಸಮುದಾಯದ ಹಸಿವಾಗಿ ಪರಿವರ್ತಿತವಾಗುವಲ್ಲಿ ಅದು ವಹಿಸಿದ ನಿರ್ಣಾಯಕ ಪಾತ್ರದ ಹಲವು ಆಯಾಮಗಳು ಈ ನೈಜಕಥೆಯಿಂದಲೇ ಅನಾವರಣಗೊಳ್ಳುತ್ತವೆ. ಈ ನೈಜಕಥೆಯಲ್ಲಿ ಹಲವು ತಿರುವುಗಳ ರೋಚಕತೆಯಿದೆ. ಪ್ರಬಲರ ವಿರುದ್ಧ ಸಾಮಾನ್ಯರೆನಿಸಿಕೊಂಡವರು ಅಸಾಮಾನ್ಯ ಆಂದೋಲವನ್ನು ಸಂಘಟಿಸಿದ ಕೌತುಕಮಯ ಸಂಗತಿಗಳಿವೆ. ಜಾತಿ–ಮತ–ಧರ್ಮಗಳ ಹೆಸರಲ್ಲಿ ಮನುಷ್ಯಮನಸ್ಸುಗಳು ಬೇರ್ಪಡುತ್ತಿರುವುದಕ್ಕೆ ಸಾಕ್ಷಿಯಾಗುತ್ತಿರುವ ಈ ನೆಲದಲ್ಲಿ ಹಿಂದೊಮ್ಮೆ ಇಂಥವೆಲ್ಲವನ್ನೂ ಮೀರಿ ಸ್ವಾತಂತ್ರ್ಯ ತಂದುಕೊಳ್ಳುವ ಮಹತ್ವದ ಕಾರ್ಯ ನಿರ್ವಹಿಸಲ್ಪಟ್ಟಿತ್ತು ಎಂಬ ವಿವರಗಳಿವೆ. ಈಸ್ಟ್ ಇಂಡಿಯಾ ಕಂಪನಿಯ ಕೆಲ ಅಧಿಕಾರಿಗಳ ಬಂಡಾಯ ಭಾರತೀಯ ಪತ್ರಿಕೋದ್ಯಮದ ಹುಟ್ಟಿಗೆ ಹೇಗೆ ಕಾರಣವಾಯಿತು ಎಂಬುದರ ಉಲ್ಲೇಖವಿದೆ. ಒಟ್ಟಾರೆ, ಈ ನೈಜಕಥೆ ಇನ್ನೊಬ್ಬರಿಂದ ಮುಕ್ತವಾಗಿ ತನ್ನನ್ನು ಮತ್ತೊಮ್ಮೆ ಕಟ್ಟಿಕೊಳ್ಳಲು ಭಾರತಕ್ಕೆ ಶಕ್ತಿ ನೀಡಿದ ಭಾರತೀಯ ಪತ್ರಿಕೋದ್ಯಮವನ್ನು ಸಮಗ್ರವಾಗಿ ಪರಿಚಯಿಸಿಕೊಳ್ಳಲು ಸಹಾಯಕವಾಗುತ್ತದೆ.

ಈ ನೈಜಕಥೆ ಈಗಲೂ ಹೊಸದನ್ನು ಆಹ್ವಾನಿಸಿಕೊಂಡು ನವೀಕೃತವಾಗುತ್ತಲೇ ಇದೆ. ಸ್ವಾತಂತ್ರ್ಯದ ಹಸಿವನ್ನು ವ್ಯಾಪಕಗೊಳಿಸಿದ ಭಾರತೀಯ ಪತ್ರಿಕೋದ್ಯಮ ಬ್ರಿಟಿಷರಿಂದ ಭಾರತ ವಿಮುಕ್ತಗೊಳ್ಳಲು ಕಾರಣವಾದ ನಂತರ ನಿಂತ ನೀರಾಗಲಿಲ್ಲ. ಹಾಗೆ ನಿಂತ ನೀರಾಗಿದ್ದಿದ್ದರೆ ಈಗ ಅದರ ಕುರಿತು ಚರ್ಚಿಸುವ ಅಗತ್ಯವೇ ಇರುತ್ತಿರಲಿಲ್ಲ. ಭಾರತೀಯ ಪತ್ರಿಕೋದ್ಯಮದ ಬೆಳೆದು ನಿಲ್ಲುವ ಉತ್ಸಾಹದೊಂದಿಗೇ ಬೆಳವಣಿಗೆಯ ಹಾದಿಗಳನ್ನು ಕಂಡುಕೊಂಡಿದೆ. ತಾನೂ ಬದಲಾಗುತ್ತಾ, ದೇಶದ ಪರಿಧಿಯೊಳಗೆ ಆಗಬೇಕಾದ ಬದಲಾವಣೆಗಳ ಕುರಿತ ಕನಸುಗಳನ್ನೂ ಬಿತ್ತಿದೆ. ಹೀಗೆ ಬಿತ್ತಲ್ಪಟ್ಟ ಕನಸುಗಳು ಒಂದು ಕಾಲಘಟ್ಟಕ್ಕೆ ಮಾತ್ರ ಸೀಮಿತವಾಗಿ ಉಳಿಯಲಿಲ್ಲ. ಅವು ಹಲವು ಹೊಸ ಕನಸುಗಳಿಗೆ ಪ್ರೇರಣೆಯಾದವು.

ಇಷ್ಟೆಲ್ಲಾ ಅಗಾಧತೆಯ ಭಾರತೀಯ ಪತ್ರಿಕೋದ್ಯಮದ ಮೂಲಶಕ್ತಿ ಇರುವುದೇ ಈ ದೇಶದ ವಿವಿಧ ಭಾಷೆಗಳ ಪತ್ರಿಕೆಗಳ ಅಸ್ತಿತ್ವದಲ್ಲಿ. ಮಹಾತ್ಮಾ ಗಾಂಧಿ ಅವರು ಬರೆಯುತ್ತಿದ್ದ ಬರಹವೊಂದು ದೇಶದ ಮೂಲೆಮೂಲೆಯ ಜನರಿಗೂ ಅದರ ಮೂಲ ಆಶಯಗಳೊಂದಿಗೆ ತಲುಪಲು ಸಾಧ್ಯವಾಗಿಸಿದ ವಿಶೇಷತೆ ವಿವಿಧ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳದ್ದು. ಇಂಗ್ಲಿಷ್ ಭಾಷೆ ಮತ್ತು ಇಂಗ್ಲಿಷರ ಪ್ರಾಬಲ್ಯದ ಮಧ್ಯೆಯೂ 'ದೇಶೀ' ಆಶಯಗಳು ಜನರವರೆಗೆ ತಲುಪಿ

ಅವರೊಳಗೆ ಆಂದೋಲನದ ಪ್ರಜ್ಞೆಯನ್ನು ಮೂಡಿಸಿದ ಹೊಣೆಗಾರಿಕೆಯನ್ನು ಇವುಗಳು ನಿಭಾಯಿಸಿದವು. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಹಲವು ಸ್ಥಿತ್ಯಂತರಗಳಿಗೆ ಕನ್ನಡಿ ಹಿಡಿದವು. ಹಾಗೆ ಸಾಕ್ಷಿಪ್ರಜ್ಞೆಯಾಗುತ್ತಲೇ ಬದಲಾವಣೆ ಆಹ್ವಾನಿಸುವ ಪ್ರಭಾವೀ ಶಕ್ತಿಯಾದವು. ಸ್ವಾತಂತ್ರ್ಯ ಸಿಕ್ಕ ತಕ್ಷಣದ ಸಂಭ್ರಮವನ್ನು ಸಂಭ್ರಮಿಸುವ ಉತ್ಸಾಹಕ್ಕಷ್ಟೇ ಇವುಗಳ ಪ್ರಭಾವೀ ಶಕ್ತಿ ಸೀಮಿತವಾಗಲಿಲ್ಲ. ಸ್ವಾತಂತ್ರ್ಯಾನಂತರವೂ ಆಗಬೇಕಾದ ಕೆಲಸಗಳು, ನಿಭಾಯಿಸಲೇಬೇಕಾದ ಜವಾಬ್ದಾರಿಗಳ ಕುರಿತು ಮನದಟ್ಟು ಮಾಡಿಕೊಡುವುದರ ಕಡೆಗೂ ಇವುಗಳು ಗಮನಹರಿಸಿದವು. ಹೀಗೆ ಭಾರತದ ಒಂದೊಂದು ಭಾಷೆಯಲ್ಲಿ ಜನರವರೆಗೆ ತಲುಪಿದ ಪ್ರತಿಯೊಂದು ಭಾಷಾ ಪತ್ರಿಕೋದ್ಯಮಕ್ಕೂ ಅದರದ್ದೇ ಆದ ಗತ್ತಿದೆ. ಭಾಷೆ, ಅದರೊಂದಿಗೆ ಗುರುತಿಸಿಕೊಂಡ ಜನರ ಬದುಕು, ಆ ಬದುಕಿಗೆ ಎದುರಾದ ಅಡ್ಡಿ–ಆತಂಕಗಳು, ಆ ಆತಂಕಗಳನ್ನು ಎದುರಿಸುವ ಬಗೆ, ಎಲ್ಲವುಗಳನ್ನೂ ವಿವೇಚನಾತ್ಮಕ ನೆಲೆಯಲ್ಲಿ ಬಿಂಬಿಸಿ 'ಭಾರತೀಯ ಬದುಕಿನ' ಅಸ್ಮಿತೆಯ ಶ್ರೇಷ್ಠತೆಯನ್ನು ಪ್ರತಿಪಾದಿಸಿದ ಜಾಣ್ಮೆ ಭಾಷಾ ಪತ್ರಿಕೋದ್ಯಮದ್ದು.

ಈ ಜಾಣ್ಮೆಯ ಕಾಣ್ಕೆಯನ್ನು ಕನ್ನಡ ಪತ್ರಿಕೋದ್ಯಮದ ಅಭ್ಯುದಯದಲ್ಲಿ ಗುರುತಿಸಬಹುದು. ಧರ್ಮ ಪ್ರಚಾರದ ಉದ್ದೇಶದೊಂದಿಗೆ ಆರಂಭವಾದ ಪತ್ರಿಕಾ ನಿರ್ವಹಣಾ ಕಾರ್ಯ ಆ ಸೀಮಿತಗಡಿಯನ್ನು ದಾಟಿ 'ವೈಶಾಲ್ಯತೆ'ಯ ತಳಹದಿಯಲ್ಲಿ ವಿಸ್ತೃತವಾಗಿದ್ದು ಕನ್ನಡ ಪತ್ರಿಕೋದ್ಯಮದ ವೈಶಿಷ್ಟ್ಯತೆ ಎನ್ನಬಹುದು. ಬ್ರಿಟಿಷ್ ಆಡಳಿತ ವೈಖರಿಯನ್ನು ಖಂಡಿಸುವ ಬರಹಗಳು, ಕನ್ನಡೇತರ ಭಾಷೆಗಳ ಪ್ರಭಾವ ಕನ್ನಡಿಗರ ಬದುಕಿಗೆ ಮಾರಕವಾಗುತ್ತಿರುವುದನ್ನು ಗುರುತಿಸಿದ ಲೇಖನಗಳು, ಭಾಷಿಕ ನೆಲೆಗಟ್ಟಿನಲ್ಲಿ ನ್ಯಾಯಯುತ ಸ್ಥಾನಮಾನದ ಬೇಡಿಕೆಯನ್ನು ಮುಂದಿಡುತ್ತಲೇ ಒಂದು ದೇಶವಾಗಿ ನಿಭಾಯಿಸಬೇಕಾದ ಹೊಣೆಗಾರಿಕೆಯ ಬಗ್ಗೆ ಎಚ್ಚರದ ಪ್ರಜ್ಞೆ ಮೂಡಿಸುವಂಥ ಸಂಪಾದಕೀಯಗಳು ಕನ್ನಡ ಪತ್ರಿಕೋದ್ಯಮ ಭದ್ರವಾದ ತಳಹದಿಯನ್ನು ಕಟ್ಟಿಕೊಟ್ಟವು.

ಈ ಭದ್ರಬುನಾದಿಯಿಂದಾಗಿ ಸ್ವಾತಂತ್ರ್ಯಾನಂತರ ಕನ್ನಡ ಪತ್ರಿಕೋದ್ಯಮ ಹೊಸಬಗೆಯ ಉತ್ಸಾಹದೊಂದಿಗೆ ಬೆಳೆಯಲು ನೆರವಾಯಿತು. ಇದರ ಬೆಳವಣಿಗೆಯಲ್ಲಿ ಕ್ರಿಯಾಶೀಲ, ಸೃಜನಶೀಲ ಬರಹಗಾರರ ಪಾತ್ರ ಗಮನಾರ್ಹವಾದುದು. ಕನ್ನಡ ಪತ್ರಿಕಾಲೋಕದ ಒಬ್ಬೊಬ್ಬ ಧೀಮಂತರದ್ದೂ ವಿನೂತನ ಬರಹ ಸಾಮರ್ಥ್ಯ. ಅಂಥವರಲ್ಲಿ ಟಿಯೆಸ್ಸಾರ್ ಎಂದೇ ಖ್ಯಾತರಾಗಿದ್ದ ಟಿ.ಎಸ್.ರಾಮಚಂದ್ರರಾವ್ ಅವರೂ ಒಬ್ಬರು. 27 ವರ್ಷಗಳ ಕಾಲ ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕರಾಗಿದ್ದ ಅವರು ಪತ್ರಿಕಾಧರ್ಮದ ಕುರಿತು ತಮ್ಮೊಳಗಿದ್ದ ಅನುಸರಣೀಯ ವಿಚಾರಧಾರೆಗೆ ಅನುಗುಣವಾಗಿಯೇ ಕಾರ್ಯನಿರ್ವಹಿಸಿದರು. ಪತ್ರಿಕಾಧರ್ಮದ ಅನುಷ್ಠಾನ ಸಾಧ್ಯವಾಗಿಸುವ ಶಕ್ತಿಯಾಗಿಯೇ ಅವರು ತಮ್ಮನ್ನು ಗುರುತಿಸಿಕೊಂಡರು. ಉಳಿದವರಿಗೆ ಮಾದರಿಯಾದರು.

ಪ್ರಜಾವಾಣಿ ದಿನಪತ್ರಿಕೆ ಆರಂಭವಾದದ್ದು 1948ರ ಅಕ್ಟೋಬರ್ 15ರಂದು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಆಗ ಒಂದು ವರ್ಷವಾಗಿತ್ತಷ್ಟೇ. 'ಸ್ವಾತಂತ್ರ್ಯ' ನಿಭಾಯಿಸುವಷ್ಟು ಭಾರತ ಪ್ರಬುದ್ಧವಾಗಿಲ್ಲ ಎಂಬ ಅಭಿಪ್ರಾಯವಿದ್ದಾಗಲೇ ಸ್ವಾತಂತ್ರ್ಯ ಲಭಿಸಿದ್ದ ಆ ಕ್ಷಣದಲ್ಲಿ ಹತ್ತುಹಲವು ನಿರೀಕ್ಷೆಗಳಿದ್ದವು. ಸ್ವಾತಂತ್ರ್ಯವನ್ನು ಸಮರ್ಥವಾಗಿ ನಿಭಾಯಿಸಿ ಭಾರತದ ಶಕ್ತತೆಯನ್ನು ಸಾಬೀತುಪಡಿಸುವ ಸವಾಲುಗಳಿದ್ದವು. ದೇಶದ ಆಡಳಿತವನ್ನು ನಿಭಾಯಿಸುವ ನೇತಾರರು ಇಡಬೇಕಾದ ಹೆಜ್ಜೆಗಳನ್ನು ಸಮರ್ಪಕವಾಗಿ ಗುರುತಿಸುವಂಥ, ಎಡವಿದಾಗ ಎಚ್ಚರಿಸುವಂಥ ಬರಹಗಳ ಅವಶ್ಯಕತೆಯಿತ್ತು. ಕನ್ನಡ

ಜನತೆಯ ಆಶೋತ್ತರಗಳು ಏನಾಗಬೇಕು? ಎಂಬುದನ್ನು ಕಂಡರಿಸುವಂಥ ಅಭಿವ್ಯಕ್ತಿಕ್ರಮದ ಅನಿವಾರ್ಯತೆಯಿತ್ತು. ಈ ಅನಿವಾರ್ಯತೆಯನ್ನು ಗಮನದಲ್ಲಿರಿಸಿಕೊಂಡು ಪತ್ರಿಕಾಧರ್ಮ ಮತ್ತು ಕರ್ನಾಟಕದ ಅಭ್ಯುದಯ ಎರಡನ್ನೂ ಜೀವಮಂತ್ರವಾಗಿಸಿಕೊಂಡು ಕಾರ್ಯೋನ್ಮುಖವಾದ ಪತ್ರಿಕೆ ಪ್ರಜಾವಾಣಿ. ತಂತ್ರಜ್ಞಾನದಲ್ಲಿ ಆದ ಬದಲಾವಣೆಗೆ ಪಕ್ಕಾಗಿ ಅದನ್ನು ಬಳಸಿಕೊಂಡು ಪತ್ರಿಕೆ ಮುದ್ರಿತವಾಗಿ ಓದುಗರ ವಿಶ್ವಾಸಕ್ಕೆ ಪಾತ್ರವಾಯಿತು. ಸ್ವಾತಂತ್ರ್ಯೋತ್ತರ ಕಾಲದ ಕನ್ನಡ ಪತ್ರಿಕೋದ್ಯಮದ ಇತಿಹಾಸವು 'ಪ್ರಜಾವಾಣಿ' ದಿನಪತ್ರಿಕೆಯ ಕೊಡುಗೆಗಳ ಪ್ರಸ್ತಾಪವಿಲ್ಲದೇ ಪೂರ್ಣಗೊಳ್ಳುವುದಿಲ್ಲ.

ಭಾಷಾವಾರು ಪ್ರಾಂತ್ಯಗಳು ರಚನೆಯಾದ ನಂತರವೂ ಕನ್ನಡವನ್ನೇ ಮಾತನಾಡುತ್ತಿದ್ದ ಕೆಲಪ್ರದೇಶಗಳು ನೆರೆರಾಜ್ಯಗಳ ಪಾಲಾಗಿದ್ದವು. ಉದಯವಾಗಿದ್ದ ಕರ್ನಾಟಕದ ವ್ಯಾಪ್ತಿಯ ಆಚೆಗೇ ಉಳಿದು ಇನ್ನೊಂದು ರಾಜ್ಯದವರಾಗಿ ಅಲ್ಲಿಯ ಕನ್ನಡಿಗರು ಗುರುತಿಸಲ್ಪಟ್ಟರು. ಆದರೂ, ಕನ್ನಡ, ಕನ್ನಡ ನೆಲದೆಡೆಗಿನ ಅವರ ಕರಳು-ಬಳ್ಳಿಯ ಸಂಬಂಧ ಕೊನೆಯಾಗಲಿಲ್ಲ. ಆಡಳಿತ ಭಾಷೆ ಬೇರೆಯಾಗಿದ್ದರೂ ಕನ್ನಡವೇ ಅವರ ಮಾತೃಭಾಷೆಯಾಗಿಯೇ ಮುಂದುವರೆಯಿತು. ಅಂಥ ಕಡೆಯಲ್ಲೆಲ್ಲಾ ತಲುಪಿ, ಕನ್ನಡದ, ಕನ್ನಡ ಬದುಕಿನ ವಿವರಗಳನ್ನು ಓದುವ ಅವಕಾಶವನ್ನು ಒದಗಿಸಿದ್ದು ಪ್ರಜಾವಾಣಿ. ರಾಯಚೂರಿಗೆ ಸಮೀಪವಿರುವ ಕೃಷ್ಣಾ ಮತ್ತು ಸುತ್ತಮುತ್ತಲಿನ 13 ಹಳ್ಳಿಗಳನ್ನು ಇಲ್ಲಿ ನಿದರ್ಶನವಾಗಿಸಬಹುದು. ಕೃಷ್ಣಾ ಗ್ರಾಮ ಆಂಧ್ರಪ್ರದೇಶದ ಮಹಬೂಬ್‌ನಗರ ಜಿಲ್ಲೆಯ ಮಕ್ತಲ್ ತಾಲೂಕಿನ ವ್ಯಾಪ್ತಿಯಲ್ಲಿದೆ. ಈಗಲೂ ಈ ಗ್ರಾಮವೂ ಸೇರಿದಂತೆ ಸುತ್ತಲಿನ ಹಳ್ಳಿಗಳ ಜನತೆಯ ಮಾತೃಭಾಷೆ ಕನ್ನಡ. ಇಲ್ಲಿಗೆ ಪ್ರಜಾವಾಣಿ ತಲುಪುತ್ತಿತ್ತು. ಪ್ರಜಾವಾಣಿ ಆರಂಭದಿಂದಲೂ ಹೊಂದಿದ ಪ್ರಭಾವಕ್ಕೆ ಇದು ಸಾಕ್ಷಿಯಾಗುತ್ತದೆ. ಕರ್ನಾಟಕ ಪತ್ರಿಕಾ ಅಕಾಡೆಮಿ ಹೊರತಂದ, ಹಿರಿಯ ಪತ್ರಕರ್ತ ಎಸ್.ವಿ.ಜಯಶೀಲರಾವ್ ಅವರು ಬರೆದ 'ಟಿಯೆಸ್ಸಾರ್' ಕೃತಿಯಲ್ಲಿ ಪ್ರಜಾವಾಣಿ ಮತ್ತು ಟಿಯೆಸ್ಸಾರ್ ಅವರ ವಿಶೇಷತೆಯನ್ನು ಹೀಗೆ ಗುರುತಿಸಿದ್ದಾರೆ. "ಹಂಚಿಹೋಗಿದ್ದ ಕನ್ನಡಿಗರು ಒಂದಾಗುವ ಮುನ್ನ ಹಾಗೂ ಒಂದಾದ ನಂತರ, ಒಲಿದು ಒಪ್ಪಿ ಆಲಂಗಿಸಿದ ಪ್ರಜಾವಾಣಿಯ ಈ ರಂಜನೀಯ ಪ್ರಯಾಣದ ನೇತಾರರು ಟಿ.ಎಸ್.ರಾಮಚಂದ್ರರಾಯರು."

ಈಗ ಚುನಾವಣೆಯ ಸಂದರ್ಭದಲ್ಲಿ ಸಾಮಾನ್ಯ ಎಂಬಂತೆ ಪ್ರಕಟವಾಗುವ ಚುನಾವಣಾ ಸಮೀಕ್ಷೆ ಮತ್ತಿತರ ವಿಶೇಷ ವರದಿಗಳನ್ನು ಓದುಗರಿಗೆ ತಲುಪಿಸುವ ಕಾಳಜಿಯನ್ನು ಆ ಕಾಲದಲ್ಲಿಯೇ ತೋರಿದವರು ಟಿಯೆಸ್ಸಾರ್. ಸ್ವತಂತ್ರ ಭಾರತದ ಸಂವಿಧಾನದ ಆಶ್ರಯದಲ್ಲಿ 1952ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದಾಗ ಚುನಾವಣೆ ಕುರಿತ ಸಮಗ್ರ ವಿವರಗಳನ್ನು ಕಲೆಹಾಕಿ ಬರೆಯುವಂತೆ ಅವರು ವರದಿಗಾರರಿಗೆ ಸೂಚಿಸಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು. ಚುನಾವಣೆಗೆ ಸಂಬಂಧಿಸಿದಂತೆ ಕಂಡದ್ದು, ಕೇಳಿದ್ದನ್ನು ಸುದ್ದಿಯಾಗಿಸಬೇಕು; ಆ ಸುದ್ದಿ ಮತದಾರರ ಮೇಲೆ ಸಕಾರಾತ್ಮಕ ಪ್ರಭಾವ ಬೀರಬೇಕು ಎಂಬ ಅವರ ಆಶಯಕ್ಕೆ ತಕ್ಕಂತೆಯೇ ಪ್ರಜಾವಾಣಿಯ ವರದಿಗಾರರು ಕಾರ್ಯನಿರ್ವಹಿಸಿದರು. ಚುನಾವಣಾ ಸಮೀಕ್ಷೆಯ ಹೆಸರಲ್ಲಿ ಪ್ರಕಟವಾಗುತ್ತಿರುವ, ಬಿತ್ತರವಾಗುತ್ತಿರುವ ಈಗಿನ ವರದಿಗಳ ಹಿಂದಿನ ಪ್ರಭಾವ-ಒತ್ತಡ-ವಶೀಲಿಬಾಜಿಗಳ ವಿವರಗಳನ್ನು ಗಮನಿಸಿದ್ದಿದ್ದರೆ ಟಿಯೆಸ್ಸಾರ್ ಹೇಗೆ ಪ್ರತಿಕ್ರಿಯಿಸುತ್ತಿದ್ದರೋ ಗೊತ್ತಿಲ್ಲ.

ಸಂಪಾದಕರಾಗಿ ಟಿಯೆಸ್ಸಾರ್ ಪ್ರಯೋಗಶೀಲತೆ ಎಂಥದ್ದು ಎಂಬುದಕ್ಕೆ ಅವರು ಪ್ರಜಾವಾಣಿ ಮೂಲಕ ಪರಿಚಯಿಸಿದ 'ಸದನ ಸಮೀಕ್ಷೆ' ಅಂಕಣ ನಿದರ್ಶನವಾಗುತ್ತದೆ. ವಿಧಾನಸಭೆಯ ಕಾರ್ಯಕಲಾಪಗಳ ಸಂದರ್ಭದಲ್ಲಿ ತಮ್ಮಿಂದ ಚುನಾಯಿತರಾದ ಪ್ರತಿನಿಧಿಗಳು ಯಾವ ಪಾತ್ರವನ್ನು ನಿಭಾಯಿಸುತ್ತಾರೆ ಎಂಬ ಕುತೂಹಲ ಜನರಲ್ಲಿರುತ್ತದೆ. ಆ

ಕುತೂಹಲಕ್ಕನುಗುಣವಾಗಿ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವ ಮೂಲಗಳಿಗಾಗಿ ಅವರು ಹುಡುಕುತ್ತಿರುತ್ತಾರೆ. ಹಾಗೆ ಶೋಧಿಸುತ್ತಿರುವಾಗಲೇ ಅವರಿಗೆ ಬೇಕಾದುದನ್ನು ಒದಗಿಸಿದರೆ ಪತ್ರಿಕೆಯೊಂದು ಅವರ ವಿಶ್ವಾಸಕ್ಕೆ ಪಾತ್ರವಾಗುತ್ತದೆ. ಆ ಮೂಲಕ ಅವರನ್ನು ಪತ್ರಿಕೆಯ ಖಾಯಂ ಓದುಗರನ್ನಾಗಿಸಬಹುದು. ಓದುಗರಲ್ಲದವರನ್ನೂ ಓದುಗರನ್ನಾಗಿಸುವಿಕೆ, ಹಾಗೆ ಓದುಗರಾದವರು ಪತ್ರಿಕೆಯ ಓದನ್ನು ನಿಲ್ಲಿಸದಂತೆ ವಹಿಸುವ ಎಚ್ಚರಿಕೆ ಸಾಧ್ಯವಾಗಬೇಕಾದರೆ ಓದುಗರ ನಾಡಿಮಿಡಿತ (ಖಜಚಿಜಜಿಡಿ' ಕಣ್ಟಜ)ವನ್ನು ಸಂಪಾದಕರಾದವರು ಬಲ್ಲವರಾಗಿರಬೇಕು. ಓದುಗರ ನಾಡಿಮಿಡಿತ ಅರ್ಥೈಸಿಕೊಂಡು 'ಸದನ ಸಮೀಕ್ಷೆ' ಅಂಕಣವನ್ನು ಆರಂಭಿಸಿದ ಟಿಯೆಸ್ಸಾರ್ ದಿನಪತ್ರಿಕೆಯೊಂದರ ವರದಿಯ ಸಾಧ್ಯತೆಗಳಿಗೇ ಹೊಸ ಆಯಾಮವನ್ನು ದೊರಕಿಸಿಕೊಟ್ಟರು. ಈಗಲೂ ಉಭಯ ಸದನಗಳ ಸಮೀಕ್ಷಾ ವಿವರಗಳು ಪ್ರಜಾವಾನಿ ದಿನಪತ್ರಿಕೆಯಲ್ಲಿ ಪ್ರಕಟವಾಗುತ್ತಿವೆ. ವ್ಯಾಪಕ ಮನ್ನಣೆಯನ್ನೂ ಗಳಿಸಿಕೊಳ್ಳುತ್ತಿವೆ.

ಕನ್ನಡ ನಾಡು 1957 ನವೆಂಬರ್ 1ರಂದು ಉದಯವಾದಾಗ ಆ ಹುಟ್ಟುಹಬ್ಬ ಆಚರಿಸುವ ಆಸಕ್ತಿಯನ್ನು ಸರ್ಕಾರ ತೋರಲಿಲ್ಲ. ಆಗ ಪ್ರಜಾವಾಣಿ ಕಛೇರಿಯಲ್ಲಿ ರಾಜ್ಯೋತ್ಸವ ಆಯೋಜಿಸಿದ್ದು, ಆ ಸಂದರ್ಭದಲ್ಲಿ ವ್ಯಕ್ತವಾದ 'ಕನ್ನಡಪರ' ಆಶಯಗಳನ್ನು ವಿಸ್ತೃತವಾಗಿ ಪ್ರಕಟಿಸಿದ್ದು – ಇವು ಟಿಯೆಸ್ಸಾರ್ ಕನ್ನಡಪರ ಕಾಳಜಿಯನ್ನು ನಿರೂಪಿಸುತ್ತವೆ. ಪತ್ರಿಕೆಯ ಸಂಪಾದಕೀಯ ವರ್ಗದಲ್ಲಿ ಅರ್ಹತೆಯ ಆಧಾರದ ಮೇಲೆ ಸಮಾಜದ ಎಲ್ಲ ವರ್ಗಗಳಿಗೆ ಪ್ರಾತಿನಿಧ್ಯ ದೊರಕಿಸುವ ಆಡಳಿತವರ್ಗದ ನೀತಿಯನ್ನು ಶ್ರದ್ಧೆಯಿಂದ ಅನುಷ್ಠಾನಕ್ಕೆ ತಂದದ್ದು, ಸಂಪಾದಕರಾಗಿದ್ದ 27 ವರ್ಷಗಳ ಅವಧಿಯಲ್ಲಿ ರಾಜ್ಯದ ಬೆಳವಣಿಗೆ, ಸಂಘರ್ಷ, ಅಭಾವ, ಅತೃಪ್ತಿ, ಸಂತಸ, ಸಮೃದ್ಧಿ, ಶಾಂತಿ–ಅಶಾಂತಿ, ಸೋಲು, ಸಾಧನೆ, ಅತಿವೃಷ್ಟಿ–ಅನಾವೃಷ್ಟಿಗಳಿಗೆಲ್ಲಾ ಪತ್ರಿಕೆಯ ಮೂಲಕ ಟಿಯೆಸ್ಸಾರ್ ಪ್ರತಿಕ್ರಿಯಿಸಿದ ರೀತಿ ಎಂಥದ್ದಾಗಿತ್ತು ಎಂಬುದನ್ನು ಎಸ್.ವಿ.ಜಯಶೀಲರಾವ್ ತಮ್ಮ ಕೃತಿಯಲ್ಲಿ ಪರಿಚಯಿಸಿದ್ದಾರೆ.

ಟಿಯೆಸ್ಸಾರ್ ಎಂದಾಕ್ಷಣ ನೆನಪಾಗುವುದು 'ಛೂ ಬಾಣ' ಅಂಕಣ. ಸಂಪಾದಕರು, ಉಪಸಂಪಾದಕರಾದವರು ವರದಿ ತಿದ್ದುಪಡಿ, ಮರುಬರಹ, ಪುಟಸಿದ್ಧತೆ, ಪುಟವಿನ್ಯಾಸ ಮತ್ತಿತರ ದಿನನಿತ್ಯದ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಉಳಿದೆಲ್ಲರಿಗಿಂತ ಭಿನ್ನವಾಗಿ ಹೇಗೆ ಗುರುತಿಸಿಕೊಳ್ಳುತ್ತಾರೆ ಎನ್ನುವುದರಲ್ಲಿಯೇ ಅವರ ಹೆಗ್ಗಳಿಕೆಯಿರುತ್ತದೆ. ಅಂಕಣಬರಹಗಳು ಹಾಗೆ ಭಿನ್ನವಾಗಿ ಗುರುತಿಸಿಕೊಳ್ಳಲು ಸಹಾಯಕವಾಗುತ್ತವೆ. ಉಪಸಂಪಾದಕರ ಬರಹ ಸಾಮರ್ಥ್ಯ ಕರಡು ತಿದ್ದಿ ಒಪ್ಪಓರಣವಾಗಿ ಓದುಗರ ಕೈಗೆ ವರದಿಗಳನ್ನು ಪ್ರಸ್ತುತಪಡಿಸುವುದಕ್ಕೆ ಮಾತ್ರ ಸೀಮಿತವಾದರೆ ಅವರು ತೆರೆಮರೆಯಲ್ಲಿ ಅನಾಮಿಕರಾಗಿಯೇ ಉಳಿಯಬೇಕಾಗುತ್ತದೆ. ಆ ವರದಿಗಾರನಿಗೆ ನಮ್ಮಿಂದಲೇ ಹೆಸರು, ಖ್ಯಾತಿ ಎಂದು ಬೀಗಿ, ನಮ್ಮನ್ಯಾರೂ ಗಮನಿಸುವುದೇ ಇಲ್ಲ ಎಂದು ಕೊರಗುವ ಉಪಸಂಪಾದಕರಿಗೆ ಟಿಯೆಸ್ಸಾರ್ ಕಾರ್ಯವೈಖರಿಯು ಗುರುತಿಸಿಕೊಳ್ಳುವ ದಾರಿಗಳನ್ನು ತೋರಿಸುತ್ತದೆ. ಈ ನೆಲೆಯಲ್ಲಿಯೇ ಅವರ 'ಛೂ ಬಾಣ' ಅಂಕಣ ಮುಖ್ಯವೆನಿಸುತ್ತದೆ. ಸಂಪಾದಕರಾಗಿ ನಿಭಾಯಿಸಬೇಕಾದ ಜವಾಬ್ದಾರಿಗಳ ಒತ್ತಡದ ನಡುವೆಯೂ ಅವರು ಈ ಅಂಕಣವನ್ನು ನಿರಂತರವಾಗಿ ಬರೆದರು.

ಜಯಶೀಲರಾವ್ ಗುರುತಿಸುವಂತೆ 'ಛೂಬಾಣ' ಅಂಕಣ ಹಾಸ್ಯ, ವ್ಯಂಗ್ಯ, ವಿಡಂಬನೆ, ಟೀಕೆ, ಪ್ರಶಂಸೆಗಳ ಮೂಲಕ ಅನುದಿನದ ವಿದ್ಯಮಾನಗಳಿಗೆ ತನ್ನದೇ ಆದ ಕನ್ನಡಿ ಹಿಡಿಯುತ್ತಿತ್ತು. ಯಾರ ಭಯವೂ, ಯಾರ ಹಂಗೂ

ಅದಕ್ಕಿರಲಿಲ್ಲ. ಹೆದರಿಕೆ ಹತ್ತಿರಕ್ಕೆ ಸುಳಿಯಲೂ ಇಲ್ಲ. ಅಕ್ರಮ, ಅನ್ಯಾಯ, ಅತಿಕ್ರಮ ಅಪಚಾರ, ದುರ್ನಡತೆ, ಮೋಸ, ಶೋಷಣೆಯ ಪ್ರಯತ್ನ–ಪ್ರಸಂಗ–ಪ್ರಕರಣ ಛೂ ಬಾಣಕ್ಕೆ ಗುರಿಯಾಗಿದ್ದವು. ಭಾಷೆ ಹಾಗೂ ಶೈಲಿಯ ಬಳಕೆಗೇ ಹೊಸ ಆಯಾಮ ಹಾಗೂ ಅರ್ಥಗಳನ್ನು ನೀಡಿ ಭಾಷಾ ಸಂಪತ್ತನ್ನು ಬೆಳೆಸಿದ, ಜನರನ್ನು ಖುಷಿಪಡಿಸಿದ 'ಛೂ ಬಾಣ' ಟಿಯೆಸ್ಸಾರ್ ಇದ್ದಷ್ಟು ಕಾಲ ಇತ್ತು. ಅವರೊಡನೆಯೇ ಕಾಲದಲ್ಲಿ ಲೀನವೂ ಆಯಿತು.

'ಛೂ ಬಾಣ'ದ ತೀವ್ರತೆ ಎಂಥದ್ದು ಎಂಬುದನ್ನು 'ಕವನ ಕುತೂಹಲ' ಶೀರ್ಷಿಕೆಯಡಿ ಬರೆದ ಈ ಬರಹ ಮನವರಿಕೆ ಮಾಡಿಕೊಡುತ್ತದೆ; ಜನಪ್ರಿಯ ಚಿತ್ರಗೀತೆಗಳನ್ನು ಅನುಸರಿಸಿ, ವಿಧಾನಸೌಧದ ಮೇಲೆ ವಿಧವಿಧವಾದ ಆಶುಕವಿತೆಗಳನ್ನು ಬರೆಯಬಹುದು. ಉದಾಹರಣೆಗೆ –

***ಕನ್ನಡ ನಾಡಿನ ವಿಧಾನಸೌಧ, ನಿಜಲಿಂಗಪ್ಪಗೆ ವಿಷಾದ ಸೌಧ***

***ಅರಸು ನಂಬಿದರ್ಗೆ ಉದಾರಸೌಧ***

***ಕನ್ನಡನಾಡಿಗೊಂದೇ ವಿಧಾನಸೌಧ***

***ಫೈಲುಹೋದರೆ ನಿಧಾನಸೌಧ***

***ಪುಢಾರಿಗಳಿಗೇ ವ್ಯವಧಾನ ಸೌಧ, ನಮ್ಮ ಸೌಧ, ನಮ್ಮ ಸೌಧ***

***ನಮ್ಮದೇ ಸೌಧ!!!***

ಬಿ.ಎಂ.ಕೃಷ್ಣಸ್ವಾಮಿ ಅವರು ಟಿಯೆಸ್ಸಾರ್ ವ್ಯಕ್ತಿತ್ವವನ್ನು ಹೀಗೆ ಪರಿಚಯಿಸುತ್ತಾರೆ; ಕನ್ನಡಕ್ಕೇ ಅಗ್ರಸ್ಥಾನ ಎನ್ನುವುದರಿಂದ ಆರಂಭಿಸಿ, ಆಡಳಿತದ ಭ್ರಷ್ಟಾಚಾರದವರೆಗೆ ವಿವಿಧ ಹಂತಗಳಲ್ಲಿ ಕಂಡ ಅನ್ಯಾಯ–ಅಕ್ರಮಗಳ ವಿರುದ್ಧ 'ಪ್ರಜಾವಾಣಿ' ನಡೆಸುತ್ತಿದ್ದ ಜನಪರ ಹೋರಾಟಕ್ಕೆ ಇಂಬು ನೀಡುತ್ತಿದ್ದುದು, ಪ್ರಭಾವ–ದಾಕ್ಷಿಣ್ಯಗಳಿಗೆ ಮಣಿಯದ ಇಂಥ ಹೋರಾಟ ನಿರಂತರವಾಗಿ ಪತ್ರಿಕೆಯಲ್ಲಿ (ತುರ್ತು ಪರಿಸ್ಥಿತಿ ಘೋಷಿಸಿದ್ದಾಗಲೂ) ಟಿಯೆಸ್ಸಾರರ ಅದಮ್ಯ ಚೇತನದ ಕುರುಹು ಮಾತ್ರ.

ಮಾಧ್ಯಮ ರಂಗದಲ್ಲಿ ಕಾರ್ಯನಿರ್ವಹಿಸಬೇಕೆನ್ನುವ ಉತ್ಸಾಹಿಗಳೆಲ್ಲರಿಗೂ ಮಾದರಿಯಾಗುವಂಥ ವ್ಯಕ್ತಿತ್ವ ಟಿಯೆಸ್ಸಾರ್ ಅವರದ್ದಾಗಿತ್ತು. ಪ್ರತಿಯೊಂದು ಕಾಲಘಟ್ಟದಲ್ಲಿಯೂ ಅನೇಕರು ಪತ್ರಿಕೆ, ರೇಡಿಯೋ, ಟೆಲಿವಿಷನ್ ಸುದ್ದಿವಾಹಿನಿಗಳನ್ನು ಪ್ರತಿನಿಧಿಸುತ್ತಾರೆ. ಹಾಗೆ ಪ್ರತಿನಿಧಿಸುತ್ತಾ ಅವರು ಏನನ್ನು ಅಭಿವ್ಯಕ್ತಿಸಿದರು? ಸಾಮಾಜಿಕವಾಗಿ ಅವರ ಅಭಿವ್ಯಕ್ತಿಗಿರುವ ಪ್ರಾಮುಖ್ಯತೆ ಏನು? ಆ ಅಭಿವ್ಯಕ್ತಿ ಸಾಧ್ಯವಾಗಿಸಿದ ಬದಲಾವಣೆಯ ಸಾಧ್ಯತೆಗಳು ಎಂಥವು? ಅಂಥ ಪ್ರಯೋಗಶೀಲ ಅಭಿವ್ಯಕ್ತಿ ಯಾವ್ಯಾವ ಕಾರಣಗಳಿಗೆ ಮಾಧ್ಯಮ ಇತಿಹಾಸದಲ್ಲಿ ದಾಖಲೆಯಾಗಿ ಉಳಿಯುತ್ತದೆ? ಈ ಹಿನ್ನೆಲೆಯಲ್ಲಿ ಪತ್ರಕರ್ತನೊಬ್ಬನ ವ್ಯಕ್ತಿತ್ವ ಇತಿಹಾಸದ ಪುಟಗಳಲ್ಲಿ ಸ್ಮರಣಾರ್ಹವೆನಿಸುತ್ತದೆ. ಆ ಮೂಲಕ ನಾಳಿನ ಪತ್ರಕರ್ತರಿಗೆ ಮಾರ್ಗದರ್ಶಿ ಸೂತ್ರಗಳನ್ನು ಕಟ್ಟಿಕೊಡುತ್ತದೆ.

ಟಿ.ಎಸ್.ರಾಮಚಂದ್ರರಾವ್ ಮಾತ್ರವಲ್ಲದೇ ಕನ್ನಡ ಪತ್ರಿಕೋದ್ಯಮದಲ್ಲಿ ಭಾಷಿಕ ನೆಲೆಯಲ್ಲಿ ವಿವಿಧ ಪ್ರಯೋಗಗಳನ್ನು ನಡೆಸಿದ ಪ್ರತಿಭಾನ್ವಿತರಿದ್ದಾರೆ. ಖಾದ್ರಿ ಶಾಮಣ್ಣ, ಶ್ಯಾಮರಾವ್ ಮತ್ತಿತರರು ಕನ್ನಡ ಪತ್ರಿಕಾ ರಂಗದಲ್ಲಿ ಭಾಷಿಕವಾಗಿ ಕೊಡುಗೆಗಳನ್ನು ನೀಡಿದ್ದಾರೆ.

**ಪತ್ರಿಕಾ ವರದಿ ಮತ್ತು ಭಾಷೆ**

- ಪತ್ರಿಕಾ ವರದಿಯಲ್ಲಿ ಬಳಸಲಾಗುವ ಭಾಷೆಯು ಆಯಾ ಕಾಲಘಟ್ಟದ ಸಾಂಸ್ಕೃತಿಕ ಸಂದರ್ಭವನ್ನು ಹಿಡಿದಿಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಒಂದು ಭಾಷೆಯ ವೈವಿಧ್ಯಮಯ ಸೊಗಡನ್ನು ಸಮಗ್ರವಾಗಿ ಬಳಸಿಕೊಳ್ಳುವ ಪ್ರಯೋಗಶೀಲತೆಯು ಸಾಧ್ಯವಾಗುವುದು ವರದಿಗಳ ಮುಖಾಂತರವೇ.
- ವರದಿಯು ಥಟ್ಟನೆ ಗಮನ ಸೆಳೆಯುವ ಚಿಕ್ಕದಾದ–ಚೊಕ್ಕವಾದ ಪತ್ರಿಕಾ ಬರಹ ಪ್ರಕಾರವಾಗಿರುವುದರಿಂದ ಆ ಮೂಲಕ  ಪತ್ರಕರ್ತರು ತಮ್ಮ ಭಾಷಾ ಕೌಶಲ್ಯವನ್ನು ಸಮರ್ಥವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ.
- ಶೀರ್ಷಿಕೆಯೇ ವರದಿಯನ್ನು ಓದಿಸಿಕೊಳ್ಳುವಂತಾಗಿಸುವ ಮುಖ್ಯ ಪರಿಕರವಾಗಿರುವುದರಿಂದ ಪತ್ರಿಕಾ ಸಂಪಾದಕರು, ಉಪಸಂಪಾದಕರು ಮತ್ತು ವರದಿಗಾರರು ಈ ಕುರಿತು ಎಚ್ಚರವಹಿಸುತ್ತಾರೆ. ಗಂಭೀರ ವರದಿಗೆ ಗಂಭೀರ ಶೀರ್ಷಿಕೆ, ವ್ಯಂಗ್ಯಾತ್ಮಕವಾದ ಹೇಳಿಕೆಗಳಿಗೆ ಅದಕ್ಕೆ ತಕ್ಕಂತಹ ಶೀರ್ಷಿಕೆ, ವಿಡಂಬನಾತ್ಮಕವಾದ ವರದಿಗೆ ಅದೇ ತೆರನಾದ ತಲೆಬರಹ... ಹೀಗೆ ಒಂದೊಂದು ಬಗೆಯಲ್ಲಿ ತಲೆಬರಹಗಳನ್ನು ಬರೆಯುತ್ತಾರೆ.
- ಪ್ರಸ್ತಾವನೆಯಲ್ಲೂ ಭಾಷೆಯ ಸೊಗಡಿನ ಸಮಗ್ರತೆಯನ್ನು ಹಿಡಿದಿಡುವ ಸಾಧ್ಯತೆಗಳು ಹತ್ತುಹಲವು. ರಾಜ್ಯವೊಂದರ ವ್ಯಾಪ್ತಿಯಲ್ಲಿಯ ಪ್ರಾದೇಶಿಕ ಭಿನ್ನತೆಗಳಿಗೆ ಅನುಗುಣವಾಗಿ ಪ್ರಸ್ತಾವನೆಯು ನಿರೂಪಿತವಾಗಬಹುದು. ಈ ಬಗೆಯ ನಿರೂಪಣೆ ಇಡೀ ಸುದ್ದಿಯ ಓದನ್ನು ಸುಲಭಸಾಧ್ಯವಾಗಿಸುತ್ತದೆ.
- ಶೀರ್ಷಿಕೆ ಮತ್ತು ಪ್ರಸ್ತಾವನೆ ಇವೆರಡನ್ನೂ ಬರೆಯುವ ಕಾಲಕ್ಕೆ ವರದಿಗಾರರೆಲ್ಲರೂ ವರದಿಯ ಒಟ್ಟು ಪರಿಣಾಮದ ಬಗ್ಗೆ ಆಲೋಚಿಸುತ್ತಿರುತ್ತಾರೆ. ಇವೆರಡು ಹಂತಗಳನ್ನು ದಾಟಿಯಾದ ಮೇಲೆ ತಾವು ಸಂಗ್ರಹಿಸಿದ ವಿವರಗಳನ್ನು ಆದ್ಯತೆಯ ಮೇಲೆ ಪ್ರಸ್ತುತಪಡಿಸುತ್ತಾರೆ. ಈ ಹಂತದಲ್ಲಿ ಅವರೊಳಗಿನ ಭಾಷಾ ಸಾಮರ್ಥ್ಯವೇ ಪ್ರಮುಖ ಪಾತ್ರವಹಿಸುತ್ತದೆ.
- ಎಲ್ಲ ವರದಿಗಾರರೂ ಪದಗಳ ಬಳಕೆಯಲ್ಲಿ ಪ್ರಯೋಗಶೀಲತೆಯನ್ನು ಮೆರೆಯುವುದಿಲ್ಲ. ಕೆಲವರಿಗೆ ಮಾತ್ರ ಪ್ರಯೋಗಶೀಲತೆ ಸಾಧ್ಯವಾಗುತ್ತದೆ. ಇನ್ನೂ ಕೆಲವರು ಸಾಂಪ್ರದಾಯಿಕ ಭಾಷಾ ಬಳಕೆಯೊಂದಿಗೆ ಸಾಂಪ್ರದಾಯಿಕ ನಿರೂಪಣೆಯಲ್ಲಿಯೇ ಖುಷಿ ಕಾಣುತ್ತಾರೆ. ಈ ಕಾರಣಕ್ಕಾಗಿಯೇ ಕೆಲವೇ ಪತ್ರಿಕೆಗಳು ಭಿನ್ನತೆಯೊಂದಿಗೆ ಗುರುತಿಸಿಕೊಳ್ಳುತ್ತವೆ. ಇನ್ನೂ ಕೆಲವು ಪತ್ರಿಕೆಗಳು ಹಲವರ ಗಮನ ಸೆಳೆಯುವುದಿಲ್ಲ.
- ದಿನಪತ್ರಿಕೆಗಳ ವರದಿಯ ಭಾಷೆಗೂ ಮತ್ತು ಟ್ಯಾಬ್ಲಾಯಿಡ್‌ಗಳ ಬರಹಗಳ ಭಾಷೆಗೂ ಹಲವು ವ್ಯತ್ಯಾಸಗಳನ್ನು ಗುರುತಿಸಬಹುದು. ದಿನಪತ್ರಿಕೆಗಳ ಉದ್ದೇಶವೇ ಬದಲಾವಣೆಯನ್ನು ಸಕಾರಾತ್ಮಕ ನೆಲೆಯಲ್ಲಿ ಸಾಧ್ಯವಾಗಿಸುವುದು. ಒಂದು ವರದಿ ಸಕಾರಾತ್ಮಕ ರೀತಿಯಲ್ಲಿ ಬದಲಾವಣೆ ತರಬೇಕು. ಆ ರೀತಿಯಲ್ಲಿಯೇ ವರದಿ ಬರೆಯಲ್ಪಡಬೇಕು.

ಹೀಗೆ ಬರೆಯಲ್ಪಡುವ ವರದಿಯ ಭಾಷೆಯೂ ಸೌಜನ್ಯಯುತವಾಗಿರಬೇಕು. ವರದಿಯ ನಿರೂಪಣೆಯಲ್ಲಿ ಇಣುಕುವ ವಿಡಂಬನೆಯು ಸಹಜವಾಗಿರಬೇಕಾಗುತ್ತದೆ. ರಾಜ್ಯಗಳೆರಡರ ನಡುವಿನ ವಿವಾದದ ಕುರಿತಾದ ವರದಿಯ ನಿರೂಪಣೆ ದ್ವೇಷದ ಪರಿಭಾಷೆಯಲ್ಲಿರುತ್ತದೋ ಅಥವಾ ಸೌಹಾರ್ದತೆಯನ್ನು ಗಟ್ಟಿಗೊಳಿಸುವ ವಿವೇಚನೆಯನ್ನು ಎರಡೂ ರಾಜ್ಯಗಳವರಿಗೆ ಮನವರಿಕೆ ಮಾಡಿಕೊಡುವ ರೀತಿಯಲ್ಲಿರುತ್ತದೋ ಎಂಬುದು ಮುಖ್ಯ. ಹೀಗಾಗಿ ಪತ್ರಿಕಾ ವರದಿಯ ಭಾಷೆಯೂ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಹಿಂಸೆ, ಅತಿರೇಕ, ಅಪರಾಧ ಮತ್ತಿತರ ವಿವರಗಳು ಯಾವ ಬಗೆಯ ಭಾಷೆಯಲ್ಲಿ ವರದಿಗಳ ಮುಖಾಂತರ ನಿರೂಪಿತವಾಗುತ್ತವೆ ಎನ್ನುವುದೂ ಮುಖ್ಯ. ಈ ವಿಷಯದಲ್ಲಿ ಟ್ಯಾಬ್ಲಾಯಿಡ್‌ಗಳ ಭಾಷಾ ಬಳಕೆ ವಿಚಿತ್ರವಾಗಿರುತ್ತದೆ. ಚಿತ್ರ-ವಿಚಿತ್ರವಾದ, ಮೇಲ್ನೋಟಕ್ಕೆ ಅಸಂಬದ್ಧ ಎನ್ನಿಸಿದರೂ ಜನಕ್ಕೆ ನೋಡಿದೊಡನೇ ಇಷ್ಟವಾಗಬಹುದಾದ ಅಭಿರುಚಿಹೀನ ಪದಗಳ ಬಳಕೆಯಲ್ಲಿಯೇ ಅವುಗಳ ಭಾಷಾನಿರೂಪಣಾ ಕ್ರಮವಿರುತ್ತದೆ. ಇಂಥ ಬರಹಗಳು ಹಲವರನ್ನು ಸೆಳೆದುಕೊಳ್ಳುತ್ತವೆ. ಅದರೆ, ಓದುಗರ ಬೌದ್ಧಿಕ ಅಸ್ಮಿತೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಅವುಗಳ ಕೊಡುಗೆ ಅಷ್ಟಕ್ಕಷ್ಟೇ.

- ಇರಾಕ್ ಮೇಲೆ ಅಮೆರಿಕಾ ಯುದ್ಧ ಸಾರಿದಾಗ ವಿಶ್ವದ ಎಲ್ಲ ರಾಷ್ಟ್ರಗಳ ಮಾಧ್ಯಮಗಳು ಕ್ಷಣಕ್ಷಣದ ವಿವರಗಳನ್ನು ಕಟ್ಟಿಕೊಡುವ ಕಾಲಕ್ಕೆ ಬಳಸಿದ ಭಾಷೆ ಎಂಥದ್ದು? ಅಮೆರಿಕಾವೇ ನಿರ್ಣಾಯಕ, ಪ್ರಮುಖ ಎನ್ನುವ ಧಾಟಿಯ ವರದಿಗಳ ಭಾಷಾಧ್ವನಿ ಇತ್ತು. ಅಮೆರಿಕಾದ ಪ್ರತಿನಿಧೀಕರಣದ ದ್ಯೋತಕವಾಗಿ ವಿವಿಧ ವರದಿಗಳು ನಿರೂಪಿಸಲ್ಪಟ್ಟವು. ಇರಾಕ್ ಕ್ರೂರತನದ ಪರಮಾವಧಿಯಾಗಿ ಬಿಂಬಿಸಲ್ಪಡುವಾಗ, ಅಮೆರಿಕಾ ಮಾಡಿದ್ದೇ ಸರಿ ಎನ್ನುವಂತಹ ವಿವರಗಳುಳ್ಳ ವರದಿಗಳು ಪ್ರಸ್ತುತಪಡಿಸಲ್ಪಟ್ಟಾಗ ಭಾಷೆಯ ಬಳಕೆಯ ಸಾಧ್ಯತೆಗಳು ಹುನ್ನಾರದ ಭಾಗಗಳಾಗಿಯೇ ಬಳಸಲ್ಪಟ್ಟವು.
- ಕ್ರಿಕೆಟ್ ಪಂದ್ಯಾವಳಿ ನಡೆದರೆ ವರದಿಗಳ ಭಾಷೆಯೂ ವಿಚಿತ್ರವಾಗಿರುತ್ತದೆ. ಪಾಕಿಸ್ತಾನದೊಂದಿಗೆ ಭಾರತದ ಕ್ರಿಕೆಟ್ ತಂಡ ಆಟವಾಡುತ್ತಿರುವಾಗಲಂತೂ ಎರಡು ದೇಶಗಳೂ ಯುದ್ಧಕ್ಕಿಳಿದಿವೆಯೇನೋ ಎನ್ನುವಂಥ ಯುದ್ಧದ ಪರಿಭಾಷೆಯೇ ವಿಜೃಂಭಿಸಿರುತ್ತದೆ. ಈ ಬಗೆಯ ನಿರೂಪಣಾ ಕ್ರಮವನ್ನೇ ನೆಚ್ಚಿಕೊಂಡ ವರದಿಗಾರರ ವರದಿಗಳೇ ಬಹಳಷ್ಟು ಓದುಗರ, ಸಂಪಾದಕರ ಮೆಚ್ಚುಗೆಗೆ ಪಾತ್ರವಾಗುತ್ತಿರುವುದು ದುರದೃಷ್ಟಕರ.

**ಸುದ್ದಿ ಶೀರ್ಷಿಕೆ ಮತ್ತು ಭಾಷಾ ಪ್ರಯೋಗಶೀಲತೆ:**

ಸುದ್ದಿಮನೆಯಲ್ಲಿ ವರದಿಗಳನ್ನು ಒಪ್ಪ-ಓರಣವಾಗಿ ಓದುಗರಿಗೆ ಕೊಡಮಾಡುವ ಕೆಲಸಗಳಲ್ಲಿ ಅತ್ಯಂತ ಖುಷಿ ಕೊಡುವ, ಸವಾಲಿನ ಮತ್ತು ಕಷ್ಟದಾಯಕವಾದದ್ದೆಂದರೆ ಸುದ್ದಿ ಶೀರ್ಷಿಕೆ ಬರೆಯುವುದು. ಇತ್ತೀಚೆಗೆ ಪತ್ರಿಕೆಗಳು ವರದಿಗಾರರೇ ತಮ್ಮ ವರದಿಗಳಿಗೆ ಸೂಕ್ತ ಶೀರ್ಷಿಕೆ ಬರೆದು ಕಳುಹಿಸುವಂತೆ ಸೂಚಿಸುತ್ತವೆ. ಮೊದಲು ಹಾಗಿರಲಿಲ್ಲ. ವರದಿಗಾರ ಕಳುಹಿಸಿದ ಸುದ್ದಿಗೆ ಶೀರ್ಷಿಕೆ ನೀಡುವ ಜವಾಬ್ದಾರಿ ಉಪಸಂಪಾದಕರು ನಿಭಾಯಿಸುತ್ತಿದ್ದರು. ವಿವಿಧ ಆಯಾಮಗಳಲ್ಲಿ ವರದಿಯೊಂದನ್ನು ಬರೆದ ವರದಿಗಾರನೇ ಶೀರ್ಷಿಕೆ ಕೊಟ್ಟರೆ ಚೆನ್ನಾಗಿರುತ್ತದೆ ಎಂಬ ಕಾರಣಕ್ಕೆ ಶೀರ್ಷಿಕೆ ಕೊಡುವ ಹೊಣೆಗಾರಿಕೆ ವರದಿಗಾರರ ಹೆಗಲೇರಿದೆ. ವರದಿಗಾರರು ಕೊಟ್ಟ ಶೀರ್ಷಿಕೆ ಸೂಕ್ತವೆನಿಸದೇ ಇದ್ದರೆ ಉಪಸಂಪಾದಕರೇ ಪರಿಣಾಮಕಾರಿ ಶೀರ್ಷಿಕೆ ಕೊಡುತ್ತಾರೆ. ಸುದ್ದಿ ಶೀರ್ಷಿಕೆ ಅಥವಾ ತಲೆಬರಹದ ಮೂಲಕವೇ ವರದಿಯೊಂದು ಓದುಗರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಪರಿಣಾಮಕಾರಿ ವರದಿಯೊಂದಕ್ಕೆ ಆಕರ್ಷಕ ಶೀರ್ಷಿಕೆ

ಇಲ್ಲದಿದ್ದರೆ ಅದು ಸೊರಗುತ್ತದೆ. ಬರೆದ ಸುದ್ದಿಯೊಂದಕ್ಕೆ ಶೀರ್ಷಿಕೆ ಬರೆಯುವುದೂ ಒಂದು ವಿನೂತನ ಕೌಶಲ್ಯ. ಆ ಕೌಶಲ್ಯವು ಒಮ್ಮೆಗೆ ಒಲಿಯುವುದಿಲ್ಲ. ನಿರಂತರ ಓದು, ನಿರಂತರ ಬರವಣಿಗೆ, ವಿನೂತನ ಪದಗಳ ಸಾಂದರ್ಭಿಕ ಪ್ರಯೋಗದೆಡೆಗಿನ ಆಸಕ್ತಿ, ಬರೆದದ್ದನ್ನು ಮತ್ತಷ್ಟು ವೈಶಿಷ್ಟ್ಯವಾಗಿಸುವುದಕ್ಕೆ ಪ್ರಯತ್ನಿಸುವಿಕೆ ಇವೆಲ್ಲವೂ ಸುದ್ದಿಮನೆಯಲ್ಲಿರುವವರಲ್ಲಿ ಇರಲೇಬೇಕಾದ ಗುಣಾಂಶಗಳು. ಕನ್ನಡದಲ್ಲಿ ಸುದ್ದಿ ಬರವಣಿಗೆಯ ಕೌಶಲ್ಯಗಳನ್ನು ತಿಳಿಸುವ ಕೃತಿಗಳು ವಿರಳ ಎನ್ನಬಹುದು. ಸುದ್ದಿಮನೆಯಲ್ಲಿ ಕಾರ್ಯನಿರ್ವಹಿಸಲ್ಪಡುವ ವಿವಿಧ ಹೊಣೆಗಾರಿಕೆಗಳು ಮತ್ತು ನಿರ್ವಹಣಾ ತಂತ್ರಗಳ ಕುರಿತ ಕೃತಿಗಳು ಪ್ರಕಟಗೊಳ್ಳುತ್ತಿವೆ. ಅಂಥವುಗಳಲ್ಲಿ ಮಹತ್ವದ ಕೃತಿ 'ತಲೆಬರಹ'.

ಪತ್ರಕರ್ತರಾದ ವಿಶ್ವೇಶ್ವರ ಭಟ್ಟರು ಬರೆದ ಈ ಕೃತಿಯ ವೈಶಿಷ್ಟ್ಯವೆಂದರೆ ಓದಿಸಿಕೊಂಡು ಹೋಗುವ ಗುಣ. ಒಂದು ಸಲ ಈ ಕೃತಿಯನ್ನು ಕೈಗೆತ್ತಿಕೊಂಡರೆ ಕೊನೆಯ ಪುಟದ ಕೊನೆಯ ವಾಕ್ಯ ಪೂರ್ಣಗೊಂಡ ನಂತರವೇ ಪಕ್ಕಕ್ಕಿಡಬೇಕು. ಆರಂಭದಿಂದಲೂ ಕೊನೆಯವರೆಗೂ ತಲೆಬರಹದ ಹಿಂದಿನ ಕಸರತ್ತುಗಳು, ಆ ಕಸರತ್ತುಗಳನ್ನು ನಿರ್ವಹಿಸುವ ಕಾಲಕ್ಕೆ ಆಗುವ ಅವಾಂತರಗಳು, ತಲೆಬರಹ ಪ್ರಕಟವಾದ ನಂತರದ ವಿಚಿತ್ರ ಸನ್ನಿವೇಶಗಳು, ವಿಚಿತ್ರ ತಲೆಬರಹ ಬರೆದು ಮುಜುಗರಕ್ಕೀಡಾದವರ ಪ್ರಸಂಗಗಳು ಎಲ್ಲವನ್ನೂ ವಿಶ್ವೇಶ್ವರಭಟ್ಟರು ಭಿನ್ನವಾಗಿ ನಿರೂಪಿಸಿದ್ದಾರೆ.

ಈ ಕೃತಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳ ಕಾರ್ಯಾಲಯದಲ್ಲಿ ನಡೆದ ಪ್ರಸಂಗಗಳು ಪ್ರಸ್ತಾಪಿತವಾಗಿವೆ. ಪತ್ರಿಕೋದ್ಯಮ ಪ್ರಾಧ್ಯಾಪಕರಾಗಿ, ಪತ್ರಕರ್ತರಾಗಿ ಅಮೂಲ್ಯ ಅನುಭವಗಳನ್ನು ತಮ್ಮ ಜೊತೆಗಿರಿಸಿಕೊಂಡ ವಿಶ್ವೇಶ್ವರಭಟ್ಟರು ಪತ್ರಿಕಾ ಮಾಧ್ಯಮದ ಕುರಿತ ತಮ್ಮ ಗ್ರಹಿಕೆಗಳನ್ನು 'ತಲೆಬರಹ'ದ ಮೂಲಕ ಅನಾವರಣಗೊಳಿಸಿದ್ದಾರೆ. ಸುದ್ದಿಮನೆಯಲ್ಲಿ ಅನುಭವಿ ಪತ್ರಕರ್ತರು ಇದ್ದರೆ ಮುಂದಾಗುವ 'ಶೀರ್ಷಿಕೆ ಪ್ರಮಾದಗಳನ್ನು' ಹೇಗೆ ತಡೆಯಬಹುದು ಎಂಬ ಎಚ್ಚರಿಕೆಯ ಪ್ರಜ್ಞೆಯನ್ನೂ ಮೂಡಿಸುವಲ್ಲಿ ಈ ಕೃತಿ ಯಶಸ್ವಿಯಾಗಿದೆ.

ಪತ್ರಿಕಾ ಮಾಧ್ಯಮದ ಕುರಿತ ಬರಹಗಳು ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುವ ಆಕಾಂಕ್ಷೆಯುಳ್ಳವರಿಗೆ ಪೂರಕವಾಗುತ್ತವೆ. ಆ ಬರಹಗಳು ಮಾಹಿತಿಯ ಭಾರ ಮತ್ತು ಕಠಿಣ ಪದಪ್ರಯೋಗಗಳ ಕಾರಣಗಳಿಗಾಗಿ ಯಾರ ಓದಿಗೂ ನಿಲುಕದೇ ಉಳಿದುಬಿಡುತ್ತವೆ. ವಿಶ್ವೇಶ್ವರ ಭಟ್ಟರ ಈ ಕೃತಿ ಅಂತಹ ಅಪಾಯದಿಂದ ಪಾರಾಗಿದೆ. ಈ ಕೃತಿಯ ಪ್ರತಿಪುಟಗಳಲ್ಲೂ ಅಮೂಲ್ಯ ಮಾಹಿತಿಗಳಿವೆ. ಅವು ಓದುವಾಗ 'ಭಾರ' ಎನಿಸುವುದಿಲ್ಲ. ಶೀರ್ಷಿಕೆ ಮಾದರಿಗಳನ್ನು ಉಲ್ಲೇಖಿಸುವಾಗ ಪ್ರಸ್ತಾಪಿಸಲ್ಪಡುವ ಭಿನ್ನ ಪದಪ್ರಯೋಗಗಳು ಇಡೀ ಕೃತಿಯನ್ನು ಓದಿಸಿಕೊಂಡು ಹೋಗುತ್ತವೆ.

ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೃತಿಗಳನ್ನು ಬರೆಯುವವರು ಗಮನಿಸಲೇಬೇಕಾದ ಕೃತಿಯಾಗಿ 'ತಲೆಬರಹ' ನಮಗೆ ಮುಖ್ಯವೆನಿಸುತ್ತದೆ. ಪತ್ರಿಕೋದ್ಯಮದ ತರಗತಿಗಳಲ್ಲಿ ಈ ಕೃತಿಯ ಅಷ್ಟೂ ಪುಟಗಳಲ್ಲಿನ ಮಾಹಿತಿಯನ್ನು ಪ್ರಸ್ತಾಪಿಸಿ ವರದಿಗಾರಿಕೆಯ ತರಗತಿಗಳನ್ನು ನಿರ್ವಹಿಸಿದರೆ ವಿದ್ಯಾರ್ಥಿಗಳು ತಲೆಬರಹ ನೀಡುವ ಕೌಶಲ್ಯವನ್ನು ಕಲಿಯುವ ಆಸಕ್ತಿ ಬೆಳೆಸಿಕೊಳ್ಳಲು ಪ್ರೇರಕವಾದಂತಾಗುತ್ತದೆ. ಕೇವಲ ಮಾಧ್ಯಮ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡ ವೃತ್ತಿನಿರತರು ಮಾತ್ರವಲ್ಲದೇ ಉಳಿದ ವೃತ್ತಿಶಿಕ್ಷಣವಲಯದ ಪ್ರಾಧ್ಯಾಪಕರು, ತಜ್ಞ ಬರಹಗಾರರು ವೃತ್ತಿ ಶಿಕ್ಷಣ ಕೃತಿಗಳನ್ನು ಕಟ್ಟಿಕೊಡುವ ಮಾದರಿ ಕಂಡುಕೊಳ್ಳುವ ಕಾರಣಕ್ಕಾಗಿಯಾದರೂ ಈ ಕೃತಿಯನ್ನು ಓದಬೇಕು.

ಮುನ್ನೂರು ಪುಟಗಳಷ್ಟು ಪುಸ್ತಕವನ್ನು ಕೆಲವೇ ದಿನಗಳಲ್ಲಿ ಬರೆದಿದ್ದ ಬೀಚಿ ಅವರು ಶೀರ್ಷಿಕೆ ನೀಡಲು ಬಹಳ ದಿನಗಳನ್ನು ವ್ಯಯಿಸಿದ್ದು, ನಂತರ ಅದಕ್ಕೆ 'ಮುನ್ನೂರು ಪುಟಗಳು' ಅಂತ ಶೀರ್ಷಿಕೆ ನೀಡಿದ್ದು, ಚಿಕ್ಕಮಗಳೂರಿನಲ್ಲಿ ಭಾರಿ ಮಳೆ ಬಿದ್ದಾಗ 'ಮಳೆ..ಮಳೆ..ಮಳೆ' ಎಂಬ ಆಕರ್ಷಕ ಶೀರ್ಷಿಕೆ ಕೊಟ್ಟಿದ್ದು, ರೇಖಾಳ ಕಿರುಕುಳದಿಂದ ಬೇಸತ್ತಿದ್ದ ಆಕೆಯ ಪತಿಯ ಸ್ಥಿತಿಯನ್ನು ಬಿಂಬಿಸುವ ವರದಿಗೆ 'ಅತಿರೇಖ' ಎಂಬ ಶೀರ್ಷಿಕೆ ನೀಡಿದ್ದು, ಹೆಗ್ಗೋಡಿನ ಕೆ.ವಿ.ಸುಬ್ಬಣ್ಣ ಮ್ಯಾಗ್ಸೆಸ್ಸೆ ಪ್ರಶಸ್ತಿ ಪುರಸ್ಕೃತರಾದಾಗ 'ನೀನಾಸಂ ಸುಬ್ಬಣ್ಣಗೆ ಮ್ಯಾಗ್ಸೆಸ್ಸೆ ಹೆಗ್ಗೋಡು' ಎಂಬ ಶೀರ್ಷಿಕೆ ನೀಡಿದ್ದು, 'ಕೋಡಗನ ಕೋಳಿ ನುಂಗಿತ್ತ..' ಹಾಡು ಶಿಶುನಾಳ ಷರೀಫರದ್ದೇ? ಎಂಬ ಪ್ರಶ್ನೆಗಳು ಎದ್ದಿದ್ದಾಗ ಬರೆದ ಸುದ್ದಿಗೆ 'ಕೋಡಗನ.. ಬರೆದವನ ನುಂಗಿತ್ತಾ$ ' ಎಂಬ ಶೀರ್ಷಿಕೆಯನ್ನು ನೀಡಿದ್ದು, 'ಅಪಘಾತ:ಮದುಮಗನೇ ಗೋತಾ' ಎಂಬ ಶೀರ್ಷಿಕೆ ನೀಡಿ ಉಪಸಂಪಾದಕರೊಬ್ಬರು ಮುಜುಗರಕ್ಕೀಡಾಗಿದ್ದು, ಶಿವರಾಮ ಕಾರಂತರು ಆಸ್ಪತ್ರೆ ಸೇರಿ ಚಿಕಿತ್ಸೆ ಪಡೆಯುತ್ತಿದ್ದಾಗ 'ನಡೆದಾಡುವ ವಿಶ್ವಕೋಶ ಆಸ್ಪತ್ರೆಯ ಹಾಸುಗೆಯ ಮೇಲೆ' ಎಂದು ಶೀರ್ಷಿಕೆ ನೀಡಿದ್ದ ಸುದ್ದಿಮನೆಯವರ ವಿಚಿತ್ರ ಕೌಶಲ್ಯ... ಈ ಎಲ್ಲ ವಿವರಗಳು 'ತಲೆಬರಹ' ಕೃತಿಯನ್ನು ಕುತೂಹಲದೊಂದಿಗೆ ಓದಿಸಿಕೊಂಡು ಹೋಗುತ್ತವೆ.

**ರೇಡಿಯೋ ಪ್ರಭಾವ**

ಕಳೆದ ಶತಮಾನದಲ್ಲಿ ಮಹತ್ವಪೂರ್ಣ ಆವಿಷ್ಕಾರವಾಗಿ ಪರಿಚಿತಗೊಂಡ ಬಾನುಲಿ ತಂತ್ರಜ್ಞಾನ ಕಾಲಕಾಲಕ್ಕೆ ಹೊಸರೂಪ ಪಡೆದುಕೊಳ್ಳುತ್ತಾ ಬಾನುಲಿಯನ್ನು ಜನಸ್ನೇಹಿಯಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕೇಳುಗರನ್ನು ಆಪ್ತವಾಗಿಸಿಕೊಳ್ಳಲು ಮತ್ತು ಆ ಮೂಲಕ ಕೇಳುಗರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ರೂಪಿಸಿದ ವಿವಿಧ ಬಗೆಯ ಕಾರ್ಯಕ್ರಮಗಳನ್ನು ತಲುಪಿಸುವಲ್ಲಿಯೂ ಈ ತಂತ್ರಜ್ಞಾನದ ಕೊಡುಗೆ ಮಹತ್ವದ್ದು. ವೀಕ್ಷಕರು ಟಿವಿ ಕಾರ್ಯಕ್ರಮ, ಚಲನಚಿತ್ರವನ್ನು ನೋಡುತ್ತಾ ಗ್ರಹಿಸಬಹುದು. ರೇಡಿಯೋ ಕೇಳುಗರು ರೇಡಿಯೋ ಕಾರ್ಯಕ್ರಮಗಳನ್ನು ಕೇವಲ ಆಲಿಸುತ್ತಲೇ ಗ್ರಹಿಸಬೇಕಾಗುತ್ತದೆ. ಕೇಳುಗರ ಗ್ರಹಿಕೆಗೆ ಎಟುಕುವಂತೆ ಕಾರ್ಯಕ್ರಮಗಳನ್ನು ರೂಪಿಸಿ ತಲುಪಿಸುವ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಿದ ದೇಶದ ವಿವಿಧ ಭಾಗಗಳಲ್ಲಿರುವ ಆಕಾಶವಾಣಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನುರಿತ ತಜ್ಞ-ತಂತ್ರಜ್ಞರ ತಂಡ ಬಾನುಲಿ ಮಾಧ್ಯಮವನ್ನು 'ಜನ ಮಾಧ್ಯಮ'ವಾಗಿ ರೂಪಿಸುವಲ್ಲಿ ಶ್ರಮವಹಿಸಿದೆ.

ಜನರ ದಿನನಿತ್ಯದ ಬದುಕಿನಲ್ಲಿ 'ಧ್ವನಿ' ಸಂವಹನ ಸಾಧಿಸಿಕೊಳ್ಳಲು ನೆರವಾಗುತ್ತದೆ. ಮಾತುಗಳ ಸಂವಾಹಕ ಶಕ್ತಿಯಾಗಿ 'ಧ್ವನಿ' ಮುಖ್ಯ ಪಾತ್ರ ವಹಿಸುತ್ತದೆ. ಮಾತಿಲ್ಲದೇ ಸಂವಹನ ಸಾಧಿಸುವುದು ಕಷ್ಟಕರ. ಮಾತನಾಡುವುದು, ಮಾತನಾಡಿದ್ದನ್ನು ಆಲಿಸುವುದು, ಹಾಗೆ ಆಲಿಸುವಾಗಲೇ 'ಮಾತಿ'ನ ವಿಷಯವನ್ನು ಸಮಗ್ರವಾಗಿ ಗ್ರಹಿಸುವುದು - ಈ ಪ್ರಕ್ರಿಯೆ 'ಧ್ವನಿ'ಯ ಸಹಾಯವಿಲ್ಲದೇ ಯಶಸ್ಸು ಕಾಣುವುದಿಲ್ಲ. ಅವರವರ ಮಾತಿನ ಧಾಟಿ, ಧ್ವನಿಯ ಶಕ್ತತೆಗೆ ಅನುಗುಣವಾಗಿ ಸಂವಹನದ ಪರಿಣಾಮ ಅಳೆಯಬಹುದು. ಈ ಮಾತು, ಧ್ವನಿಯ ಅನನ್ಯತೆಯ ಕಾರಣಕ್ಕಾಗಿಯೇ ಬಾನುಲಿ ಭಿನ್ನ ಮಾಧ್ಯಮವಾಗಿ ಗುರುತಿಸಿಕೊಂಡಿದೆ.

ಟೆಲಿವಿಷನ್ ಪ್ರಸಿದ್ಧಿಗೆ ಬರದ ಕಾಲದಲ್ಲಿ ಜನರ ಪಾಲಿಗೆ ರೇಡಿಯೋ ಪಂಚಪ್ರಾಣವಾಗಿತ್ತು. ಅವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ರೇಡಿಯೋ ಸಾಧನ ಕೆಟ್ಟಿತೆಂದರೆ ತಮ್ಮದೇ ಮನೆಯ ಸದಸ್ಯರೊಬ್ಬರು ಖಾಯಿಲೆ ಬಿದ್ದಿದ್ದಾರೇನೋ ಎನ್ನುವ ಹಾಗೆ ಮೆಕ್ಯಾನಿಕ್ ಬಳಿಗೆ ಅದನ್ನು ಕೊಂಡೊಯ್ಯುತ್ತಿದ್ದರು. ಆ ಕ್ಷಣಕ್ಕೆ ಮೆಕ್ಯಾನಿಕ್ ಅವರ ಪಾಲಿಗೆ 'ರೇಡಿಯೋ ಸಾಧನ'ವನ್ನು ಬದುಕುಳಿಸುವ ದೇವಸ್ವರೂಪಿ ವೈದ್ಯನಂತಾಗುತ್ತಿದ್ದ. ಆತನೂ ಈ ಬಗೆಯ ಗೌರವ–ಮನ್ನಣೆಯನ್ನು ಗಮನಿಸಿ ಹಲವರನ್ನು ಯಾಮಾರಿಸುತ್ತಿದ್ದ. 'ರೇಡಿಯೋ ಅಂದ್ರೆ ಏನೆಂದುಕೊಂಡಿರಿ. ಒಳಗೆ ಸೂಕ್ಷ್ಮಾತಿಸೂಕ್ಷ್ಮ ವೈರ್‌ಗಳಿರುತ್ತವೆ. ಒಂದು ವೈರ್ ಕಟ್ ಆಗಿದ್ದರೂ ಅದು ಬದುಕುಳಿಯುವ ಸಾಧ್ಯತೆ ಕಡಿಮೆ. ಅದನ್ನು ನೋಡಿ ಅದನ್ನು ಹೈದ್ರಾಬಾದ್‌ನಿಂದಲೋ, ಬೆಂಗಳೂರಿನಿಂದಲೋ ತರಿಸಬೇಕಾಗುತ್ತದೆ. ತರಿಸಿದ ಮೇಲೆ ಅಳವಡಿಸಬೇಕಾಗುತ್ತದೆ. ಅದೆಲ್ಲಾ ಒಂದೆರಡು ದಿನದ ಮಾತಲ್ಲ. ತಿಂಗಳು ಬಿಟ್ಟು ಬನ್ನಿ. ನಿಮ್ಮ ರೇಡಿಯೋ ಮತ್ತೆ ಉಸಿರಾಡುವಂತೆ ಮಾಡುತ್ತೇನೆ' ಎಂದು ಆತ ಹೇಳಿದಾಗ 'ಪ್ರಭುವಿನ ಇಚ್ಛೆಯಂತಾಗಲಿ' ಎಂಬ ಭಾವದಲ್ಲಿ ಜನರು ಹಿಂದಿರುಗುತ್ತಿದ್ದರು. ಆತನೋ ಇವರೊಳಗಿನ ಮೂರ್ಖತನವನ್ನು ಕಂಡು ಒಳಗೊಳಗೇ ನಕ್ಕುಬಿಡುತ್ತಿದ್ದ. ಒಂದೆರಡು ದಿನದಲ್ಲಿ ಮಾಡಿ ಮುಗಿಸಬಹುದಾದ ರಿಪೇರಿ ಕೆಲಸಕ್ಕೆ ಒಂದು ತಿಂಗಳು ತೆಗೆದುಕೊಂಡು ವಿನಾಕಾರಣ ಸ್ಕೋಪ್ ತೆಗೆದುಕೊಳ್ಳುತ್ತಿದ್ದ. ಇವರು 'ಪಾಪ, ಅಷ್ಟೊಂದು ರೇಡಿಯೋಗಳನ್ನು ಆತನೊಬ್ಬನೇ ರಿಪೇರಿ ಮಾಡಬೇಕಾಗಿರುವುದರಿಂದ ನಮ್ಮ ರೇಡಿಯೋವನ್ನು ಈಗಲೇ ರಿಪೇರಿ ಮಾಡುವಂತೆ ಹಠ ಹಿಡಿಯುವುದು ತಪ್ಪಾಗುತ್ತದೆ ಎಂದು ಜನರು ಭಾವಿಸುತ್ತಿದ್ದರು. ಹೀಗೆ ರೇಡಿಯೋ ಮತ್ತು ಜನರ ನಡುವೆ ಅವಿನಾಭಾವ ಸಂಬಂಧವಿತ್ತು. ರೇಡಿಯೋ ಗುನುಗದಿದ್ದರೆ ಆ ಮನೆಯ ಸದಸ್ಯರಿಗೆ ಮಂಕು ಬಡಿದಂತಾಗುತ್ತಿತ್ತು. ರೇಡಿಯೋ ಕಲರವವಿಲ್ಲದ ಸ್ಮಶಾನ ಮೌನವನ್ನು ಅವರೆಂದೂ ಸಹಿಸಿಕೊಳ್ಳುತ್ತಿರಲಿಲ್ಲ.

ಆವಾಗೆಲ್ಲಾ ಒಂದು ರೇಡಿಯೋ ಸಾಧನಕ್ಕೆ ಎರಡು ರೂಪಾಯಿಗಳನ್ನು ಕೊಟ್ಟು ಲೈಸೆನ್ಸ್ ಪಡೆಯಬೇಕಾಗಿತ್ತು. ನಂತರ ಲೈಸೆನ್ಸ್ ದರ ಎರಡು ರೂಪಾಯಿಗಳಿಂದ ಐದು ರೂಪಾಯಿಗಳವರೆಗೂ ಏರಿತ್ತು. ಅಂಚೆ ಇಲಾಖೆಯ ಮುಖಾಂತರ ಪರವಾನಿಗೆ ಪಡೆಯಬೇಕಾಗಿತ್ತು. ರೇಡಿಯೋ ಬೇಡಿಕೆ ಹೆಚ್ಚಿದ್ದರಿಂದ ಆ ಮೂಲಕ ಆದಾಯ ಪಡೆಯಲು ಸರ್ಕಾರ ಪರವಾನಿಗೆ ದರವನ್ನು ನಿಗದಿಪಡಿಸಿತ್ತು. ಆದರೂ ಬಹುತೇಕರು ರೇಡಿಯೋ ಸಾಧನ ಖರೀದಿಸಿ ಪರವಾನಿಗೆ ಪಡೆಯುತ್ತಿರಲಿಲ್ಲ. ಪೋಸ್ಟ್‌ಮ್ಯಾನ್ ಪತ್ರ ಕೊಡಲು ಬರುತ್ತಿರುವುದನ್ನು ಗಮನಿಸಿ ರೇಡಿಯೋವನ್ನು ಬಚ್ಚಿಡಲು ಪ್ರಯತ್ನಿಸುತ್ತಿದ್ದರು. ಏಕೆಂದರೆ, ಅಂಚೆಯವ ಪರವಾನಿಗೆ ಪತ್ರ ತೋರಿಸಿ ಎಂದರೆ ಏನಾಗುತ್ತದೋ? ಇರುವ ರೇಡಿಯೋ ಸಾಧನವನ್ನು ತೆಗೆದುಕೊಂಡು ಹೋದರೆ ಹೇಗೆ? ಎಂಭ ಆತಂಕದಲ್ಲಿ ಅದನ್ನು ಮುಚ್ಚಿಡುತ್ತಿದ್ದರು.

ಟಿವಿ ಬಂದಿದೆ ಎಂಬ ಕಾರಣಕ್ಕೆ ರೇಡಿಯೋ ಪ್ರಭಾವಳಿ ಸ್ವಲ್ಪಮಟ್ಟಿಗೆ ಕಡಿಮೆಯಾಗಿರಬಹುದು. ಆದರೆ, ರೇಡಿಯೋಕ್ಕೆ ಅದರದ್ದೇ ಆದ ವಿನೂತನ ಅಸ್ತಿತ್ವವಿದೆ. ಖಾಸಗಿ ಎಫ್‌ಎಂ ಚಾನೆಲ್ಲುಗಳು ನಗರಗಳಲ್ಲಿ ಯಶಸ್ವಿಯಾಗಿವೆ. ಆದರೆ, ನಗರ ಸಂಸ್ಕೃತಿಯ ಅತಿರೇಕಗಳಿಗೆ ಅವುಗಳು ಬಳಕೆಯಾಗಬಾರದು ಎಂಬ ಎಚ್ಚರ ಇರಬೇಕಾದುದು ಅಗತ್ಯ. ಎಫ್‌ಎಂ ಚಾನೆಲ್ಲುಗಳ ವಿವಿಧ ಸಾಧ್ಯತೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಗತ ವೈಭವನ್ನು ಪುನರ್‌ಪ್ರತಿಷ್ಠಾಪಿಸುವ ಹೊಣೆಗಾರಿಕೆಯನ್ನು ನಿಭಾಯಿಸುವ ಅವಶ್ಯಕತೆ ಇದೆ.

## ರೇಡಿಯೋ ಮತ್ತು ಭಾಷೆ

ಭಾರತದಲ್ಲಿ ರೇಡಿಯೋ ಜನರ ಬದುಕು ಮತ್ತು ಭಾಷೆಯನ್ನು ಕೇಂದ್ರೀಕರಿಸಿಕೊಂಡೇ ಬೆಳವಣಿಗೆಯ ಹಾದಿಯನ್ನು ಕ್ರಮಿಸಿತು. 1921ರ ಆಗಸ್ಟ್ 20ರಂದು ಮೊದಲ ರೇಡಿಯೋ ಪ್ರಸಾರ ನೆರವೇರಿತು. ಆರಂಭಿಕ ಪ್ರಯತ್ನಗಳ ವಿವರಗಳ ಮೇಲೆ ಕಣ್ಣುಹಾಯಿಸಿದಾಗ ರೇಡಿಯೋ ಹೇಗೆ ಆರಂಭದಿಂದಲೇ ಜನರಿಗೆ ಆಪ್ತವಾಗಲು ತುಡಿಯಿತು ಎಂಬುದು ಮನವರಿಕೆಯಾಗುತ್ತದೆ. ರೇಡಿಯೋ ಪ್ರಸಾರದ ಪ್ರಯೋಗಗಳ ಸಂದರ್ಭದಲ್ಲಿ ರೇಡಿಯೋಕ್ಕೆ ನೀಡಬೇಕಾದ ಪ್ರತ್ಯೇಕ ಹೆಸರು ಯಾವುದಾಗಿರಬೇಕು ? ಎಂಬ ಜಿಜ್ಞಾಸೆ ಕೊನೆಗೆ ಭಾರತದ ಜನರ ಉಚ್ಚಾರಕ್ಕೆ ಅನುಕೂಲಕರವಾಗಿರಬೇಕು ಎಂಬ ಅಭಿಪ್ರಾಯಕ್ಕೆ ಪ್ರೇರಣೆಯಾಗುತ್ತದೆ. ಮುಂಚೆ ಇಂಡಿಯನ್ ಸ್ಟೇಟ್ ಬ್ರಾಡ್‌ಕಾಸ್ಟಿಂಗ್ ಸರ್ವಿಸ್ (ಐಎಸ್‌ಬಿಎಸ್) ಎಂಬ ಹೆಸರಿನೊಂದಿಗೆ ರೇಡಿಯೋ ಪ್ರಸಾರದ ಪ್ರಾತಿನಿಧಿಕ ಸಂಸ್ಥೆಯನ್ನು ಗುರುತಿಸಲಾಗುತ್ತಿತ್ತು. ಫೀಲ್ಡನ್ ಇದರ ಮೊದಲ ಕಂಟ್ರೋಲರ್ ಆಗಿ ಕಾರ್ಯನಿವ್ರಹಿಸಿದರು. ನಂತರ 1936ರಲ್ಲಿ ಐಎಸ್‌ಬಿಎಸ್ ಎಂಬುದು ಎಐಆರ್ ಎಂಬುದಾಗಿ ಪರಿವರ್ತಿತವಾಯಿತು. ಬ್ರಾಡ್‌ಕಾಸ್ಟಿಂಗ್ ಎಂಬ ಪದ ಭಾರತದ ಜನರು ಸುಲಭವಾಗಿ ಉಚ್ಚರಿಸುವಂಥ ಪದವಲ್ಲ ಎಂಬುದು ಫೀಲ್ಡನ್ ಅವರ ಅಭಿಪ್ರಾಯವಾಗಿತ್ತು. ಲಾರ್ಡ್ ಲಿನ್ಲಿಥ್‌ಗ್ಲೋ ಅವರೊಂದಿಗಿನ ಈ ಕುರಿತ ಚರ್ಚೆಯು ಆಲ್ ಇಂಡಿಯಾ ರೇಡಿಯೋ ಎಂಬ ನಾಮಧೇಯವನ್ನು ಹೊಳೆಸಿಕೊಳ್ಳುವುದರೊಂದಿಗೆ ಮುಕ್ತಾಯವಾಯಿತು. ಆಲ್ ಇಂಡಿಯಾ ರೇಡಿಯೋ ಆಕಾಶವಾಣಿ ಎಂದು ಹೆಸರನ್ನು ಪಡೆದುಕೊಂಡಿದ್ದರ ಹಿಂದೆ ಕನ್ನಡ ಮತ್ತು ಕನ್ನಡಿಗರ ಕಾಣ್ಕೆಯೂ ಇದೆ. ಮೈಸೂರಿನಲ್ಲಿ ಮೊದಲ ಖಾಸಗಿ ರೇಡಿಯೋ ಕೇಂದ್ರವನ್ನು ಸ್ಥಾಪಿಸಿದ ಎಂ.ವಿ.ಗೋಪಾಲಸ್ವಾಮಿ ಅವರು ಆಕಾಶವಾಣಿ ಎಂಬ ಹೆಸರನ್ನು ನೀಡಲು ಕಾರಣರಾದವರು. ಅವರು ಮೈಸೂರು ಆಕಾಶವಾಣಿಯ ಪಿತಾಮಹ ಎಂದೇ ಗುರುತಿಸಲ್ಪಟ್ಟಿದ್ದಾರೆ. ಅವರು ಮನಶಾಸ್ತ್ರದ ಪ್ರಾಧ್ಯಾಪಕರಾಗಿದ್ದವರು. ಆರುವರ್ಷಗಳ ಅವಧಿಯವರೆಗೂ ತಮ್ಮ ಸ್ವಂತ ಹಣದಿಂದ ಡಾ.ಗೋಪಾಲಸ್ವಾಮಿ ಅವರು ಆಕಾಶವಾಣಿ ಕೇಂದ್ರವನ್ನು ನಡೆಸಿದರು. ಆಕಾಶವಾಣಿ ಎಂಬ ಹೆಸರು ಕಸ್ತೂರಿ ಎಂಬುವವರಿಂದ ಬಂತು ಎಂಬ ವಾದಗಳೂ ಇವೆ.  ಆದರೆ, ಕನ್ನಡಿಗರಿಂದಲೇ ರೇಡಿಯೋಕ್ಕೆ ಹೊಸ ನಾಮಧೇಯ ಸಿಕ್ಕಿತು ಎಂಬುದು ಹೆಮ್ಮೆಯ ಸಂಗತಿ.

ಆಕಾಶವಾಣಿ ಎಂಬ ಹೆಸರಿನೊಂದಿಗೆ ಕಾರ್ಯನಿರ್ವಹಿಸಲಾರಂಭಿಸಿದ ಎಐಆರ್ ಭಾರತದ ಬದುಕನ್ನು ದೃಷ್ಟಿಯಲ್ಲಿರಿಸಿಕೊಂಡು ರೂಪಿಸಿದ ಅನೇಕ ಕಾರ್ಯಕ್ರಮಗಳು ಆಯಾ ರಾಜ್ಯಗಳ ವಿವಿಧ ಪ್ರದೇಶಗಳ ವಿವಿಧ ಸಂಸ್ಕೃತಿಗಳ ಪ್ರತಿಬಿಂಬಿಸುವಿಕೆಯ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿವೆ. ಆಕಾಶವಾಣಿ ಎಂಬುದು ಇದೀಗ ಪ್ರಸಾರಭಾರತಿಯಡಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೀ ಪ್ರಸಾರ ವ್ಯವಸ್ಥೆಯ ಕೇಂದ್ರ. ಸ್ಥಳೀಯ ಭಾಷೆ ಮತ್ತು ಆ ಭಾಷೆಯನ್ನಾಡುವ ಜನರ ಬದುಕು, ಆಚಾರ, ವಿಚಾರಗಳು, ನಂಬಿಕೆಗಳನ್ನು ಪರಿಗಣನೆಗೆ ತೆಗೆದುಕೊಂಡು ಹಲವು ಪ್ರಯೋಗಗಳನ್ನು ನಡೆಸಿದ ಹೆಗ್ಗಳಿಕೆ ಈ ಆಕಾಶವಾಣಿಯದ್ದು. ಆಕಾಶವಾಣಿ ಇವತ್ತಿಗೂ ಜನಸ್ನೇಹಿ ಮಾಧ್ಯಮವಾಗಿ ಜನಮನವನ್ನು ಗೆದ್ದಿದೆ. ಉಳಿದ

ಮಾಧ್ಯಮಗಳಿಗೆ ಹೋಲಿಸಿದರೆ ಇದು ಅತ್ಯಂತ ಸುಲಭವಾಗಿ ಜನರ ಕೈಗೆಟುಕುವ ಗ್ರಹಿಕೆಗೆಟಕುವ ಮಾಧ್ಯಮ. ಕೇಳಿಸುವ ಪ್ರಕ್ರಿಯೆಯೇ ಇಲ್ಲಿ ಮುಖ್ಯವಾಗಿರುವುದರಿಂದ ಅದನ್ನು ದೃಷ್ಟಿಯಲ್ಲಿರಿಸಿಕೊಂಡು ಆಕಾಶವಾಣಿ ಕೇಂದ್ರವು ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಇದು ಕೇಳುಗನ ಮಾಧ್ಯಮವಾಗಿ ಪರಿಚಿತಗೊಂಡ ನಂತರ ಇದರ ಕುರಿತಾದ ವಿಶ್ವಾಸಾರ್ಹತೆ ಹೆಚ್ಚಿ ಜನಪ್ರಿಯವಾಯಿತು. ತಾವು ಮಾತನಾಡುವ ಕನ್ನಡ ತಾಂತ್ರಿಕ ಮಾಧ್ಯಮದ ಮುಖಾಂತರ ಕೇಳಿಸುತ್ತದೆ ಎಂಬುದೇ ಕನ್ನಡದ ಕೇಳುಗರ ಅಚ್ಚರಿಪಡಲು ಕಾರಣವಾಯಿತು. ಸಹಜವಾಗಿಯೇ ಆಕಾಶವಾಣಿ ಜನರ ಸಾಂಸ್ಕೃತಿಕ ಪ್ರತಿನಿಧಿಯಾಗಿ ತನ್ನನ್ನು ಗುರುತಿಸಿಕೊಂಡಿತು. ಈ ಪಾತ್ರವನ್ನು ಹಿಂದೆ ಜನಪದೀಯ ಮಾಧ್ಯಮಗಳು ನಿರ್ವಹಿಸಿದ್ದವು. ರೇಡಿಯೋ ತಂತ್ರಜ್ಞಾನದ ಆವಿಷ್ಕಾರದ ನಂತರ ಆಯಾ ಪ್ರದೇಶಗಳ ಜನಪದೀಯ ಮಾಧ್ಯಮಗಳು ಮತ್ತೊಮ್ಮೆ ಹೊಸ ಬಗೆಯ ಮನ್ನಣೆಯನ್ನು ಪಡೆದವು. ಕನ್ನಡದ ಆಕಾಶವಾಣಿ ಕೇಂದ್ರಗಳು ಕರ್ನಾಟಕದೊಳಗೇ ಇರುವ ವೈವಿಧ್ಯಮಯ ಜನಪದೀಯ ಜಗತ್ತಿನೊಳಗೆ ಲಭ್ಯವಾದ ಜನಪದ ಸಾಹಿತ್ಯ, ಕಲೆಗಳನ್ನು ಕಲೆಹಾಕಿ ಪ್ರಚುರಪಡಿಸಿ ಆ ಮೂಲಕ ಜನರ ಆಪ್ತತೆಯನ್ನು ಗಳಿಸಿಕೊಳ್ಳುವ ಪ್ರಯೋಗಗಳನ್ನು ನಡೆಸಿದವು. ಆ ಪ್ರಯೋಗಗಳು ಯಶಸ್ವಿಯಾಗಿ ದಶಕಗಳ ಕಾಲ ಆಕಾಶವಾಣಿಯನ್ನು ಮನೆಮಾತಾಗಿಸಿದವು.

ಮುದ್ರಣ ಮಾಧ್ಯಮದ ಭಾಷೆಗೂ, ರೇಡಿಯೋದ ಭಾಷೆಗೂ ವ್ಯತ್ಯಾಸಗಳಿರುತ್ತವೆ. ಮುದ್ರಣ ಮಾಧ್ಯಮದ ಬರಹದ ಭಾಷೆ ಗ್ರಾಂಥಿಕವಾಗಿರುತ್ತದೆ. ಕೆಲವೊಮ್ಮೆ ಆಡುಮಾತಿನ ಭಾಷಿಕ ಪ್ರಯೋಗ ಮುದ್ರಣ ಮಾಧ್ಯಮದಲ್ಲಿ ನಡೆದರೂ ಅದು ಗ್ರಾಂಥಿಕ ನಿರೂಪಣೆಯಿಂದ ದೂರವೇ ಉಳಿಯುವುದಿಲ್ಲ. ಆದರೆ, ರೇಡಿಯೋದ ಭಾಷೆ ಹಾಗಲ್ಲ. ಒಬ್ಬರಿಗೊಬ್ಬರು ಮಾತನಾಡಿದಂತೆ, ಒಬ್ಬ ಇನ್ನೊಬ್ಬನನ್ನು ಕೇಳಿಸಿಕೊಂಡಂತೆ, ಕೇಳಿದ್ದ ತತ್‌ಕ್ಷಣವೇ ಅರ್ಥಗ್ರಹಿಕೆಗೆ ಎಟಕುವಂತೆ ರೇಡಿಯೋದ ಭಾಷೆ ಬಳಕೆಯಾಗುತ್ತದೆ. ಆಕಾಶವಾಣಿ ರೂಪಿಸುವ ವಿವಿಧ ಕಾರ್ಯಕ್ರಮಗಳ ಸ್ವರೂಪಕ್ಕೆ ತಕ್ಕಂತೆ ಭಾಷೆಯ ಬಳಕೆಯಾಗುತ್ತದೆ.

ಪತ್ರಿಕೆಯನ್ನೋ, ನಿಯತಕಾಲಿಕೆಯನ್ನೋ ಕೈಗೆತ್ತಿಕೊಂಡಾಗ ವಿವಿಧ ಬಗೆಯ ಬರಹಗಳು ತಮ್ಮ ವಿನ್ಯಾಸದೊಂದಿಗೆ ನಮ್ಮನ್ನು ಸೆಳೆಯುತ್ತವೆ. ಆಕರ್ಷಕ ಮುಖಪುಟ, ಒಳಪುಟಗಳು ನಿರ್ದಿಷ್ಟ ನಿಯತಕಾಲಿಕೆಯೆಡೆಗೆ ಗಮನಹರಿಸುವಂತೆ ಪ್ರೇರಣೆ ನೀಡುತ್ತವೆ. ಓದುಗರನ್ನು ಸೆಳೆಯುವ ತಂತ್ರವಾಗಿ ವಿನ್ಯಾಸ ಮುಖ್ಯವಾದರೂ ಆ ವಿನ್ಯಾಸ ಭಾಷೆಯ ಬೆಂಬಲದೊಂದಿಗೇ ವ್ಯಕ್ತವಾಗಬೇಕಾಗುತ್ತದೆ. ಈ ದೃಷ್ಟಿಯಿಂದ ಬರಹದ ಒಟ್ಟು ಪ್ರಭಾವ ಭಾಷೆಯನ್ನೇ ಅವಲಂಬಿಸಿರುತ್ತದೆ. ರೇಡಿಯೋದಲ್ಲೂ ಬಗೆಬಗೆಯ ಕಾರ್ಯಕ್ರಮಗಳು ವಿವಿಧ ಎಫೆಕ್ಟ್‌ಗಳೊಂದಿಗೆ ಕೇಳುಗರನ್ನು ಸೆಳೆದರೂ ಅವರನ್ನು ಹಿಡಿದಿಡುವ ಸಾಮರ್ಥ್ಯವಿರುವುದು ಆ ಕಾರ್ಯಕ್ರಮಗಳ ಮುಖಾಂತರ ಧ್ವನಿತವಾಗುವ ಭಾಷೆಯ ಬಳಕೆಯಲ್ಲಿ. ಗ್ರಾಂಥಿಕ ಭಾಷೆ ಇಲ್ಲಿ ನಿಷಿದ್ಧ. ಗ್ರಾಂಥಿಕ ಭಾಷೆಯನ್ನು ಅವಲಂಬಿಸಿದರೆ ಶ್ರೋತೃಗಳನ್ನು ಬಹಳದಿನಗಳ ಕಾಲ ಹಿಡಿದಿಟ್ಟುಕೊಳ್ಳಲು ಆಗದು. ಗ್ರಾಮೀಣ ಮತ್ತು ನಗರ ಪ್ರದೇಶಗಳು ಸೇರಿದಂತೆ ಭಾರತದ ವಿವಿಧ ಪ್ರದೇಶಗಳಲ್ಲಿ ವಿವಿಧ ಬಗೆಯ ಶ್ರೋತೃಗಳಿದ್ದಾರೆ. ಬಡವರಿಂದ ಹಿಡಿದು ಶ್ರೀಮಂತರವರೆಗೆ ವಿವಿಧ ಅಭಿರುಚಿಯುಳ್ಳವರನ್ನು ಕಾಣಬಹುದು. ಅವರಲ್ಲಿ ಅನಕ್ಷರಸ್ತರು, ಸಾಕ್ಷರರು, ನವಸಾಕ್ಷರರು, ಶೈಕ್ಷಣಿಕವಾಗಿ ಕನಿಷ್ಠ ಅರ್ಹತೆಯನ್ನು ಉಳ್ಳವರು, ಶೈಕ್ಷಣಿಕ ಅರ್ಹತೆಗಳ ಆಧಾರದಲ್ಲಿ ಪ್ರಬುದ್ಧತೆಯನ್ನು ಪಡೆದವರು ಹೀಗೆ ಹಲವು ಬಗೆಯ ಜನಸಮೂಹವಿದೆ. ಇವರಲ್ಲಿ ಬಹಳಷ್ಟು ಜನರು

ಬಡತನ ಮತ್ತು ಗ್ರಾಮೀಣ ಪ್ರದೇಶಗಳ ಹಿನ್ನೆಲೆಯವರು. ಅನಕ್ಷರಸ್ತ ಸಮೂಹಕ್ಕೆ, ನವಸಾಕ್ಷರರಿಗೆ ಕನಿಷ್ಠ ಶೈಕ್ಷಣಿಕ ಅರ್ಹತೆಯುಳ್ಳವರಿಗೆ ಮುದ್ರಿತ ಬರಹಕ್ಕಿಂತ ರೇಡಿಯೋ ಅತ್ಯಂತ ಆಪ್ತವಾಗುವಂಥ ಮಾಧ್ಯಮವೆನಿಸುತ್ತದೆ. ಏಕೆಂದರೆ, ರೇಡಿಯೋದ ಕಾರ್ಯಕ್ರಮಗಳು ಸುಲಭವಾಗಿ ಅವರ ಗ್ರಹಿಕೆಗೆ ಎಟಕುತ್ತವೆ. ಕಾರಣ ರೇಡಿಯೋದ ಸರಳ ಭಾಷೆ.

ಉದ್ದೇಶಿತ ಕೇಳುಗಸಮೂಹದ ಸಮಗ್ರವಾಗಿ ಅರ್ಥೈಸಿಕೊಂಡಾಗ ಮಾತ್ರ ರೇಡಿಯೋದ ಭಾಷೆಯನ್ನು ಸರಳಗೊಳಿಸಿ ಅವರನ್ನು ಸೆಳೆಯುವುದು ಸಾಧ್ಯವಾಗುತ್ತದೆ. ನಿರ್ದಿಷ್ಟ ಪ್ರದೇಶದ ಜನಸಂಖ್ಯೆ, ಪುರುಷ–ಮಹಿಳೆಯರ ಪ್ರಮಾಣ, ಅಕ್ಷರಸ್ತ–ಅನಕ್ಷರಸ್ತರ ಪ್ರಮಾಣ, ಆರೋಗ್ಯದ ಸ್ಥಿತಿಗತಿಗಳು, ಧರ್ಮಗಳು, ಪರಿಸರ, ವಿವಿಧ ಸೌಲಭ್ಯಗಳು ಮತ್ತಿತರ ಅಂಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು ರೇಡಿಯೋ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಇವುಗಳೊಂದಿಗೆ ಆ ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವವರ ಭಾಷೆಯೂ ಒಟ್ಟು ಕಾರ್ಯಕ್ರಮದ ಸ್ವರೂಪವನ್ನು ನಿರ್ಧರಿಸುವಾಗ ಸಹಾಯಕವಾಗುತ್ತದೆ.

ರೇಡಿಯೋ ಕಾರ್ಯಕ್ರಮಗಳಲ್ಲಿ ಮೂರು ವಿಧ. ಮಾತು ಆಧಾರಿತ ಕಾರ್ಯಕ್ರಮಗಳು **(ಖಿಚಿಟಞ ಫಾಊಜ),** ಸಂಗೀತ **(ಒಣಾಛಿ)** ಮತ್ತು ಶಾಬ್ದಿಕ ಪರಿಣಾಮಗಳನ್ನು **(ಖಚಿಟಜ ಇಜಿಜಿಜಛಿಣ)** ಆಧರಿಸಿದ ಕಾರ್ಯಕ್ರಮಗಳೆಂದು ಅವುಗಳನ್ನು ವಿಂಗಡಿಸಬಹುದು.  ರೇಡಿಯೋದ ಬಹಳಷ್ಟು ಅವಧಿಯು ಮಾತು ಆಧಾರಿತ ಕಾರ್ಯಕ್ರಮಗಳಿಗೆ ಮೀಸಲಾಗಿರುತ್ತದೆ. ರೇಡಿಯೋ ಕೇಂದ್ರದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವ ಉದ್ಘೋಷ, ನಿರ್ದಿಷ್ಟ ವಿಷಯದ ಕುರಿತು ಮೌಲಿಕ ಚಿಂತನೆಗಳಿಗೆ ಅವಕಾಶವೀಯುವ ರೇಡಿಯೋ ಭಾಷಣ, ಸಾಮಾನ್ಯರಿಂದ ಹಿಡಿದು ಅಸಾಮಾನ್ಯ ವ್ಯಕ್ತಿತ್ವದವರನ್ನು ಅವರ ವೈಚಾರಿಕ ನಿಲುವುಗಳೊಂದಿಗೆ ಪರಿಚಯಿಸುವ ರೇಡಿಯೋ ಸಂದರ್ಶನ, ಮಹತ್ವದ ವಿಷಯಕ್ಕೆ ಸಂಬಂಧಿಸಿದಂತೆ ವಿಸ್ತೃತ ಚರ್ಚೆಗೆ ವೇದಿಕೆಯಾಗುವ ರೇಡಿಯೋ ಚರ್ಚೆಗಳು, ವಾಸ್ತವಗಳನ್ನು ಆಧರಿಸಿದ ವಿವರಗಳನ್ನು ಕೇಳುಗನನ್ನು ಪ್ರಭಾವಿಸುವ ರೀತಿ ಅಭಿವ್ಯಕ್ತಿಸಲು ಸಹಾಯಕವಾಗುವ ರೇಡಿಯೋ ರೂಪಕಗಳು, ಕೇವಲ ಧ್ವನಿ, ಸಂಗೀತ ಮತ್ತು ವೈವಿಧ್ಯಮಯ ಶಾಬ್ದಿಕ ವಿನ್ಯಾಸಗಳ ಪರಿಣಾಮಗಳ ಬೆಂಬಲದೊಂದಿಗೆ ರೂಪುಗೊಳ್ಳುವ ರೇಡಿಯೋ ನಾಟಕಗಳು, ನಿರ್ದಿಷ್ಟ ಘಟನೆ, ಕ್ರೀಡೆ, ಕಾರ್ಯಕ್ರಮಗಳ ಕುರಿತು ಕಣ್ಣಿಗೆ ಕಟ್ಟುವಂತೆ ಮಾಹಿತಿ ನೀಡುವ ವೀಕ್ಷಕ ವಿವರಣೆ, ದಿನನಿತ್ಯದ ವಿದ್ಯಮಾನಗಳ ಸಮಗ್ರ ವಿವರವನ್ನು ನೀಡುವ ಸುದ್ದಿ ಸಂಚಿಕೆಗಳು... ಇವೆಲ್ಲವೂ ಮಾತಿನ ವೈಖರಿಯನ್ನು ಆಧರಿಸಿದ ಕಾರ್ಯಕ್ರಮಗಳಾಗಿವೆ. ಈ ಕಾರ್ಯಕ್ರಮಗಳಲ್ಲಿ ಮಾತಿನ ವಿವಿಧ ಲಯಗಳು ಪ್ರಮುಖ ಪಾತ್ರವಹಿಸುವಂತೆ ಸಹಜವಾಗಿಯೇ ಭಾಷೆಯೂ ಜೊತೆಗೂಡುತ್ತದೆ. ಯಾವ ಭಾಷೆಯಲ್ಲಿ ಯಾವ ವಿವರವನ್ನು ಹೇಗೆ ಕಟ್ಟಿಕೊಡಬೇಕು ಎಂಬ ಸ್ಪಷ್ಟತೆ ಈ ಮಾತನ್ನು ಆಧರಿಸಿದ ಕಾರ್ಯಕ್ರಮಗಳನ್ನು ರೂಪಿಸುವವರಿಗೆ ಇರಬೇಕಾಗುತ್ತದೆ.

ಯಾವುದೇ ರೇಡಿಯೋ ಕೇಂದ್ರ ತನ್ನ ದಿನದ ಪ್ರಸಾರದ ಅವಧಿ ಆರಂಭವಾಗುವ ಕಾಲಕ್ಕೆ ಆ ದಿನ ಪ್ರಸಾರಗೊಳ್ಳಲಿರುವ ಅಷ್ಟೂ ಕಾರ್ಯಕ್ರಮಗಳ ವಿವರವನ್ನು ನೀಡಬೇಕಾಗುತ್ತದೆ. ಈ ವಿವರವನ್ನು ನೀಡುವ ಉದ್ಘೋಷಕರ ಧ್ವನಿ ಕೇಳುಗರನ್ನು ಸೆಳೆಯುವಂತಿರಬೇಕು. ಈ ಆಕರ್ಷಣೆ ಕೇವಲ ರಂಜನೀಯ ನೆಲೆಯಲ್ಲಿದ್ದರೆ ಪ್ರಯೋಜನವಿಲ್ಲ. ಆ ರೇಡಿಯೋ ಕೇಂದ್ರದ ಪ್ರಸಾರ ವ್ಯಾಪ್ತಿಯುಳ್ಳ ಪ್ರದೇಶದ ಭಾಷಾ ಸೊಗಡನ್ನು ಆ ಧ್ವನಿ ಹೇಗೆ ಕಟ್ಟಿಕೊಡುತ್ತದೆ ಎಂಬುದರ ನೆಲೆಯಲ್ಲಿ ಕೇಳುಗರನ್ನು ಸೆಳೆದುಕೊಳ್ಳಬೇಕು. ಇನ್ನು ರೇಡಿಯೋ ಭಾಷಣಗಳೂ ವಿವಿಧ ಕ್ಷೇತ್ರಗಳ ತಜ್ಞರಿಂದ

ರಚಿತವಾಗುವುದರಿಂದ ರೇಡಿಯೋ ಕಾರ್ಯಕ್ರಮ ನಿರ್ವಾಹಕರು ಅವುಗಳ ಭಾಷೆ ರೇಡಿಯೋ ಕೇಳುಗರನ್ನು ದೃಷ್ಟಿಯಲ್ಲಿಟ್ಟುಕೊಂಡದ್ದೇ ಎಂಬ ಮಾನದಂಡವನ್ನು ಅನ್ವಯಿಸಿ ಪರಿಶೀಲಿಸುತ್ತಾರೆ. ಕೇಳುಗರನ್ನು ತಲುಪಲೇಬೇಕಾದ ವಿಷಯವಸ್ತು ಜಟಿಲ ಭಾಷೆಯ ಬಳಕೆಯ ಕಾರಣದಿಂದಾಗಿ ಕೇಳುಗರನ್ನು ತಲುಪುವುದಿಲ್ಲ ಎಂಬುದು ಅವರಿಗೆ ಮನವರಿಕೆಯಾದರೆ ಸರಳ ಭಾಷೆಯನ್ನು ಬಳಸಿ ಮತ್ತೆ ಬರೆಯುವಂತೆ ಸಲಹೆ ನೀಡುತ್ತಾರೆ. ಕೆಲವೊಮ್ಮೆ ಸರಳ ಭಾಷೆಯ ಭಾಷಣವನ್ನು ಬರೆದುಕೊಂಡು ಬಂದರೂ ಕೆಲವರು ಅದನ್ನು ಧ್ವನಿಮುದ್ರಣದ ಸಮಯದಲ್ಲಿ ಓದುವ ಕಾಲಕ್ಕೆ ಆಪ್ತ ಎನ್ನಿಸುವಂತೆ ಪ್ರಸ್ತುತಪಡಿಸದೇ ಇದ್ದರೆ ಆ ಭಾಷಣದ ವೈಚಾರಿಕ ತೀವ್ರತೆಯ ಪರಿಣಾಮ ಕೇಳುಗನ ಮೇಲೆ ಆಗದೇ ಇರಬಹುದು. ಪ್ರತಿಯೊಂದು ಪದದ ಉಚ್ಚಾರ ನಿರ್ದಿಷ್ಟ ಚಿಂತನೆಯ ತೀವ್ರತೆಗೆ ಅನುಗುಣವಾಗಿಯೇ ಆಗಬೇಕು. ಏಳೆಂಟು ಪುಟಗಳ ಹತ್ತು ನಿಮಿಷದ ಭಾಷಣದ ಪ್ರತಿಯನ್ನು ಏಕಪ್ರಕಾರವಾಗಿ ಗಿಳಿಪಾಠದಂತೆ ಒಪ್ಪಿಸಿಬಿಟ್ಟರೆ ಆ ಭಾಷಣದ ಒಟ್ಟು ಪರಿಣಾಮ ಕೇಳುಗನ ಮೇಲೆ ಆಗುವುದಿಲ್ಲ. ಹೀಗಾಗಿ ಕಾರ್ಯಕ್ರಮ ನಿರ್ವಾಹಕರು ಮೊದಲು ಭಾಷಣದ ಪ್ರತಿಯನ್ನು ಸರಳ ಭಾಷೆಯ ನೆಲೆಯಲ್ಲಿ ತಿದ್ದುಪಡಿಗೊಳಪಡಿಸಲು ಸೂಚಿಸುತ್ತಾರೆ. ನಂತರ ಧ್ವನಿಮುದ್ರಣದ ಸಂದರ್ಭದಲ್ಲಿ ಆ ಬಗೆಯ ತಿದ್ದುಪಡಿಯು ಕೇಳುಗನ ದೃಷ್ಟಿಯಿಂದ ಅನುಕೂಲವಾಗುತ್ತದೆ. ರೇಡಿಯೋ ಸಂದರ್ಶನಗಳೂ ಕೂಡ ಸಾಮಾನ್ಯ ಜನರು ಪರಸ್ಪರ ಮಾತುಕತೆಯಲ್ಲಿ ತೊಡಗಿದ್ದಾಗ ವ್ಯಕ್ತವಾಗುವ ಸಹಜ ಭಾಷಿಕ ಅಭಿವ್ಯಕ್ತಿಯ ಶೈಲಿಯನ್ನೇ ನೆಚ್ಚಿಕೊಂಡಿರುತ್ತವೆ. ಪ್ರಶ್ನೆ ಮತ್ತು ಪ್ರತಿಕ್ರಿಯೆಗಳು ಸಾಂದರ್ಭಿಕ ಅಗತ್ಯಗಳಿಗೆ ಅನುಗುಣವಾಗಿ ವ್ಯಕ್ತವಾಗುತ್ತಾ ಕೇಳುಗರನ್ನು ಆವರಿಸಿಕೊಳ್ಳುವಂಥ ಭಾಷೆ ಬಳಕೆಯಾಗಬೇಕಾಗುತ್ತದೆ. ನಿರ್ದಿಷ್ಟ ವಿಷಯವೊಂದು ಹಲವು ಜಿಜ್ಞಾಸೆಗೆ ಕಾರಣವಾಗಿರುವಾಗ ವಿವಿಧ ವಲಯಗಳ ತಜ್ಞರನ್ನು ಒಂದೆಡೆಗೆ ಕರೆತಂದು ಅವರ ವಿಚಾರಗಳ ಅಭಿವ್ಯಕ್ತಿಗೆ ವೇದಿಕೆಯಾಗುವಂಥದ್ದು ರೇಡಿಯೋ ಚರ್ಚೆ. ಇಲ್ಲಿ ಪರ ವಿರೋಧದ ಅಭಿಪ್ರಾಯಗಳು ತಾರ್ಕಿಕ ಸಮರ್ಥನೆಗಳೊಂದಿಗೆ ವ್ಯಕ್ತವಾಗುತ್ತವೆ. ಈ ಚರ್ಚೆಯೂ ಭಾಷೆಯೂ ಸಹಜವಾಗಿರಬೇಕಾಗುತ್ತದೆ. ವಾಸ್ತವಗಳನ್ನು ಆಧರಿಸಿದ ವಿನೂತನ ನಿರೂಪಣಾ ಕ್ರಮವನ್ನು ಅವಲಂಬಿಸಿದ ರೇಡಿಯೋ ರೂಪಕಗಳು ರೇಡಿಯೋ ಮಾಧ್ಯಮವನ್ನು ಜನಪ್ರಿಯಗೊಳಿಸುವಲ್ಲಿ ಸಹಾಯಕವಾಗಿವೆ. ವಿವಿಧ ಶಾಬ್ದಿಕ ಪರಿಣಾಮಗಳನ್ನು ನೀಡುವ ತಾಂತ್ರಿಕ ಅವಕಾಶಗಳನ್ನು ಬಳಸಿಕೊಂಡು ಸಮಸ್ಯೆಯೊಂದನ್ನು ಅದೇ ತೀವ್ರತೆಯಲ್ಲಿ ಕಟ್ಟಿಕೊಡುವ ಹೆಗ್ಗಳಿಕೆ ರೇಡಿಯೋ ರೂಪಕಗಳದ್ದು. ರೇಡಿಯೋ ರೂಪಕಗಳ ವಸ್ತುವಿಷಯ ಸಮಸ್ಯೆಗಳೇ ಆಗಬೇಕಿಲ್ಲ. ವ್ಯಕ್ತಿತ್ವದ ಸಾಧನೆಯನ್ನು ವಿಭಿನ್ನವಾಗಿ ನಿರೂಪಿಸಲೂ ರೂಪಕಗಳನ್ನು ಬಳಸಿಕೊಳ್ಳಬಹುದು. ರೇಡಿಯೋ ರೂಪಕವೂ ಕೂಡ ಭಾಷೆಯ ನೆಲೆಯಲ್ಲಿ ಕೇಳುಗರನ್ನು ಸೆಳೆಯುವ ವಿಭಿನ್ನ ಕಾರ್ಯಕ್ರಮ. ರೇಡಿಯೋ ನಾಟಕಗಳು ಭಾಷೆ, ಧ್ವನಿ ಮತ್ತು ಶಾಬ್ದಿಕ ಪರಿಣಾಮಗಳ ಬೆಂಬಲದೊಂದಿಗೇ ಮನಸೆಳೆಯುತ್ತವೆ. ವೀಕ್ಷಕ ವಿವರಣೆಯೂ ಕೂಡಾ ಭಾಷೆಯ ಸೃಜನಶೀಲ ಸಾಧ್ಯಾಸಾಧ್ಯತೆಗಳನ್ನು ಬಳಸಿಕೊಳ್ಳುತ್ತದೆ. ಈ ಕಾರಣದಿಂದಾಗಿಯೇ ಒಬ್ಬರ ವೀಕ್ಷಕ ವಿವರಣೆ ಇನ್ನೊಬ್ಬರ ವೀಕ್ಷಕ ವಿವರಣೆಗಿಂತ ವಿಭಿನ್ನವೆನಿಸುತ್ತದೆ. ಆಯಾ ಪ್ರದೇಶಗಳ ಭಾಷೆಯಲ್ಲಿ ದಿನನಿತ್ಯದ ವಿದ್ಯಮಾನಗಳ ವಿವರಗಳನ್ನು ನೀಡುವ ಸುದ್ದಿ ಸಂಚಿಕೆಗಳು ತಮ್ಮ ಭಾಷೆಯ ಕಾರಣಕ್ಕಾಗಿಯೇ ಕೇಳುಗರಿಗೆ ಹಿಡಿಸುತ್ತವೆ.

ಸಂಗೀತವನ್ನು ಆಧರಿಸಿದ ಕಾರ್ಯಕ್ರಮಗಳು ಎರಡನೇ ಬಗೆಯವು. ಇವುಗಳಲ್ಲಿ ಹಿಂದುಸ್ತಾನಿ, ಶಾಸ್ತ್ರೀಯ ಮತ್ತು ಪಾಶ್ಚಿಮಾತ್ಯ ಎಂಬ ವರ್ಗೀಕರಣವನ್ನು ಕಾಣಬಹುದು. ಇಲ್ಲಿ ಮಾತಿನ ಭಾಷೆಗಿಂತ ಸಂಗೀತದ ಪರಿಭಾಷೆಯೇ ಗಮನಾರ್ಹವೆನಿಸುತ್ತದೆ. ಇನ್ನು ಶಾಬ್ದಿಕ ಪರಿಣಾಮಗಳನ್ನು ಬಳಸಿಕೊಂಡು ವಿವಿಧ ಬಗೆಯ ಕಾರ್ಯಕ್ರಮಗಳನ್ನು

ರೂಪಿಸಲಾಗುತ್ತದೆ. ಈ ಬಗೆಯ ಕಾರ್ಯಕ್ರಮಗಳು ನಿರ್ದಿಷ್ಟ ವಿಷಯ ನಿರೀಕ್ಷಿಸುವ ಪರಿಣಾಮ ತೀವ್ರತೆಯನ್ನು ಕಟ್ಟಿಕೊಡಲು ಬಳಕೆಯಾಗುತ್ತವೆ.

**ರೇಡಿಯೋ ರೂಪಕ ಮತ್ತು ಭಾಷೆ**

ಚುಕುಬುಕು ರೈಲಿನ ಸದ್ದು.... ಆ ಸದ್ದಿನ ಏರಿಳಿತಗಳೊಂದಿಗೆ ಒಪ್ಪಂದ ಮಾಡಿಕೊಂಡವರಂತೆ ತೋರುವ ಆ ಎಳೆಯ ಮನಸಿನ ಮಕ್ಕಳು. ಆಡಿ ನಲಿಯಬೇಕಾದ, ಬಾಲ್ಯದ ಅಷ್ಟೂ ಅಪೂರ್ವ ಕ್ಷಣಗಳನ್ನು ಸಂಭ್ರಮದಿಂದ ಅನುಭವಿಸಬೇಕಾದ ಅವರನ್ನು ಅನಿವಾರ್ಯವಾಗಿ ದತ್ತು ತೆಗೆದುಕೊಂಡಂತೆ ಭಾಸವಾಗುವ ರೈಲು ಮತ್ತು ರೈಲಿನ ಪ್ಲಾಟ್‌ಫಾರ್ಮ್‌ಗಳು. ಇವುಗಳೆಡೆಗೆ ಧಾವಿಸಲು ಅನಿವಾರ್ಯತೆ ಸೃಷ್ಟಿಸಿದ ಅಪ್ಪ, ಅಮ್ಮ ಮತ್ತಿತರ ಹಿರಿಯರ ಬೈಗುಳಗಳ ತಿವಿತ ಮತ್ತು ನಿರಂತರ ಹೊಡೆತಗಳ ಚಕ್ರಸುಳಿ. ಏನೂ ತಪ್ಪು ಮಾಡದೇ ಇದ್ದರೂ ತಾವಿರುವ ಮನೆಯೇ ಜೈಲಾಗಿ ಕಾಡುತ್ತಿದೆ ಎಂದೆನಿಸಿದ ತಕ್ಷಣವೇ ಮೈ ಕೊಡವಿಕೊಂಡು ಎದ್ದು ಮತ್ತೆಂದೂ ಮನೆಗೆ ಹಿಂದಿರುಗದ ದೃಢಸಂಕಲ್ಪದೊಂದಿಗೆ ಓಡಿಹೋಗುವ ಪರಿಹಾರೋಪಾಯ. ಹಾಗೆ ಓಡುತ್ತ ಓಡುತ್ತ ರೈಲು ಪ್ಲಾಟ್‌ಫಾರ್ಮ್‌ನ ಅನಾಮಿಕ ಮಡಿಲು ಸೇರುವ ಅವರ ಅನಿವಾರ್ಯತೆ. ಎದುರಾಗುವ ಪ್ರಶ್ನೆಗಳಿಗೆ ಅವರು ನೀಡುವ ಉತ್ತರಗಳಲ್ಲಿ ವಿಲನ್‌ಗಳಂತೆ ಗೋಚರಿಸುವ ಅವರದೇ ಅಪ್ಪ, ಅಮ್ಮ ಮತ್ತು ಮನೆಯ ಇತರೆ ಸದಸ್ಯರು.

ಇದು ಯಾವುದೋ ಟಿವಿ ಧಾರಾವಾಹಿಯೊಂದರ ಕಥೆಯಲ್ಲ. ಮಕ್ಕಳಿಗೆಂದೇ ನಿರ್ಮಿಸಲಾದ ಸಿನಿಮಾವೊಂದರ ಚಿತ್ರಕಥೆಯಲ್ಲ. ಟಿವಿಗಾಗಿಯೇ ಸಿದ್ಧಪಡಿಸಿದ ಸಾಕ್ಷ್ಯಚಿತ್ರದ ಕಥಾವಸ್ತುವೂ ಅಲ್ಲ. ಇದು ರೇಡಿಯೋಕ್ಕೆಂದೇ ಸಿದ್ಧಪಡಿಸಿದ ಸತ್ಯಕಥೆ ಆಧಾರಿತ ವಿಭಿನ್ನ ರೂಪಕ. ಮನೆ ತೊರೆದು ಬರುವ ಮಕ್ಕಳು ರೈಲು ಪ್ಲಾಟ್‌ಫಾರ್ಮ್‌ಗಳಲ್ಲಿ ಅನುಭವಿಸುವ ವಿವಿಧ ಬಗೆಯ ಸಂಕಷ್ಟದ ಅನುಭವಗಳನ್ನು ಮನೋಜ್ಞವಾಗಿ ಕಟ್ಟಿಕೊಡುವ ಈ ರೇಡಿಯೋ ರೂಪಕದ ಶೀರ್ಷಿಕೆ 'ಓಡಿ ಬಂದವರು'. ಬಳಕೆಯಾದ ಭಾಷೆ ಮತ್ತು ಶಾಬ್ದಿಕ ವಿನ್ಯಾಸಗಳ ವಿನೂತನ ಸಂಯೋಜನೆಯೊಂದಿಗೆ ಇದು ಗಮನ ಸೆಳೆದಿತ್ತು.

ದೇಶದಾದ್ಯಂತ ಅಪಾರ ಮೆಚ್ಚುಗೆ ಗಳಿಸಿದ್ದ ಮಕ್ಕಳ ಹಿಂದಿ ಚಲನಚಿತ್ರ 'ತಾರೆ ಜಮೀನ್ ಪರ್' ಮಕ್ಕಳ ಬಗೆಗಿನ ಹಿರಿಯರ ದೃಷ್ಟಿಕೋನಗಳನ್ನು ಬದಲಾಯಿಸುವಲ್ಲಿ ಮಹತ್ವದ ಪಾತ್ರ ವಹಿಸಿತ್ತು. ದೃಶ್ಯಮಾಧ್ಯಮದ ಎಲ್ಲಾ ಸಾಧ್ಯತೆಗಳನ್ನು ಬಳಸಿಕೊಂಡು ಮಕ್ಕಳೊಳಗಿನ ತಳಮಳ, ತಾಕಲಾಟಗಳನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿತ್ತು. ಆದರೆ, ಮಕ್ಕಳಿಗೆ ಸಂಬಂಧಿಸಿದ ಕಥೆಯೊಂದನ್ನು ಅಷ್ಟೇ ಪರಿಣಾಮಕಾರಿಯಾಗಿ ಶ್ರವಣ ಮಾಧ್ಯಮವಾದ ರೇಡಿಯೋದ ಇತಿಮಿತಿಗಳ ಮಧ್ಯೆ ರೂಪಕವಾಗಿ ನಿರೂಪಿಸುವುದು ಅತ್ಯಂತ ಸವಾಲಿನ ಕೆಲಸ. 11 ವರ್ಷಗಳ ಹಿಂದೆಯೇ ಅಂಥದ್ದೊಂದು ಸವಾಲನ್ನು 'ಓಡಿ ಬಂದವರು' ರೇಡಿಯೋ ರೂಪಕದ ಮೂಲಕ ಸಮರ್ಥವಾಗಿ ನಿಭಾಯಿಸಿದ್ದವರು ರಾಯಚೂರು ಆಕಾಶವಾಣಿ ಕೇಂದ್ರದ ಆಗಿನ ಕಾರ್ಯಕ್ರಮ ನಿರ್ವಾಹಕರಾಗಿದ್ದ ಎಂ ಬಿ ಪಾಟೀಲ್, ನಿರೂಪಕರಾಗಿದ್ದ ಜಾಂಪಾ ಆಶಿಹಾಳ್.

ಇವತ್ತಿಗೂ 'ಓಡಿ ಬಂದವರು' ರೂಪಕ 'ತಾರೆ ಜಮೀನ್ ಪರ್'ನಂತೆಯೇ ನಮ್ಮ ಭಾವಲೋಕವನ್ನು ಆವರಿಸಿಕೊಳ್ಳುವ ಅಪೂರ್ವ ಶಕ್ತಿ ಪಡೆದಿದೆ. ಬಾನುಲಿಯ ಭಾಷಿಕ ಅನನ್ಯತೆ ಗೊತ್ತುಮಾಡಿಕೊಳ್ಳಲು 'ಓಡಿ ಬಂದವರು'

ರೇಡಿಯೋ ರೂಪಕವು ಪೂರಕವಾಗುತ್ತದೆ. ಅದು ರೇಡಿಯೋ ಪ್ರಸಾರಗೊಳಿಸುವ ಹಲವು ಪ್ರಯೋಗಶೀಲ ಕಾರ್ಯಕ್ರಮಗಳಲ್ಲಿ ಒಂದು ಮಾತ್ರ. ಟೆಲಿವಿಷನ್, ಚಲನಚಿತ್ರಗಳು ದೃಶ್ಯಾತ್ಮಕ ನಿರೂಪಣೆಯಲ್ಲಿ ಅಭಿವ್ಯಕ್ತವಾದರೆ, ಬಾನುಲಿ ಮಾಧ್ಯಮ ಕೇಳಿಸುವ ಇತಿಮಿತಿಯಲ್ಲಿಯೇ ಸಂವಹನವನ್ನು ಸಾಧ್ಯವಾಗಿಸಿಕೊಳ್ಳುತ್ತದೆ. ಈ ಬಗೆಯ ಸಾಧ್ಯತೆಯ ಶಕ್ತಿ ರೇಡಿಯೋ ಕೇಳುಗರನ್ನು ಸೆಳೆಯಲು ಸಹಾಯಕವಾಗುತ್ತದೆ.

**ಟೆಲಿವಿಷನ್ ಮತ್ತು ಭಾಷೆ**

ರೇಡಿಯೋ ಮತ್ತು ಟೆಲಿವಿಷನ್ ತಮ್ಮ ಆರಂಭಿಕ ಕಾಲಘಟ್ಟದಲ್ಲಿ ವ್ಯಾಪಕ ಪ್ರಭಾವವನ್ನು ಬೀರಿದ ಮಾಧ್ಯಮಗಳು. ಆರಂಭಿಕ ಪ್ರಭಾವವನ್ನು ನಿರಂತರವಾಗಿ ಉಳಿಸಿಕೊಂಡ ಹೆಗ್ಗಳಿಕೆ ಇವುಗಳದ್ದು. ಟೆಲಿವಿಷನ್ ಮಾಧ್ಯಮ ರೇಡಿಯೋದ ಪ್ರತಿಸ್ಪರ್ಧಿಯಾಗಿ ಅದು ಹಿನ್ನೆಲೆಗೆ ಸರಿಯಲು ಕಾರಣವಾಗಿದೆ ಎಂಬ ಆರೋಪಗಳಿದ್ದರೂ ಎರಡೂ ಮಾಧ್ಯಮಗಳು ಇವತ್ತಿಗೂ ಕಾಲದ ಅಗತ್ಯಗಳಿಗೆ ಅನುಗುಣವಾಗಿ ತಮ್ಮನ್ನು ಪುನರ್‌ರೂಪಿಸಿಕೊಂಡಿರುವುದನ್ನು ಅಲ್ಲಗಳೆಯುವಂತಿಲ್ಲ. ರೇಡಿಯೋದಂತೆಯೇ ಟೆಲಿವಿಷನ್ ಕೂಡಾ ಭಾಷಿಕ ನೆಲೆಯಲ್ಲಿ ಪ್ರಾಮುಖ್ಯತೆ ಪಡೆಯುವ ಸಮೂಹ ಮಾಧ್ಯಮವಾಗಿದೆ. ಇದಕ್ಕೆ ಉದಾಹರಣೆಯನ್ನಾಗಿ ಭಾರತದ ಪ್ರಸಾರ ವ್ಯವಸ್ಥೆಯನ್ನು ಗಮನಿಸಬಹುದು.

1959ರ ಸೆಪ್ಟಂಬರ್ 15ರಂದು ದೆಹಲಿಯ ಟೆಲಿವಿಷನ್ ಕೇಂದ್ರದಿಂದ ಟಿವಿ ಪ್ರಸಾರ ಭಾರತದಲ್ಲಿ ಆರಂಭಗೊಂಡಿತು. 1965ರಲ್ಲಿ ಮನರಂಜನೆ ಮತ್ತು ಮಾಹಿತಿ ಆಧಾರಿತ ಕಾರ್ಯಕ್ರಮಗಳು ಪ್ರಸಾರವಾಗಲಾರಂಭಿಸಿದವು. ಸಾಮಾಜಿಕ ಬದಲಾವಣೆ, ರಾಷ್ಟ್ರೀಯ ಭಾವೈಕ್ಯತೆ, ವೈಜ್ಞಾನಿಕ ದೃಷ್ಟಿಕೋನ, ಜನಸಂಖ್ಯೆಯ ನಿಯಂತ್ರಣಕ್ಕಾಗಿ ಕುಟುಂಬ ಕಲ್ಯಾಣ ಯೋಜನೆಯ ಸಂದೇಶ, ಕೃಷಿ ಉತ್ಪಾದನಾ ಪ್ರಮಾಣ ಹೆಚ್ಚಳಕ್ಕೆ ಬೇಕಾದ ಅಗತ್ಯ ಮಾಹಿತಿ–ಜ್ಞಾನ, ಪರಿಸರ ಮತ್ತು ಭೌಗೋಳಿಕ ಸಮತೋಲನದ ಪ್ರಜ್ಞೆ, ಮಹಿಳೆ, ಮಕ್ಕಳು ಮತ್ತು ನಿರ್ಲಕ್ಷಿತರ ಕಲ್ಯಾಣವೂ ಸೇರಿದಂತೆ ಒಟ್ಟು ಸಮಾಜದ ಸಮಗ್ರ ಅಭ್ಯುದಯ, ಸಾಂಸ್ಕೃತಿಕ ಪರಂಪರೆಯ ಉಳಿವು ಮತ್ತಿತರ ರಾಷ್ಟ್ರೀಯ ಉದ್ದೇಶಗಳು ಟೆಲಿವಿಷನ್ ಪ್ರಸಾರದ ಹಿಂದೆ ಇದ್ದವು. ನಂತರ ಶೈಕ್ಷಣಿಕ ಉದ್ದೇಶಗಳಿಗಾಗಿ ವ್ಯಾಪಕವಾಗಿ ಟೆಲಿವಿಷನ್ ಮಾಧ್ಯಮವನ್ನು ಬಳಸಿಕೊಳ್ಳುವ ಯಶಸ್ವೀ ಪ್ರಯತ್ನಗಳಾದವು.

ಟೆಲಿವಿಷನ್ ಮಾಧ್ಯಮವೂ ಕೂಡಾ ವಿವಿಧ ಬಗೆಯ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಸುದ್ದಿ ಸಂಚಿಕೆ, ಸಾಕ್ಷ್ಯಚಿತ್ರಗಳು, ಸಂದರ್ಶನ, ರಸಪ್ರಶ್ನೆ, ಮಕ್ಕಳು, ಮಹಿಳೆ, ರೈತರು, ಕಾರ್ಮಿಕರು ಸೇರಿದಂತೆವಿವಿಧ ಉದ್ದೇಶಿತ ಸಮೂಹಕ್ಕೆ ಮೀಸಲಾದ ಕಾರ್ಯಕ್ರಮಗಳು, ಸಂಗೀತ ಕಾರ್ಯಕ್ರಮಗಳು, ಧಾರಾವಾಹಿಗಳು ಟೆಲಿವಿಷನ್ ಮಾಧ್ಯಮದ ಮುಖ್ಯ ಕಾರ್ಯಕ್ರಮಗಳಾಗಿವೆ. ಈ ಕಾರ್ಯಕ್ರಮಗಳನ್ನು ರೂಪಿಸುವಾಗಲೂ ಭಾಷೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ದೃಶ್ಯಗಳು ಗಮನಾರ್ಹವೆಂದೆನಿಸಿದರೂ ಆ ದೃಶ್ಯಗಳೊಂದಿಗೆ ಭಾಷೆಯ ಸ್ಪರ್ಶವೂ ಇರಲೇಬೇಕಾಗುತ್ತದೆ. ಕ್ಯಾಮರಾದಲ್ಲಿ ಸೆರೆಹಿಡಿದ ದೃಶ್ಯಗಳು ಸಂಪೂರ್ಣವಾಗಿ ವೀಕ್ಷಕರ ಅರ್ಥಗ್ರಹಿಕೆಗೆ ಎಟಕಲು ಭಾಷೆಯ ಬೆಂಬಲ ಅತ್ಯಗತ್ಯ. ಬರೀ ದೃಶ್ಯಗಳ ಸಂಕಲನದೊಂದಿಗೆ ಹಿನ್ನೆಲೆ ಧ್ವನಿಯಿಲ್ಲದೇ ರೂಪಿಸಲಾಗುವ ಕಾರ್ಯಕ್ರಮದ ವೀಕ್ಷಣೆಯಿಂದ ಪ್ರಯೋಜನವಿಲ್ಲ. ದೃಶ್ಯ, ಭಾಷಿಕ ಧ್ವನಿ ಇವೆರಡೂ ಒಟ್ಟಾದರೆ ಮಾತ್ರ ಸಂವಹನದ ಉದ್ದೇಶ ಈಡೇರುತ್ತದೆ.

ಭಾರತದಲ್ಲಿ ಆರಂಭಿಕವಾಗಿ ರಾಷ್ಟ್ರೀಯ ನೆಟ್‌ವರ್ಕ್‌ನ ಟೆಲಿವಿಷನ್ ಕಾರ್ಯಕ್ರಮಗಳೇ ಜನಪ್ರಿಯವಾಗಿದ್ದವು. ಹಿಂದಿ ಧಾರಾವಾಹಿಗಳು, ಹಿಂದಿ ಇಂಗ್ಲಿಷ್–ಸುದ್ದಿ, ಸಾಕ್ಷ್ಯಚಿತ್ರಗಳು, ವೀಕ್ಷಕ ವಿವರಣೆ ದೇಶದ ಜನರನ್ನು ಸೆಳೆದಿದ್ದವು. ನಂತರ ಪ್ರಾದೇಶಿಕ ಭಾಷೆಗಳಲ್ಲಿ ಪ್ರಸಾರ ವ್ಯವಸ್ಥೆಯ ಅನಿವಾರ್ಯತೆಯನ್ನು ಮನಗಂಡ ಸರ್ಕಾರ ಆ ನಿಟ್ಟಿನಲ್ಲಿ ಪ್ರಯತ್ನಿಸಿತು. ಪ್ರತಿಫಲವಾಗಿ ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆಯನ್ನಾಡುವ ಜನರನ್ನು ದೃಷ್ಟಿಯಲ್ಲಿರಿಸಿಕೊಂಡು ರಾಷ್ಟ್ರದಾದ್ಯಂತ ವಿವಿಧ ಪ್ರಾದೇಶಿಕ ಭಾಷಾ ವಾಹಿನಿಗಳು ಕಾರ್ಯೋನ್ಮುಖವಾದವು. ಆ ಸಂದರ್ಭದಲ್ಲಿ ಡಿಡಿ–9 ಕನ್ನಡಿಗರ ಪಾಲಿಗೆ ಆಕರ್ಷಕವೆನಿಸಿ ಬಹುಬೇಗ ವ್ಯಾಪಕ ಮನ್ನಣೆಯನ್ನು ಪಡೆಯಿತು. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಅನೇಕ ಕಾರ್ಯಕ್ರಮಗಳ ಕೊಡುಗೆಗಳು ಈ ವಾಹಿನಿಯಿಂದ ಕನ್ನಡಿಗರಿಗೆ ಲಭ್ಯವಾದವು. ತದನಂತರ ಡಿಡಿ–9 ಚಂದನ ಎನ್ನುವ ಹೆಸರಿನಲ್ಲಿ ಗುರುತಿಸಿಕೊಂಡು ಕನ್ನಡ ಭಾಷೆಯೊಂದಿಗಿನ ತನ್ನ ವಿನೂತನ ನಂಟನ್ನು ನಿರೂಪಿಸುವಂತೆ ವಿವಿಧ ಪ್ರಯೋಗಗಳನ್ನು ನಡೆಸಿತು.

ಕನ್ನಡ ಟೆಲಿವಿಷನ್ ವಾಹಿನಿಯ ಆರಂಭಿಕ ಕಾರ್ಯಕ್ರಮಗಳು ಮೌಲಿಕವಾಗಿದ್ದವು. ಮೌಲಿಕತೆ ಮತ್ತು ಗುಣಮಟ್ಟದ ದೃಷ್ಟಿಯಿಂದ ಚಂದನದ ಕಾರ್ಯಕ್ರಮಗಳು ಇವತ್ತಿಗೂ ಸರ್ವಸಮ್ಮತವೆನಿಸುವಂತೆ ರೂಪಿತವಾಗುತ್ತವೆ. ಇಡೀ ವಾರದ ಕಾರ್ಯಕ್ರಮಗಳ ಪಟ್ಟಿಯನ್ನು ಪ್ರೇಕ್ಷಕರ ಮುಂದೆ ವಿನೂತನವಾಗಿ ಮುಂದಿಡುತ್ತಿದ್ದ 'ಮುನ್ನೋಟ', ಕನ್ನಡದ ಚಲನಚಿತ್ರಗೀತೆಗಳ ವೀಕ್ಷಣೆಯ ಅವಕಾಶ ಕಲ್ಪಿಸುವ ಚಿತ್ರಮಂಜರಿ, ಕನ್ನಡದ ಮಹತ್ವದ ಕಥೆಗಳನ್ನು ಆಧರಿಸಿ ರೂಪಿತವಾದ 'ಕಥೆಗಾರ' ಧಾರಾವಾಹಿ, ಕನ್ನಡದ ಸೊಗಡನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದ್ದ ಕನ್ನಡ ಗೀತರೂಪಕಗಳು ಕನ್ನಡ ಭಾಷೆಯ ಕುರಿತಾದ ಅಭಿಮಾನವನ್ನು ಮೂಡಿಸುವ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ನಿಭಾಯಿಸಿದವು. ತದನಂತರ ಬಂದ ಖಾಸಗಿ ಚಾನಲ್‌ಗಳಾದ ಉದಯ, ಈ ಟಿವಿಯಿಂದಲೂ ಕೆಲವು ಪ್ರಯೋಗಗಳಾದರೂ ಇವತ್ತಿಗೂ ಚಂದನದ ಆರಂಭಿಕ ಪ್ರಯೋಗಗಳು ವಿಶೇಷ ಎಂದೆನಿಸುತ್ತವೆ. ಈ ಟಿವಿಯ 'ಕನ್ನಡನಾಡಿ' ಪ್ರಾದೇಶಿಕ ಸುದ್ದಿ ಸಂಚಿಕೆಯು ತನ್ನ ಕನ್ನಡತನದ ಗುಣದಿಂದಲೇ ಹಲವರ ಮೆಚ್ಚುಗೆಗೆ ಪಾತ್ರವಾಗಿದೆ. ಈಗಂತೂ ಕನ್ನಡದಲ್ಲಿ ಸುದ್ದಿ ಮಾಹಿತಿಯನ್ನು ನೀಡುವುದಕ್ಕಾಗಿಯೇ ಪ್ರತ್ಯೇಕ ವಾಹಿನಿಗಳು ಕಾರ್ಯಪ್ರವೃತ್ತವಾಗಿವೆ.

ಉದಯ ಚಾನಲ್‌ನಿಂದ ಕಾರ್ಯಕ್ರಮಗಳ ಮಧ್ಯೆ ಸುದ್ದಿ ಮಾಹಿತಿಯನ್ನು ನೀಡುವ ಪ್ರಯೋಗ ಶುರುವಾಯಿತು. ನಂತರ ಅದು ಕರ್ನಾಟಕದಲ್ಲಿ ಸಂಪೂರ್ಣ ಸುದ್ದಿ ಚಾನಲ್‌ನ್ನು ಆರಂಭಿಸಿತು. ನಂತರ ಈ ಟಿವಿ ಮನರಂಜನಾ ವಾಹಿನಿಯಾಗಿ ಆರಂಭವಾಗಿ ಕಾರ್ಯಕ್ರಮಗಳ ಮಧ್ಯೆ ಸುದ್ದಿ ನೀಡಲಾರಂಭಿಸಿತು. ಇದೀಗ ಟಿವಿ 9, ಸಮಯ, ಜನಶ್ರೀ, ಪಬ್ಲಿಕ್, ಸುವರ್ಣ ವಾಹಿನಿಗಳು ಸುದ್ದಿಗಾಗಿಯೇ ಮೀಸಲಾದ ಪ್ರತ್ಯೇಕ ಟೆಲಿವಷನ್ ಚಾನಲ್‌ಗಳಾಗಿ ತಮ್ಮನ್ನು ಗುರುತಿಸಿಕೊಂಡಿವೆ. ಸುದ್ದಿ ನಿರೂಪಣೆ ಮತ್ತು ಕನ್ನಡ ಭಾಷೆ ಬಳಕೆಯಲ್ಲಿ ಪ್ರತಿಯೊಂದು ವಾಹಿನಿಯೂ ತನ್ನದೇ ಆದ ಪ್ರಯೋಗಗಳನ್ನು ನಡೆಸುತ್ತಿದೆ.

**ಸಿನಿಮಾ ಮತ್ತು ಭಾಷೆ**

ಸಿನಿಮಾ 20ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಅತ್ಯದ್ಭುತ ತಾಂತ್ರಿಕ ಆವಿಷ್ಕಾರಗಳಲ್ಲೊಂದು. ಈ ತಾಂತ್ರಿಕ ಅವಿಷ್ಕಾರ ಜನಬದುಕನ್ನು ಆವರಿಸಿಕೊಂಡದ್ದು ಭಾಷಿಕ ನೆಲೆಯಲ್ಲಿಯೇ. ದೃಶ್ಯದ ಕಾರಣಕ್ಕಾಗಿ ಆರಂಭಿಕವಾಗಿ ಗಮನಸೆಳೆದುಕೊಂಡು ಕುತೂಹಲ ಕೆರಳಿಸಿದ್ದ ಸಿನಿಮಾ ಮಾಧ್ಯಮ ಕ್ರಮೇಣ ಆಯಾ ದೇಶಗಳ, ಪ್ರದೇಶಗಳ ಭಾಷೆ ಮತ್ತು ಸಂಸ್ಕೃತಿಯ ದೃಶ್ಯಾತ್ಮಕ ಅಭಿವ್ಯಕ್ತಿಯ ಮೂಲಕ ಬಹುಬೇಗ ಜನಸ್ನೇಹಿ ಮಾಧ್ಯಮವಾಗಿ ಪುನರ್‌ಸ್ವರೂಪ ಪಡೆದುಕೊಂಡಿತು. 1906ರ ಜುಲೈ 7ರಂದು ಲ್ಯೂಮಿಯರ್ ಸಹೋದರರು ವಿವಿಧ ಚಿತ್ರಿಕೆಗಳ ಪ್ರದರ್ಶನದ ಮೂಲಕ ಭಾರತದಲ್ಲಿ ಸಿನಿಮಾಯುಗವೊಂದು ಆರಂಭ ಕಂಡಿತು. ದೃಶ್ಯಗಳ ಸೆರೆಹಿಡಿಯುವಿಕೆ, ಅವುಗಳ ಕ್ರಮಬದ್ಧ ಜೋಡಿಸುವಿಕೆಯ ತಾಂತ್ರಿಕ ನೈಪುಣ್ಯತೆ ಸಿನಿಮಾವೊಂದನ್ನು ರೂಪುಗೊಳಿಸುವಾಗ ಅಗತ್ಯವೆನಿಸುತ್ತದೆ. ಭಾಷೆಯ ಸ್ಪರ್ಶವಿದ್ದಾಗ ಮಾತ್ರ ಈ ತಾಂತ್ರಿಕ ನೈಪುಣ್ಯತೆ ಪ್ರಯೋಜನಕ್ಕೆ ಬರುತ್ತದೆ.

ಡಾ.ಕೆ.ಪುಟ್ಟಸ್ವಾಮಿ ಅವರು 'ಸಿನಿಮಾ ಯಾನ' ಕೃತಿಯಲ್ಲಿ ಸಿನಿಮಾ ಮತ್ತು ಭಾಷೆಯ ನಡುವಿನ ನಂಟನ್ನು ಪ್ರಸ್ತಾಪಿಸುತ್ತಾ ಈ ನಂಟಿನ ಮಹತ್ವವೇನು ಎಂಬುದನ್ನು ವಿಭಿನ್ನವಾಗಿ ಗುರುತಿಸಿದ್ದಾರೆ. "ಆರಂಭದಲ್ಲಿ ತಯಾರಾಗುತ್ತಿದ್ದ ಮಾತಿಲ್ಲದ ಮೂಕಿ ಸಿನಿಮಾಗಳು ಭಾಷೆಯ ಗೈರು ಹಾಜರನಿಯಿಂದಲೇ ಜಾಗತಿಕ ಸ್ವರೂಪ ಪಡೆದಿದ್ದವು. ಮಾತಿನ ಅಳವಡಿಕೆಯ ನಂತರ ಅವುಗಳಿಗೆ ಪ್ರಾದೇಶಿಕ ಲಕ್ಷಣ ಸೊಬಗು ಬಂತು. 'ಮಾತಿ'ನ ಒಂದೇ ಕಾರಣಕ್ಕಾಗಿ ಚಲನಚಿತ್ರರಂಗ ಬೇರೆ ಬೇರೆ ಇತಿಹಾಸಗಳನ್ನು ಪಡೆದಿದೆ. ಜಾಗತಿಕ ಸಿನಿಮಾ ಜನ್ಮ ತಾಳಿ 1895ರಲ್ಲಿ ಜನ್ಮತಾಳಿತು. 1931ರಲ್ಲಿ ಹಿಂದಿ ಭಾಷೆಯ 'ಆಲಂಆರಾ' ತೆರೆಕಾಣುವ ಮೂಲಕ ಭಾರತದಲ್ಲಿ 'ಟಾಕಿ'ಯುಗ ಆರಂಭವಾಯಿತು. ಅದಾದ ಮೂರು ವರ್ಷಗಳ ತರುವಾಯ ಕನ್ನಡದ ವಾಕ್ಚಿತ್ರ 'ಸತಿ ಸುಲೋಚನಾ' ತೆರೆಯ ಮೇಲೆ ಮೂಡಿತು" ಎಂದು ಅವರು ಪ್ರಸ್ತಾಪಿಸಿದ್ದಾರೆ. ಕನ್ನಡ ಚಿತ್ರರಂಗ ಐವತ್ತರ ದಶಕದ ಹೊತ್ತಿಗೆ ಸಬಲಗೊಂಡಿತ್ತು. ಡಾ.ರಾಜಕುಮಾರ್ ಸೇರಿದಂತೆ ಹಲವು ಪ್ರತಿಭಾನ್ವಿತ ನಟರು, ನಿರ್ದೇಶಕರು ಕನ್ನಡದ ಜಗತ್ತನ್ನು ತಮ್ಮ ಸಿನಿಮಾಗಳ ಮೂಲಕ ಸಮರ್ಥವಾಗಿ ಬಿಂಬಿಸಿದರು. ಕನ್ನಡಪರ ಚಳುವಳಿಯಲ್ಲಿ ಸಿನಿಮಾ ಕಲಾವಿದರು ತೊಡಗಿಸಿಕೊಳ್ಳುವ ಮೂಲಕ ಕನ್ನಡ ಜನರ ಮನಗೆದ್ದರು. ಆ ಮೂಲಕ ಕನ್ನಡ ಸಿನಿಮಾ ಜನಮನದಲ್ಲಿ ಪ್ರಾಮುಖ್ಯತೆಯನ್ನು ಪಡೆಯಿತು.

**ಭಾಷಾಭಿಮಾನ ಮತ್ತು ಸಿನಿಮಾ**

ಭಾಷಾಭಿಮಾನದ ಅಭಿವ್ಯಕ್ತಿ ಹೇಗೆ? ಮೇಲ್ನೋಟದಲ್ಲಿ ಈ ಪ್ರಶ್ನೆ ಸುಲಭವೆನಿಸಿದರೂ ಉತ್ತರ ಕಂಡುಕೊಳ್ಳುವುದು ಅಷ್ಟು ಸರಳವಲ್ಲ. ಉತ್ತರ ಭಾರತೀಯರನ್ನು ಮುಂಬೈ ಬಿಟ್ಟು ಒದ್ದೋಡಿಸಬೇಕು ಎಂಬ ಶಿವಸೇನೆಯ ವಾದ, ಬಿಹಾರದವರಿಗಷ್ಟೇ ಮಣೆ ಹಾಕುವಂಥ ಮಾಜಿ ರೈಲ್ವೇ ಸಚಿವ ಲಾಲು ಪ್ರಸಾದ್‌ರ ತಾರತಮ್ಯ ದೃಷ್ಟಿಕೋನ, ತಮಿಳರು ಬೆಂಗಳೂರಿನಲ್ಲಿ ಹೆಚ್ಚುತ್ತಿದ್ದಾರೆ ಎಂಬ ಆತಂಕವನ್ನು ಹೆಚ್ಚಿಸಿ ದ್ವೇಷಭಾವ ಮೂಡಿಸುವಿಕೆ ಮತ್ತು ಕನ್ನಡಿಗರು ಪರಭಾಷಾ ಚಿತ್ರಗಳನ್ನು ನೋಡುತ್ತಿದ್ದಾರೆ ಎಂಬ ಕೊರಗನ್ನು ನಿರಂತರವಾಗಿ ವ್ಯಕ್ತಪಡಿಸುವಿಕೆಯೇ ಭಾಷಾಭಿಮಾನದ ಸಂಕೇತಗಳಾಗಿ ಇವತ್ತು ವಿಜೃಂಭಿಸುತ್ತಿವೆ. ಇದಷ್ಟೇ ಭಾಷಾಭಿಮಾನದ ದ್ಯೋತಕ ಎಂದು ಬಿಂಬಿಸಿ ಗಡಿ–ಗೋಡೆಗಳನ್ನು ಕಟ್ಟುವ ಪ್ರಯತ್ನಗಳಂತೂ ಮತ್ತೆಮತ್ತೆ ವ್ಯಾಪಕವಾಗುತ್ತಲೇ ಇವೆ. ಅಭಿಮಾನ ಮೂಡಿಸುವ ನೆಪದಲ್ಲಿ ಸಂಘರ್ಷಕ್ಕಿಳಿದು ರಾಜಕೀಯ ಲಾಭ ಪಡೆದುಕೊಳ್ಳುವ ತಂತ್ರಗಳು ನಿರಂತರವಾಗಿ ಯಶಸ್ವಿಯಾಗುತ್ತಲೇ ಇವೆ. ಆದರೆ, ನಾಡು–ನುಡಿ ಅಭಿಮಾನ ಈ

ಬಗೆಯ ತೋರಿಕೆಯಲ್ಲಿ ಮಾತ್ರ ವ್ಯಕ್ತಗೊಳ್ಳುವುದಿಲ್ಲ. ಆ ಅಭಿಮಾನ ಆಯಾ ಭಾಷಿಕರೊಳಗೆ ಸುಪ್ತವಾಗಿರುತ್ತದೆ. ಅಂತರ್ಮುಖಿಯಾಗಿರುತ್ತದೆ. ಈ ನೆಲದಲ್ಲಿ ಅರಳಿಕೊಂಡು ಜಗದಗಲ, ಮುಗಿಲಗಲ ಬೆಳೆದು ನಿಲ್ಲುವ ಗುಣದೊಂದಿಗೆ ಅದು ಸಮ್ಮಿಳಿತವಾಗಿರುತ್ತದೆ.

ಆದರೆ, ಈಗಿನ ಭಾಷಾಭಿಮಾನಕ್ಕೆ ಸಂಕುಚಿತೆಯ ಜಾಡ್ಯ ಅಂಟಿಕೊಂಡಿದೆ. ಸಂಕುಚಿತ ನೆಲೆಗಟ್ಟಿನಲ್ಲಿ ಕನ್ನಡ ಅಭಿಮಾನ ಮೂಡಿಸುತ್ತಿರುವ ಕೆಲ ಮುಂಚೂಣಿ ಕನ್ನಡಪರ ಸಂಘಟನೆಗಳವರು ಕರ್ನಾಟಕದ ವ್ಯಾಪ್ತಿಯಲ್ಲಿ ಆಗಾಗ ನಡೆಯುವ ಘಟನೆಗಳಿಂದಲಾದರೂ ತಮ್ಮನ್ನು ತಾವು ಆತ್ಮಾವಲೋಕನ ಮಾಡಿಕೊಳ್ಳುವ ಅನಿವಾರ್ಯತೆಯನ್ನು ಮನಗಾಣಬೇಕು. ಅನ್ಯಭಾಷೆಗಳ ಚಿತ್ರಗಳನ್ನು ನೋಡಬಾರದು ಎಂದು ಫರ್ಮಾನು ಹೊರಡಿಸುವಂತೆ ವೀರಾವೇಶದಿಂದ ಮಾತನಾಡುವ ಹೋರಾಟಗಾರರು ಭಾಷೆಯ ನೆಲೆಯಲ್ಲಿ ಭಾರತೀಯರನ್ನು ಒಡೆಯುವುದಕ್ಕೆ ನೆರವಾಗುತ್ತಾರೆಯೇ ವಿನಃ ಭಾಷಾ ಸೌಹಾರ್ದತೆಯನ್ನು ನೆಲೆಗೊಳಿಸುವುದಿಲ್ಲ. ನೆರೆ ರಾಜ್ಯಗಳ ಹೊಸ ಸಿನಿಮಾಗಳ ಬಿಡುಗಡೆಯಾದಾಗ ಕನ್ನಡ ಚಿತ್ರಗಳಿಗೆ ಅವು ಪ್ರತಿಸ್ಪರ್ಧಿ ಎಂಬಂತೆ ಬಿಂಬಿಸಲಾಗುತ್ತದೆ. ಈ ಕಾರಣಕ್ಕಾಗಿಯೇ ವಿವಾದಗಳು ಸೃಷ್ಟಿಯಾಗುತ್ತವೆ. ತೆಲುಗಿನ 'ಮಗಧೀರ' ಚಿತ್ರ ಬಿಡುಗಡೆಯಾದಾಗಲೂ ವಿವಾದ ಉಂಟಾಗಿತ್ತು. ತೆಲುಗು ಚಿತ್ರರಂಗದಲ್ಲಿ ಖ್ಯಾತಿಯ ಉತ್ತುಂಗ ತಲುಪಿ ಇದೀಗ ರಾಜಕಾರಣದ ಅಖಾಡಕ್ಕಿಳಿದಿರುವ ಚಿರಂಜೀವಿ ಪುತ್ರ ರಾಮ್‌ಚರಣ್ ಅಭಿನಯಿಸಿದ ಎರಡನೇ ತೆಲುಗು ಚಿತ್ರ 'ಮಗಧೀರ'. ರಾಜ್ ಮೊಹಿಲಿ ಇದರ ನಿರ್ದೇಶಕ. ಆಂಧ್ರದಲ್ಲಿ ಮಾತ್ರವಲ್ಲದೇ ಕರ್ನಾಟಕದಲ್ಲಿಯೂ ಹೊಸ ಸಂಚಲನ ಮೂಡಿಸಿತ್ತು. ಇದು ಬಿಡುಗಡೆಯಾಗುವ ಮುನ್ನ ಹತ್ತು ಹಲವು ಬಾರಿ ತೆಲುಗು ಮಾಧ್ಯಮಗಳಲ್ಲಿ ಈ ಚಿತ್ರದ ವಿವರಗಳು ಬಿತ್ತರವಾಗುತ್ತಲೇ ಇದ್ದವು. ನಮ್ಮ ಕನ್ನಡದ ಕೆಲವು ಸುದ್ದಿಚಾನಲ್‌ಗಳೂ ಈ ಚಿತ್ರದ ಅದ್ದೂರಿತನದ ಮಾಹಿತಿಯನ್ನು ಕೊಟ್ಟಿದ್ದವು. ರಾಜ, ರಾಣಿ, ರಾಜಕುಮಾರಿ, ಆಕೆಯನ್ನು ಪ್ರೀತಿಸುವ ಸೈನಿಕ, ಯುದ್ಧ, ಅದರಲ್ಲಿ ಭಾಗಿಯಾಗಿ ಜೀವ ಕಳೆದುಕೊಂಡು ಮತ್ತೆ ಹುಟ್ಟಿಬರುವವರು – ಇದರ ಸುತ್ತ 'ಮಗಧೀರ' ಅನಾವರಣಗೊಳ್ಳುತ್ತದೆ. ಇದಕ್ಕೂ ಮುಂಚೆ ರಾಮ್‌ಚರಣ್ 'ಚಿರುತ' ಎಂಬ ಚಿತ್ರದಲ್ಲಿ ನಟಿಸಿ ಆಂಧ್ರದಲ್ಲೆಲ್ಲಾ ಮನೆಮಾತಾಗಿಬಿಟ್ಟ. ಆತನ ಪ್ರಭಾವಳಿ ಕರ್ನಾಟಕದ ತೆಲುಗು ಅಭಿಮಾನಿಗಳ ಮೇಲೂ ಆಯಿತು. ಆ ಚಿತ್ರದಿಂದ ಗಳಿಸಿದ ಖ್ಯಾತಿಯು 'ಮಗಧೀರ'ನನ್ನು ನೋಡುವ ಕುತೂಹಲವನ್ನು ಇಲ್ಲಿಯ ಜನರಲ್ಲಿ ಮೂಡಿಸಿತ್ತು.

ಈ ಚಿತ್ರ ಬಿಡುಗಡೆಯಾದದ್ದೇ ತಡ, ಆಂಧ್ರದ ಥಿಯೇಟರ್‌ಗಳ ಮುಂದೆ ಅನೇಕಾನೇಕ ಅಭಿಮಾನಿಗಳು ಜಮಾಯಿಸಿದ್ದರು. ಅವರ ನೂಕುನುಗ್ಗಲು ಪೊಲೀಸರು ಲಾಠಿ ಬೀಸಲು ಕಾರಣವಾಗಿತ್ತು. ಬೆಂಗಳೂರಿನಲ್ಲಿಯೂ ಲಘುಲಾಠಿಪ್ರಹಾರವಾಯಿತು. ರಾಯಚೂರು, ಬಳ್ಳಾರಿ ಸೇರಿದಂತೆ ಆಂಧ್ರದ ಗಡಿಗೆ ಅಂಟಿಕೊಂಡ ಕರ್ನಾಟಕದ ಭಾಗಗಳಲ್ಲಿಯೂ ನೂಕುನುಗ್ಗಲಿನ ವಾತಾವರಣ ಉಂಟಾಯಿತು. ರಾಯಚೂರಿನಲ್ಲಂತೂ ಜನರು ಟಿಕೆಟ್‌ಗಾಗಿ ಬೆಳಗಿನ ಜಾವ ಐದು ಗಂಟೆಗೇ ಚಿತ್ರಮಂದಿರದೆದುರು ಸರದಿ ಸಾಲಲ್ಲಿ ನಿಂತಿದ್ದರು. ಹೊತ್ತೇರುತ್ತಿದ್ದಂತೆಯೇ ಈ ಸಾಲು ದೊಡ್ಡದಾಗುತ್ತಿತ್ತು. ಅಭಿಮಾನಿಗಳನ್ನು ನಿಯಂತ್ರಿಸಲು ಮುಂಜಾಗ್ರತಾ ಕ್ರಮವಾಗಿ ಪೊಲೀಸರೂ ಇರುತ್ತಿದ್ದರು. ಈ ತೆರನಾದ ಅಭಿಮಾನವನ್ನು ನಮ್ಮ ಟಿಪಿಕಲ್ ಕನ್ನಡಪರ ಸಂಘಟನೆಗಳು ಹೇಗೆ ಗುರುತಿಸುತ್ತವೆಯೋ ಗೊತ್ತಿಲ್ಲ. ಅವರು ತೆಲುಗು ಸಿನಿಮಾವಿರೋಧಿ ಆಂದೋಲವನ್ನು ಮಾಡಿ ಕನ್ನಡ ಚಿತ್ರಗಳನ್ನೇ ನೋಡಬೇಕು ಎಂಬ ಹಕ್ಕೊತ್ತಾಯ ಮಂಡಿಸಿದರೂ

ತೆಲುಗು ಸೇರಿದಂತೆ ನೆರೆರಾಜ್ಯದ ಭಾಷೆಗಳ ಸಿನಿಮಾಗಳನ್ನು ನೋಡುವ ಉತ್ಸಾಹಕ್ಕೆ ಬ್ರೇಕ್ ಹಾಕುವುದಕ್ಕಾಗುವುದಿಲ್ಲ. ರಾಜ್ಯೋತ್ಸವ ತಿಂಗಳು ನವೆಂಬರ್‌ನಲ್ಲಿ ಎಲ್ಲಾ ಚಿತ್ರಮಂದಿರಗಳು ಕಡ್ಡಾಯವಾಗಿ ಕನ್ನಡ ಚಿತ್ರಗಳನ್ನೇ ಪ್ರದರ್ಶಿಸಬೇಕು ಎಂಬ ನಿಯಮಕ್ಕೊಳಗಾಗಿದ್ದಾಗ ಪಕ್ಕದ ಆಂಧ್ರದಲ್ಲಿರುವ ಚಿತ್ರಮಂದಿರಗಳಿಗೆ ತೆರಳಿ ತೆಲುಗು ಸಿನಿಮಾಗಳನ್ನು ನೋಡಿಬರುತ್ತಾರೆ. ಇದನ್ನು ಕನ್ನಡ ನಾಡು–ನುಡಿಯೆಡೆಗಿನ ನಿರಭಿಮಾನ ಎಂದು ಗುರುತಿಸುವುದಕ್ಕಾಗುವುದಿಲ್ಲ. ಭಾರತದಲ್ಲಿಯ ಆಯಾ ರಾಜ್ಯಗಳವರು ಆಯಾ ರಾಜ್ಯಭಾಷೆಗಳಲ್ಲಿ ಸಿದ್ಧವಾಗುವ ಸಿನಿಮಾಗಳನ್ನೇ ವೀಕ್ಷಿಸಬೇಕು, ಅದೇ ಭಾಷೆಗಳಲ್ಲಿ ಪ್ರಕಟವಾಗುವ ಪುಸ್ತಕಗಳನ್ನೇ ಓದಬೇಕು ಎಂಬ ನಿಯಮವೂ ಜಾರಿಯಲ್ಲಿಲ್ಲ. ಒಂದು ವೇಳೆ ಸಂಕುಚಿತ ದೃಷ್ಟಿಕೋನದ ಭಾಷಾ ಹೋರಾಟಗಾರರ ತಾಕೀತಿಗೆ ಮಣಿದು ಅಂಥ ನಿಯಮಗಳನ್ನು ರೂಪಿಸಿದರೂ ಪ್ರಯೋಜನವಾಗುವುದಿಲ್ಲ. ಕನ್ನಡ ಚಲನಚಿತ್ರಗಳನ್ನು ನಮ್ಮ ಜನರು ನೋಡುವಂತಾಗಿಸುವ ಪ್ರಯತ್ನಗಳಾಗಬೇಕೇ ಹೊರತು ಇನ್ನುಳಿದ ಭಾಷಾ ಚಿತ್ರಗಳನ್ನು ದ್ವೇಷಿಸುವಂತ ವಾತಾವರಣವನ್ನು ಸೃಷ್ಟಿಸಬಾರದು.

ಗಡಿಭಾಗಗಳಲ್ಲಿ ತೆಲುಗು ಸಿನಿಮಾಗಳು ಮಾತ್ರವಲ್ಲ; ಹಿಂದಿ ಸಿನಿಮಾಗಳಿಗೂ ಭಾರೀ ಪ್ರಮಾಣದ ಅಭಿಮಾನಿವರ್ಗವಿದೆ. ಅವರು ಅವುಗಳನ್ನು ಇಷ್ಟಪಡುವುದಕ್ಕೆ ಹತ್ತು–ಹಲವು ಕಾರಣಗಳಿರುತ್ತವೆ. ಒಂದು ಸಿನಿಮಾ ಭಾರೀ ಸಂಖ್ಯೆಯಲ್ಲಿ ಪ್ರೇಕ್ಷಕವರ್ಗವನ್ನು ಸೆಳೆದುಕೊಳ್ಳುವುದಕ್ಕೆ ನಿರ್ದಿಷ್ಟ ಕಾರಣಗಳನ್ನು ಗುರುತಿಸುವುದಕ್ಕಾಗುವುದಿಲ್ಲ. ಈ ಅಭಿಮಾನ ನಿನ್ನೆ–ಮೊನ್ನೆಯದಲ್ಲ. ಸಿನಿಮಾಗಳು ಥಿಯೇಟರ್‌ಗಳ ಮೂಲಕ ಜನರನ್ನು ತಲುಪುವ ಪ್ರಕ್ರಿಯೆ ಆರಂಭವಾದಾಗಿನಿಂದಲೂ ಇದೆ. ತಾವು ಆರಾಧಿಸುವ ತೆಲುಗು ನಟರ ಚಿತ್ರ ಬಿಡುಗಡೆಯಾದಾಗ ಕುರಿಗಳನ್ನು ಕೊಯ್ದು ಹಬ್ಬದೂಟ ಮಾಡಿ ಇಲ್ಲಿಯ ಜನ ಸಂಭ್ರಮಿಸಿದ್ದಾರೆ. ಕಾಲಕಾಲಕ್ಕೆ ಈ ಸಂಭ್ರಮದ ಸ್ವರೂಪವೂ ಬದಲಾಗುತ್ತಲೇ ಇದೆ. ಇಷ್ಟದ ನಟರ ಕಟೌಟ್‌ಗಳ ಮೇಲೆ ಕ್ಷೀರಾಭಿಷೇಕ ಮಾಡಿ ಖುಷಿಪಟ್ಟಿದ್ದಾರೆ. ನೋಡಿದ ತೆಲುಗು ಸಿನಿಮಾವನ್ನೇ 50 ಸಲ, 100 ಸಲ ನೋಡಿ ಕಂಡವರ ಮುಂದೆಲ್ಲಾ ಹೇಳಿಕೊಂಡು ಬೀಗಿದ್ದಾರೆ.

ಅಕ್ಕಿನೇನಿ ನಾಗೇಶ್ವರರಾವ್ ಅಭಿನಯದ 'ಪ್ರೇಮಾಭಿಷೇಕಂ' ತೆಲುಗು ಸಿನಿಮಾ ರಾಯಚೂರಿನ ಚಂದ್ರಕಾಂತ್ ಚಿತ್ರಮಂದಿರ(ಇದೀಗ ಮಾಲಕರು ಬದಲಾಗಿದ್ದು, ಇದರ ಈಗಿನ ಹೆಸರು ಚಿತ್ರಮಂದಿರ)ದ ಅಭಿಮಾನಿಗಳು ಕುರಿಬಲಿ ನೀಡಿದ್ದರು. ಹತ್ತು ವರ್ಷಗಳ ಹಿಂದೆ ನಿರ್ಮಿತವಾದ 'ಅಮ್ಮೋರು' ಎಂಬ ತೆಲುಗು ಸಿನಿಮಾ ರಾಯಚೂರಿನ ಶಶಿಮಹಲ್ ಚಿತ್ರಮಂದಿರದಲ್ಲಿ ನೂರಕ್ಕೂ ಹೆಚ್ಚು ದಿನಗಳ ಕಾಲ ಪ್ರದರ್ಶಿಸಲ್ಪಟ್ಟಿತ್ತು. ದೇವಿ ಮಹಿಮೆ ಕುರಿತಾದ ಈ ಚಿತ್ರದ ಕಥೆ ಹಲವರನ್ನು ಸೆಳೆದಿತ್ತು. ಕನ್ನಡದವರೇ ಆಗಿದ್ದ, ತೆಲುಗಿನಲ್ಲಿ ಜನಪ್ರಿಯ ನಟಿಯಾಗಿ ಗುರುತಿಸಿಕೊಂಡಿದ್ದ ಸೌಂದರ್ಯರ ಈ ಚಿತ್ರದಲ್ಲಿನ ಅಭಿನಯ ಈ ಭಾಗದ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿತ್ತು. ಈ ಅಭಿಮಾನ ಎಷ್ಟು ತೀವ್ರವಾಗಿತ್ತೆಂದರೆ, ಚಿತ್ರಮಂದಿರದ ಮುಂದೆ ಸೌಂದರ್ಯ ಮತ್ತು ದೇವಿ ಪಾತ್ರವನ್ನು ನಿರ್ವಹಿಸಿದ್ದ ಬಾಲನಟಿಯ ಪೋಸ್ಟರ್, ಕಟೌಟ್‌ಗಳ ಮುಂದೆ ಪ್ರದರ್ಶನದ ಅಷ್ಟೂ ದಿನಗಳ ಕಾಲ ಪೂಜೆ–ಪುನಸ್ಕಾರಗಳು ನಡೆದಿದ್ದವು. ಗಡಿಭಾಗದ ಹಳ್ಳಿಗಳ ಜನರು ಚಿತ್ರಮಂದಿರದೊಳಗೆ ಹೋಗುವ ಮುನ್ನ ಇವುಗಳೆಡೆಗೆ ಮುಖಮಾಡಿ ನಿಂತು ನಮಸ್ಕರಿಸಿಯೇ ಒಳಗೆ ಕಾಲಿಡುತ್ತಿದ್ದರು. ಒಂದೇ ದಿನದಲ್ಲಿಯೇ ಏನೆಲ್ಲಾ ಬದಲಾವಣೆಗಳನ್ನು ಸಾಧ್ಯವಾಗಿಸುವ ಏಕದಿನ ಮುಖ್ಯಮಂತ್ರಿಯ ಕಥೆಯನ್ನೇ ವಸ್ತುವಾಗಿಸಿಕೊಂಡ ತೆಲುಗಿನ 'ಒಕೇ ಒಕ್ಕಡು' (ಮೂಲ: ತಮಿಳು, ಅರ್ಜುನ್ ಸರ್ಜಾ ಅಭಿನಯ, ಶಂಕರ್ ನಿರ್ದೇಶನ)

ಸಿನಿಮಾ ಕೂಡಾ ಜನರನ್ನು ಇದೇ ತರಹ ಸೆಳೆದಿತ್ತು. ಕಮಲ್ ಹಾಸನ್ ಅವರು ದ್ವಿಪಾತ್ರದಲ್ಲಿ ನಟಿಸಿದ್ದ 'ಭಾರತೀಯುಡು' (ಮೂಲ ತಮಿಳು) ಸಿನಿಮಾ ಕೂಡಾ ಇಲ್ಲಿಯ ಜನರ ಮೆಚ್ಚುಗೆಗೆ ಪಾತ್ರವಾಗಿತ್ತು. ಇದರ ಹಿಂದಿ ಅವತರಣಿಕೆ 'ಇಂಡಿಯನ್'ನ್ನೂ ನೋಡಿ ಆನಂದಿಸಿದ್ದರು. 'ಠಾಗೋರ್' ಸಿನಿಮಾದಲ್ಲಿ ವ್ಯವಸ್ಥೆಯ ಲೋಪಗಳನ್ನು ಎತ್ತಿಹಿಡಿದು ಹೋರಾಡಿ ನೊಂದವರಿಗೆ ನ್ಯಾಯ ದೊರಕಿಸಿಕೊಡುವ ಪಾತ್ರದಲ್ಲಿ ಮಿಂಚಿದ್ದ ಚಿರಂಜೀವಿ ಪ್ರಭಾವವೂ ಕೂಡಾ ಗಡಿಭಾಗದ ಚಿತ್ರಮಂದಿರಗಳಲ್ಲಿ ನೂಕುನುಗ್ಗಲು ಉಂಟಾಗುವಂತೆ ಮಾಡಿತ್ತು. ಎನ್‌ಟಿಆರ್ ಪುತ್ರ ಬಾಲಕೃಷ್ಣ, ಎನ್‌ಟಿಆರ್ ಮೊಮ್ಮಗ ಜ್ಯೂನಿಯರ್ ಎನ್‌ಟಿಆರ್ ಕೂಡಾ ಈ ಭಾಗದಲ್ಲಿ ಈಗಲೂ ಪ್ರಭಾವೀ ನಟರು. ನಾಯಕ ನಟರು ಮಾತ್ರವಲ್ಲ. ಅನೇಕ ತೆಲುಗು ಸಿನಿಮಾಗಳಿಗಾಗಿ ಹಾಡಿದ ಘಂಟಸಾಲ ಇಲ್ಲಿ ಜನಜನಿತ. ಅವರನ್ನು ಅನುಕರಿಸಿ ಹಾಡಿ ಮನ್ನಣೆ ಗಳಿಸಿಕೊಳ್ಳುವ ಹಿರಿಯ ಪ್ರತಿಭೆಗಳೂ ಅಲ್ಲಲ್ಲಿ ಕಾಣಸಿಗುತ್ತವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಕನ್ನಡದ ವರನಟ ಡಾ.ರಾಜ್‌ಕುಮಾರ್ ಅವರ ಸಿನಿಮಾಗಳನ್ನೂ ನೋಡಿ ಖುಷಿಪಟ್ಟಿದ್ದಾರೆ.

ತೆಲುಗರ ಆರಾಧ್ಯನಟರಾದ ಎನ್.ಟಿ.ರಾಮರಾವ್, ನಾಗೇಶ್ವರರಾವ್, ಚಿರಂಜೀವಿ, ಬಾಲಕೃಷ್ಣ ಮತ್ತಿತರ ಖ್ಯಾತನಾಮರ ಚಿತ್ರಗಳನ್ನು ಅತ್ಯಂತ ಪ್ರೀತಿಯಿಂದ ನೋಡಿ ಆನಂದಿಸಿದ ಹಿರಿ–ಕಿರಿಯ ಪೀಳಿಗೆ ಈ ಭಾಗಗಳಲ್ಲಿವೆ. ತಮ್ಮ ಇಷ್ಟದ ತೆಲುಗು ನಟರ ಚಿತ್ರಗಳು ಬಿಡುಗಡೆಯಾದಾಗ ಮೊದಲ ಪ್ರದರ್ಶನದಲ್ಲಿಯೇ ಪಾಲ್ಗೊಂಡು ವೀಕ್ಷಿಸುವ ಉತ್ಸಾಹ ಇಲ್ಲಿ ಕಂಡುಬರುತ್ತದೆ. ಟಿವಿ ಚಾನೆಲ್ಲುಗಳಲ್ಲಿ ಈ ಹಳಬರ ಸಿನಿಮಾ ಪ್ರಸಾರವಾಯಿತೆಂದರೆ ಹಿರಿಯರು ಆ ಸಿನಿಮಾ ಪೂರ್ಣಗೊಳ್ಳುವವರೆಗೆ ಅವರ ನಟನಾ ವೈಖರಿಯನ್ನು ಹೊಗಳುತ್ತಾ, ಅದರೊಂದಿಗೆ ಆ ಕಾಲದ ನೆನಪುಗಳನ್ನು ಪಕ್ಕದಲ್ಲಿ ಕುಳಿತವರೊಂದಿಗೆ ಹಂಚಿಕೊಳ್ಳುತ್ತಾ ವೀಕ್ಷಿಸುತ್ತಾರೆ. ಇದೇ ಬಗೆಯ ಪ್ರಭಾವಳಿ ಹಿಂದಿ ಸಿನಿಮಾ ನಟರಿಗೂ ಅನ್ವಯಿಸುತ್ತದೆ.

ಬೆಂಗಳೂರನ್ನಷ್ಟೇ ಕಾರ್ಯಕ್ಷೇತ್ರವಾಗಿಸಿಕೊಂಡು ಜಿಲ್ಲಾ ಘಟಕಗಳನ್ನು ರಚಿಸಿಕೊಂಡು ಸಾಂದರ್ಭಿಕವಾಗಿ ಮಾತ್ರ ಬಂಡೇಳುವಂಥ ನಮ್ಮ ಕನ್ನಡಪರ ಸಂಘಟನೆಗಳವರು ಗಡಿಭಾಗದಲ್ಲಿ ನೆರೆರಾಜ್ಯದ ಭಾಷೆಗಳ ಕುರಿತ ಈ ಪರಿಯ ಅಭಿಮಾನವನ್ನು ಹತ್ತಿರದಿಂದ ಗಮನಿಸಬೇಕು. ಎರಡು ಭಾಷೆಗಳ ನಡುವೆ ಕೊಡು–ಕೊಳ್ಳುವಿಕೆಯ ಸಂಬಂಧವಿರುತ್ತದೆ. ಈ ಸಂಬಂಧದಲ್ಲಿಯೇ ಭಾಷೆಗಳು ಬೆಳವಣಿಗೆ ಕಾಣುತ್ತವೆ. ತೆಲುಗು, ತಮಿಳು ಮತ್ತಿತರ ಭಾಷೆಗಳನ್ನು ಅನ್ಯಭಾಷೆ ಎಂದು ಗುರುತಿಸುವುದು ತಪ್ಪಾಗುತ್ತದೆ. ಅವು ನಮ್ಮ ನೆರೆಹೊರೆ ರಾಜ್ಯಭಾಷೆಗಳೇ ಹೊರತು ಅವುಗಳಿಗೆ ಅನ್ಯ ಅಥವಾ ಪರಭಾಷೆಯ ಪಟ್ಟ ಕಟ್ಟಿದರೆ ಭಾರತೀಯರಾಗಿ ನಮಗೆ ನಾವೇ ಮಾಡಿಕೊಳ್ಳುವ ಅವಮಾನವಲ್ಲದೆ ಮತ್ತೇನೂ ಅಲ್ಲ. 'ತೆಲುಗು, ತಮಿಳು ಸಿನಿಮಾಗಳನ್ನು ನಾವು ನೋಡುತ್ತೇವೆ. ಹಾಗೆಯೇ ತೆಲುಗರೂ, ತಮಿಳರೂ ನಮ್ಮ ಕನ್ನಡ ಸಿನಿಮಾಗಳನ್ನು ನೋಡಬೇಕು' ಎಂಬುದು ನಮ್ಮ ಕೆಲ ಕನ್ನಡ ಸಂಘಟನೆಗಳ ನಿರೀಕ್ಷೆ. ತಮಿಳಿಗರ ಆರಾಧ್ಯನಟನಾಗಿ ಗುರುತಿಸಿಕೊಂಡು ದೇಶ–ವಿದೇಶಗಳಲ್ಲಿ ತನ್ನ ಖ್ಯಾತಿಯನ್ನು ಉಳಿಸಿಕೊಂಡಿರುವ ಕನ್ನಡಿಗ ರಜನೀಕಾಂತ್, ಕನ್ನಡ ಚಲನಚಿತ್ರರಂಗದಲ್ಲಿ ಅವಕಾಶಗಳನ್ನು ಹುಡುಕಿ ಬಳಲಿ ತೆಲುಗು, ತಮಿಳು ಭಾಷೆಗಳಲ್ಲಿ ಅವಕಾಶ ಪಡೆದು ಅಲ್ಲಿಯವರ ಪ್ರೀತಿಗೆ ಪಾತ್ರರಾದ ಮತ್ತೊಬ್ಬ ಕನ್ನಡಿಗ ಪ್ರಕಾಶ್ ರೈ ಅವರನ್ನು ನೆನಪಿಸಿಕೊಂಡರೆ ಈ ಬಗೆಯ ಸಂಕುಚಿತ ದೃಷ್ಟಿಕೋನಗಳಿಂದ ದೂರವಾಗಬಹುದು. ಒಂದು ಪ್ರಾದೇಶಿಕ ಭಾಷೆಯೊಂದರ ಸಿನಿಮಾ ರಂಗದಲ್ಲಿ ನಡೆದ ಪ್ರಯೋಗ ಮತ್ತೊಂದು ಭಾಷೆಯ ಚಿತ್ರರಂಗದ ಪ್ರತಿಭೆಗಳ ಪ್ರಯೋಗಶೀಲತೆಗೆ ಪ್ರೇರಣೆಯಾಗಬಹುದು.

ಸಿನಿಮಾವೊಂದು ಕಲಾ ಮಾಧ್ಯಮ. ಅದಕ್ಕೆ ಯಾವುದೇ ದೇಶ–ಭಾಷೆಗಳ ಗಡಿಗಳಿರುವುದಿಲ್ಲ. ಅದರ ಮೂಲಕ ಅಸ್ತಿತ್ವ ಕಂಡುಕೊಳ್ಳುವ ಕಲಾವಿದರೂ ಕೂಡಾ ಈ ತೆರನಾದ ಸಂಕುಚಿತ ಗಡಿಗಳನ್ನೂ ಮೀರುವಂಥ ವ್ಯಕ್ತಿತ್ವದವರಾಗಿರುತ್ತಾರೆ., ಸಿನಿಮಾ ವೀಕ್ಷಣೆಯ ಕಾಲಕ್ಕೆ ಅದು ಕಟ್ಟಿಕೊಡುವ ಪ್ರಭಾವ ಮುಖ್ಯವಾಗುತ್ತದೆಯೇ ಹೊರತು ಅದು ಯಾವ ಭಾಷೆಯದ್ದು ಎಂಬುದಲ್ಲ. ಅದನ್ನು ಅರ್ಥಮಾಡಿಕೊಂಡರೆ ಭಾರತ ಜನನಿಯ ತನುಜಾತರಾದ ವಿವಿಧ ಭಾಷಿಕರು ಪರಸ್ಪರ ದ್ವೇಷಿಸುವುದಿಲ್ಲ. ಟಿವಿ 9 ಚಾನೆಲ್‌ನ ವರದಿಗಾರ ಬಸವರಾಜ್ ಹರನಹಳ್ಳಿ ಸಂಶೋಧನಾ ಅಧ್ಯಯನ ಕೈಗೊಂಡು ಬರೆದ ಪ್ರಬಂಧ ತೆಲುಗು ಭಾಷೆಯ ಸಿನಿಮಾಗಳು ಗಡಿ ಭಾಗದಲ್ಲಿ ವಾಸಿಸುವ ಕನ್ನಡಿಗರ ಮೇಲೆ ಬೀರಿದ ಪ್ರಭಾವವನ್ನು ಗುರುತಿಸಿದೆ. ಭಾಷಾಭಿಮಾನ ಅಭಿವ್ಯಕ್ತವಾಗಬೇಕಾದ ಸ್ವರೂಪವನ್ನೂ ಸ್ಪಷ್ಟಪಡಿಸುತ್ತದೆ. ಇಂಥ ಸಂಶೋಧನಾ ಆಧಾರಿತ ಬರಹಗಳನ್ನು ತರಿಸಿಕೊಂಡು ನಮ್ಮ ಕನ್ನಡಪರ ಹೋರಾಟಗಾರರು ಓದಬೇಕು. ಹಾಗಾದರೆ, ಸಂಕುಚಿತ ಸಂಘರ್ಷಗಳು ಪುನರಾವರ್ತಿತವಾಗುವುದಿಲ್ಲ.

**ಸಂವಹನದ ಚಾಲಕಶಕ್ತಿಯಾಗಿ ಭಾಷೆ**

ಓದುತ್ತಾನೆ, ಮಾತನಾಡುತ್ತಾನೆ, ಓದಿದ್ದನ್ನು, ಮಾತನಾಡಿದ್ದನ್ನು ಗ್ರಹಿಸಿಕೊಳ್ಳುತ್ತಾನೆ, ಗ್ರಹಿಸಿಕೊಂಡದನ್ನು ಭಿನ್ನವಾಗಿ ಅಭಿವ್ಯಕ್ತಿಸುತ್ತಾನೆ ಎನ್ನುವ ಕಾರಣಕ್ಕೆ ಮನುಷ್ಯನಿಗೆ ಉಳಿದೆಲ್ಲ ಜೀವಿಗಳಿಗಿಂತ ವಿಶೇಷ ಮನ್ನಣೆ ಇದೆ. ಅಗಾಧ ಓದಿನ ಮೂಲಕ ತನ್ನ ಬೌದ್ಧಿಕ ಅಸ್ಮಿತೆಯನ್ನು ಉಳಿಸಿಕೊಂಡು ನಿರಂತರ ಜ್ಞಾನಾರ್ಜನೆ ಸಾಧ್ಯವಾಗಿಸಿಕೊಳ್ಳುವ ಸಾಮರ್ಥ್ಯವೂ ಆತನನ್ನು ವಿಭಿನ್ನವಾಗಿ ಗುರುತಿಸುವುದಕ್ಕೆ ಕಾರಣವಾಗಿದೆ. ಹೀಗೆ ಮನುಷ್ಯ ಜಗತ್ತಿನೊಳಗೆ ಸಂವಹನ ವೈಶಿಷ್ಟ್ಯತೆಯದ್ದೇ ಯಜಮಾನ್ಯ. ಈ ಸಂವಹನದ ಬಹುದೊಡ್ಡ ಚಾಲಕಶಕ್ತಿಯಾಗಿರುವಂಥದ್ದು 'ಭಾಷೆ'.

**ಒಪ್ಪಿತ ಚೌಕಟ್ಟಿನ ರೂಪಾಂತರದ ಗುಣಲಕ್ಷಣ**

ಭಾಷೆಯದ್ದು ಯಾವತ್ತೂ ಹರಿವ ನೀರಿನ ಗುಣ. ಸ್ಥಗಿತಗೊಳ್ಳುವ 'ನೀರು' ಹೊಂದುವ ಅಪಾಯಕಾರಿ ರೂಪಾಂತರದ ಕುರಿತ ಎಚ್ಚರವಿರುವುದರಿಂದಲೇ ಭಾಷೆಯೊಂದು ಹರಿವ ನೀರಿನ ಗುಣವನ್ನು ಬಿಟ್ಟುಕೊಡುವುದಿಲ್ಲ. ಈ ಕಾರಣಕ್ಕಾಗಿಯೇ ಭಾಷೆ ಕಾಲಮಾನದ ಅಗತ್ಯಗಳಿಗೆ ಅನುಗುಣವಾಗಿ ಒಂದು ಒಪ್ಪಿತ ಚೌಕಟ್ಟಿನಲ್ಲಿ ರೂಪಾಂತರ ಹೊಂದುತ್ತಿರುತ್ತದೆ. ಈ ರೂಪಾಂತರದ ಪ್ರಕ್ರಿಯೆಯಲ್ಲಿ ಬೌದ್ಧಿಕ ವಲಯದ ಪ್ರಬುದ್ಧರು ವಿನೂತನ ಬಗೆಯಲ್ಲಿ ಸಂವಹನ ಸಾಧ್ಯವಾಗಿಸಿಕೊಳ್ಳುವ ಪ್ರಯೋಗಗಳಿಂದ ಗಮನ ಸೆಳೆಯುತ್ತಾರೆ. ಉಳಿದೆಲ್ಲರಿಗಿಂತ ಭಿನ್ನವಾಗಿ ಭಾಷೆಯನ್ನು ದುಡಿಸಿಕೊಳ್ಳುವ ಉಮೇದಿಯಲ್ಲಿ ಅವರು ಸಂವಹಿಸುವ ವಿವರ ( ಅಟುಣಚುಣ ) ಆ ಕ್ಷಣಕ್ಕೆ ಮತ್ತು ಆನಂತರದ ಕಾಲಘಟ್ಟಗಳಲ್ಲಿ ಮುಖ್ಯವೆನಿಸಿ ಚರ್ಚಿಸಲ್ಪಡುತ್ತದೆ.

**ಭಾಷೆಯ ನಿರ್ಣಾಯಕ ಪಾತ್ರ**

ಮಾತು, ಬರಹ, ಓದು ಮತ್ತಿತರ ಸಂವಹನ ಸಂದರ್ಭಗಳಲ್ಲಿ ನಿರ್ಣಾಯಕವಾಗುವುದು ಭಾಷೆ. ಇದನ್ನು ಬದಿಗಿಟ್ಟು ಸಂವಹನವನ್ನು ಕಲ್ಪಿಸಿಕೊಳ್ಳಲಾಗದು. ಸಮೂಹ ಸಂವಹನ ಮಾಧ್ಯಮಗಳಿಗಂತೂ ಭಾಷೆಯೇ ಬಹುಮುಖ್ಯ

ಸಂವಾಹಕ ಶಕ್ತಿ. ಕಟ್ಟಿಕೊಡಲಾಗುವ ವಿವರ ಎಂಥ ಭಾಷೆಯಲ್ಲಿ ಸಂವಹಿಸಲ್ಪಡುತ್ತದೆ ಎಂಬುದು ಮುಖ್ಯವಾಗುತ್ತದೆ. ಭಾಷೆಯೊಂದು ಧ್ವನಿಸುವ ಧ್ವನ್ಯಾರ್ಥಗಳು ಹತ್ತು ಹಲವು ಸಂದೇಶಗಳನ್ನು ರವಾನಿಸುತ್ತವೆ. ನಿರ್ದಿಷ್ಟ ವಿಷಯವೊಂದರ ಕುರಿತು ಸಕಾರಾತ್ಮಕ, ನಕಾರಾತ್ಮಕ ನಿಲುವು ತಳೆಯಲು ಪೂರಕವಾಗುತ್ತವೆ. ಆ ಮೂಲಕ ಆಲೋಚನಾಕ್ರಮದ ದಿಕ್ಕನ್ನೇ ಬದಲಾಯಿಸುವಷ್ಟು ಪ್ರಭಾವೀಯಾಗಿರುತ್ತವೆ. ಸಮೂಹ ಮಾಧ್ಯಮಗಳು ಬಳಸುವ ಭಾಷೆಯ ದೃಷ್ಟಿಯಿಂದ ಈ ಪ್ರಭಾವ ಅತ್ಯಂತ ಪ್ರಬಲವಾದುದು.

**ಮಾಧ್ಯಮದ ಪ್ರಭಾವ ಸಾಧ್ಯತೆಯ ವಿಸ್ತರಣೆಯ ವಾಹಕವಾಗಿ ಭಾಷೆ**

ದಿನಪತ್ರಿಕೆ, ರೇಡಿಯೋ, ಟೆಲಿವಿಷನ್, ಸಿನಿಮಾ – ಹೀಗೆ ಸಮೂಹ ಸಂವಹನದ ಈ ಎಲ್ಲಾ ಮಾಧ್ಯಮಗಳೂ ತಮ್ಮ ಪ್ರಭಾವೀ ನೆಲೆಯನ್ನು ಸ್ಥಾಪಿಸಿಕೊಂಡು ನಿರಂತರತೆಯನ್ನು ಕಾಯ್ದುಕೊಳ್ಳುವುದು ಭಾಷೆಯ ಸಹಯೋಗದಿಂದಲೇ. ಇದಕ್ಕಾಗಿಯೇ ಅವು ಸಂವಹನದ ಪ್ರತಿ ಹಂತಗಳಲ್ಲೂ ಪ್ರಯೋಗಶೀಲತೆಯನ್ನು ಮೆರೆಯುವ ಉತ್ಸಾಹದಲ್ಲಿರುತ್ತವೆ. ಯಾವುದನ್ನು ಗುಣಮಟ್ಟದ ಭಾಷೆಯನ್ನಾಗಿ ಸ್ವೀಕರಿಸಬೇಕು? ಉದ್ದೇಶಿತ ಓದುಗರು, ವೀಕ್ಷಕರು, ಕೇಳುಗರ ದೃಷ್ಟಿಯಲ್ಲಿ ಯಾವುದು ಗುಣಮಟ್ಟದ ಭಾಷೆ? ಗ್ರಂಥಸ್ಥವಾದುದು, ಗಂಭೀರವಾದುದು ಗುಣಮಟ್ಟದ ಭಾಷೆಯೇ? ಜನಸಾಮಾನ್ಯರೂ ಓದಲೂ ಸುಲಭ ಎನ್ನುವಂಥ ಭಾಷೆ ಗುಣಮಟ್ಟದ್ದಾ? ಗ್ರಂಥಸ್ಥ ಮತ್ತು ಜನಸಾಮಾನ್ಯನಿಗೆ ನಿಲುಕುವ, ಗ್ರಹಿಕೆಗೆಟಕುವ ಭಾಷೆ – ಇವೆರಡನ್ನೂ ಮೇಳವಿಸಿಕೊಂಡು ಅಭಿವ್ಯಕ್ತವಾಗುವ ಭಾಷೆ ಗುಣಮಟ್ಟದ್ದಾ? ಈ ಎಲ್ಲಾ ಪ್ರಶ್ನೆಗಳನ್ನು ಕುರಿತು ಮಾಧ್ಯಮ ಸಂವಹನದ ಮುಂಚೆ ಆಲೋಚಿಸಬೇಕಾಗುತ್ತದೆ. ಈ ಆಲೋಚನೆ ಇಲ್ಲದಿದ್ದರೆ ಆ ನಿರ್ದಿಷ್ಟ ಮಾಧ್ಯಮ ಹಲವರನ್ನು ತಲುಪುವ ಮೂಲ ಉದ್ದೇಶವನ್ನು ಈಡೇರಿಸಿಕೊಳ್ಳಲಾಗದು. ಹಲವರನ್ನು ಸೆಳೆಯುವಂಥ ಭಾಷಾ ಪ್ರಯೋಗಶೀಲತೆ ಮೆರೆಯಲೂ ಇಂಥದ್ದೊಂದು ಚಿಂತನೆ ಇರಲೇಬೇಕು.

**ಮಾಧ್ಯಮದ ವಿವಿಧ ಹಂತಗಳಲ್ಲಿ ಭಾಷೆಯ ಪಾತ್ರ**

ದಿನಪತ್ರಿಕೆಗಳ ಕಾರ್ಯನಿರ್ವಾಹಕ ಸಂಪಾದಕರಿಗೆ (ಇಥಿಛಿಣಡಿಾಜ ಇಜಡಿಾಡಿ), ರೇಡಿಯೋ ಸಂಸ್ಥೆಗಳ ಮುಖ್ಯಸ್ಥರಿಗೆ, ಟಿವಿ ವಾಹಿನಿಗಳ ಮುಖ್ಯಸ್ಥರ ದೃಷ್ಟಿಯಲ್ಲಿ ಭಾಷೆಯು ಸಂವಹನ ಕಾರ್ಯತಂತ್ರದ (ಅಡಿಟಿಟಿಾಛಿಚಿಣಾಟಿ ಖಾಡಿಚಿಣಜಿಥಿ) ಬಹುಮುಖ್ಯ ಅಂಶ.

ವರದಿ, ಲೇಖನ, ನುಡಿಚಿತ್ರ, ಸಂಪಾದಕೀಯ, ಟೆಲಿವಿಷನ್ ದೃಶ್ಯಭಾಗ–ಹಿನ್ನೆಲೆ ಧ್ವನಿ, ರೇಡಿಯೋ ಕಾರ್ಯಕ್ರಮ, ಸಿನಿಮಾ ಸಂಭಾಷಣೆ, ಜಾಹಿರಾತುಗಳ ಸಂವಹನ ಏನೆಲ್ಲಾ ಪರಿಣಾಮಗಳನ್ನು ಬೀರಬಲ್ಲದು ಎಂಬುದನ್ನು ನಿರ್ಧರಿಸುವಲ್ಲಿ ಭಾಷೆಯದ್ದೂ ನಿರ್ಣಾಯಕವೆನಿಸುವ ಪಾತ್ರ.

ಅದಕ್ಕಾಗಿಯೇ ಭಾಷೆಯು ಸಂವಹನ ಕಾರ್ಯತಂತ್ರದ ಭಾಗವಾಗಿಯೇ ಮಾಧ್ಯಮದಲ್ಲಿ ದುಡಿಯುವ ಬಂಡವಾಳವಾಗಿ ತನ್ನ ಪಾತ್ರ ನಿರ್ವಹಿಸುತ್ತದೆ. ಹೀಗೆ ದುಡಿಯುವ ಸಾಧ್ಯತೆಯನ್ನು ಗಮನದಲ್ಲಿರಿಸಿಕೊಂಡು ಭಾಷೆಯನ್ನು ಪ್ರಯೋಗಿಸಲಾಗುತ್ತದೆ.

**ಭಾಷಾ ಪ್ರಯೋಗಶೀಲತೆ**

"ಭಾಷೆಯ ಮೇಲೆ ಹಿಡಿತ ಸಾಧಿಸಿಕೊಳ್ಳಿ; ಪದಗಳೊಂದಿಗೆ ಆಟವಾಡುವ ಸಾಮರ್ಥ್ಯ ನಿಮ್ಮದಾಗಿಸಿಕೊಳ್ಳಿ" ಎಂಬ ಸಲಹೆಗಳು ಮಾಧ್ಯಮ ತರಗತಿಗಳಲ್ಲಿ ಕೇಳಿಬರುತ್ತವೆ. ಅಂಥದ್ದೊಂದು ಸಾಮರ್ಥ್ಯ, ಹಿಡಿತ ದಕ್ಕಿಸಿಕೊಳ್ಳುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸುವಾಗ ಆಯಾ ಮಾಧ್ಯಮಗಳ ಕಾರ್ಯತಂತ್ರದ ಭಾಗವಾಗಿಯೇ ಬಳಸಲ್ಪಡುತ್ತಾರೆ. ಈ ನೆಲೆಯಲ್ಲಿಯೇ ವರದಿಗಾರರಿಂದ ಹಿಡಿದು ಸಂಪಾದಕರವರೆಗೆ ಭಾಷಾ ಪ್ರಯೋಗಶೀಲತೆಯನ್ನು ಮೆರೆಯಬೇಕಾಗುತ್ತದೆ.

ಭಾಷಾ ಪ್ರಯೋಗಶೀಲತೆಯ ಕಾರಣದಿಂದಲೇ ಒಬ್ಬ ಬರಹಗಾರ, ವರದಿಗಾರ ಹಲವರ ಮೆಚ್ಚುಗೆಗೆ ಪಾತ್ರವಾಗಬಹುದು. ಆದರೆ, ಆ ಪ್ರಯೋಗಶೀಲತೆ ಜನಸಮೂಹದ ಆಲೋಚನಾ ಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ವೃದ್ಧಿಸುತ್ತದೋ ಅಥವಾ ಆ ಜನಸಮೂಹವನ್ನು ದಿಕ್ಕು ತಪ್ಪಿಸುತ್ತದೋ? ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

**ಭಾಷಾ ಸೂಕ್ಷ್ಮತೆ**

ಇರಾಕ್ ವಿರುದ್ಧ ಅಮೆರಿಕಾ ಸಾರಿದ ಯುದ್ಧ ಸಂದರ್ಭದಲ್ಲಿ ಜಾಗತಿಕ ಮಾಧ್ಯಮಗಳು ಬಳಸಿದ 'ಯುದ್ಧಭಾಷೆ'ಯನ್ನು ನಾವು ಪ್ರಯೋಗಶೀಲತೆ ಎನ್ನಲು ಸಾಧ್ಯವೇ? ಖ್ಯಾತ ಪತ್ರಕರ್ತ ಪಿ.ಸಾಯಿನಾಥ ಅವರು ಆ ಸಂದರ್ಭದ ಪ್ರಯೋ(ರೋ)ಶೀಲ! ಊನವನ್ನು ಗುರುತಿಸಿ ಬರೆದ ಬರಹವೊಂದರಲ್ಲಿ ವಿವಿಧ ಪದಗಳನ್ನು (ಯುದ್ಧ ಸಮರ್ಥನೆ, ಮನುಷ್ಯ ಸಾವು ಧ್ವನಿಸುವಂಥವು) ಪ್ರಸ್ತಾಪಿಸಿದ್ದಾರೆ. [illegible] ಇತ್ಯಾದಿ. ಯುದ್ಧ, ಅದರಿಂದಾದ ಮನುಷ್ಯಹಾನಿ, ತದನಂತರದ ವಿದ್ಯಮಾನಗಳೆಲ್ಲವನ್ನೂ ವರದಿ ಮಾಡುವಾಗ ಬಳಸಿದ ಪದಗಳು, ಒದಗಿಸಿದ ಮಾಹಿತಿಯೆಲ್ಲವೂ ಯುದ್ಧವನ್ನು ಸಮರ್ಥಿಸುವ ರೀತಿಯಲ್ಲಿತ್ತು ಎಂಬುದನ್ನು ಸಾಯಿನಾಥ್ ಚೆನ್ನಾಗಿಯೇ ಪಟ್ಟಿ ಮಾಡಿದ್ದಾರೆ.

**ಭಾಷಾ ಪ್ರೌಢಿಮೆ– ಮಾಧ್ಯಮ ಕಾರ್ಯತಂತ್ರ**

ಭಾಷೆಯನ್ನು ಹಿಡಿತಕ್ಕೆ ತಂದುಕೊಳ್ಳುವ, ಪದಗಳೊಂದಿಗೆ ಆಟವಾಡುವ ಸಾಮರ್ಥ್ಯವುಳ್ಳ ಪ್ರತಿಭೆಗಳೆಲ್ಲಾ ಸುದ್ದಿಮನೆಯಲ್ಲಿ ಲೀನವಾದಾಗ ಅವರ ಬೌದ್ಧಿಕ ವಿವೇಚನೆಗಿಂತ ಭಾಷಾ ಪ್ರೌಢಿಮೆಯನ್ನೇ ಮಾಧ್ಯಮವೊಂದರ ಕಾರ್ಯತಂತ್ರ ನೆಚ್ಚಿಕೊಳ್ಳುತ್ತದೆ. ಅದನ್ನು ಸಮರ್ಥವಾಗಿ ಬಳಸಿಕೊಳ್ಳುತ್ತದೆ. ಹಿಂದೂಗಳ ವಿರುದ್ಧ ಮುಸ್ಲಿಂರನ್ನು, ಮುಸ್ಲಿಂರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟುವ ಪ್ರಚೋದನೆ ನೀಡುವಂಥ (ಮೇಲ್ನೋಟದಲ್ಲಿ ಅವು ಸರ್ವಹಿತ ನಿರೀಕ್ಷಿಸುವ ಬರಹ

ಎಂದಿನಿಸುತ್ತವೆ) ಆಕರ್ಷಣೀಯ ಬರಹ, ವರದಿ ರೂಪುಗೊಳ್ಳುವುದು ಆ ಕಾರ್ಯತಂತ್ರದ ಫಲಶ್ರುತಿಯಾಗಿಯೇ. ಆಡಳಿತಾರೂಢ ಪಕ್ಷ ಈ ಚುನಾವಣೆಯಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕು ಎಂದು ಅಪೇಕ್ಷಿಸುವ ಮಾಧ್ಯಮ ಸಂಸ್ಥೆಯೊಂದರ ಉದ್ದೇಶವು ವರದಿ, ಬರಹಗಳ ಭಾಷೆಯ ಧ್ವನಿಗಳಲ್ಲಿಯೇ ಸ್ಪಷ್ಟವಾಗುತ್ತವೆ. ಭಾರತ ಪ್ರಕಾಶಿಸುತ್ತಿದೆ, ಖಟಿಜಚಿ ಖಿಟಿಟಿಧಿ ಘೋಷವಾಕ್ಯಗಳ ಬಿಂಬಿಸುವಿಕೆಯಲ್ಲಿ ಇಂಥದ್ದರ ಸುಳಿವನ್ನು ಗುರುತಿಸಬಹುದು.

**ಪ್ರಸ್ತುತಕ್ಕೆ ಕನ್ನಡಿ ಹಿಡಿಯಲು ಪೂರಕವಾಗುವ ಪರಿಕರ – ಮಿತಿಗಳು**

ಸಾರ್ವಜನಿಕರು, ಜನನಾಯಕರು, ಅಧಿಕಾರಿಗಳು, ನಿರ್ಲಕ್ಷಿತರು, ಅವಮಾನಿತರು, ಕ್ರೂರಿಗಳು, ಶೋಷಕರು – ಹೀಗೆ ಸಮಾಜದ ತರಹೇವಾರಿ ವ್ಯಕ್ತಿತ್ವಗಳನ್ನು ಬಿಂಬಿಸುವ ಕಾಲಕ್ಕೆ ಮಾಧ್ಯಮ ಬಳಸುವ ಭಾಷೆ ಮತ್ತು ಅದು ಧ್ವನಿಸುವ ಅರ್ಥಧ್ವನಿ ಎಂಥದ್ದು ಎಂಬುದೂ ಬಹುಮುಖ್ಯವೆನಿಸುತ್ತದೆ.

ಮಾಜಿ ಪ್ರಧಾನಿ ದೇವೇಗೌಡ 'ದೇವೂ' ಆಗಿ, ಮುಖ್ಯಮಂತ್ರಿ ಯಡಿಯೂರಪ್ಪ 'ಯಡ್ಡಿ' ಆಗಿ, ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ 'ಬಂ' ಆಗಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಡಿಕೆಶಿ ಆಗಿ, ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ 'ಸಿದ್ದು' ಆಗಿ ಮಾಧ್ಯಮಗಳಲ್ಲಿ ಬಿಂಬಿತವಾದಾಗ ಅವುಗಳನ್ನು ಗಮನಿಸುವವರ ಮೇಲೆ ಎಂಥ ಪರಿಣಾಮಗಳಾಗುತ್ತವೆ? ಎಂಬುದನ್ನು ಆಲೋಚಿಸಬೇಕು.

'ಗ್ರಾಂಥಿಕ ಭಾಷೆಯನ್ನು ಬಳಸಬೇಡಿ. ಸಾಧ್ಯವಾದಷ್ಟು ಮಟ್ಟಿಗೆ ಆಡುಮಾತನ್ನೇ ಬಳಸಿ ಮಾಹಿತಿ ನೀಡಿ' ಎಂದು ವರದಿಗಾರರಿಗೆ ನೀಡಿದ ಸೂಚನೆಯ ಪರಿಣಾಮಗಳು ಕನ್ನಡದ ಸುದ್ದಿವಾಹಿನಿಯೊಂದರ ಮುಖ್ಯಸ್ಥರು ಮತ್ತು ಅದನ್ನು ವೀಕ್ಷಿಸುವ ಸಮಸ್ತ ವೀಕ್ಷಕರ ಗಮನಕ್ಕೆ ಬರುತ್ತಲೇ ಇವೆ. ಮಾಹಿತಿ ಕೊಡುವ ವರದಿಗಾರರು ಕೊಟ್ಟ ಮಾಹಿತಿಯನ್ನೇ ಮತ್ತೆ ಮತ್ತೆ ಪ್ರಸ್ತಾಪ ಮಾಡಿ ಅವಧಿಯನ್ನು ಜಗ್ಗುವ ಸರ್ಕಸ್ ಮಾಡುವ ಕಾಲಕ್ಕೆ ನಮ್ಮ ಕರ್ಣಗಳವರೆಗೆ ತಲುಪುವ ಭಾಷೆ ಕಳಪೆಯಾದ ಉದಾಹರಣೆಗಳಿವೆ.

**ನೈಜತೆಯ ಪ್ರತಿಬಿಂಬ ಮತ್ತು ಜೀವಪರ ಕಾಳಜಿಗೆ ಪೂರಕ**

ರೈತ ಆತ್ಮಹತ್ಯೆ ಮಾಡಿಕೊಂಡಾಗ ಆತನನ್ನೇ ಆಧರಿಸಿದ ಕುಟುಂಬದ ತೊಳಲಾಟಗಳನ್ನು ಆ ತೀವ್ರತೆಯಲ್ಲೇ ಪ್ರಸ್ತುತಪಡಿಸುವಿಕೆ, ನಿರ್ಲಕ್ಷ್ಯದ ಮಡುವಿನಲ್ಲಿ ನಲುಗಿದವರು ಶಾಶ್ವತವಾಗಿ ನೋವುಗಳೊಂದಿಗೇ ಬದುಕುತ್ತಿರುವುದನ್ನು ಆ ನೈಜತೆಯೊಂದಿಗೇ ಬಿಂಬಿಸುವಿಕೆ, ಸೌಜನ್ಯದ ಮುಖವಾಡ ಹೊದ್ದು ಜನಸಾಮಾನ್ಯರ ನೆಮ್ಮದಿಯನ್ನು ಹಾಳುಗೆಡಹುವ ಅಧಿಕಾರಿಗಳ ಆರ್ಭಟಕ್ಕೆ ಕನ್ನಡಿ ಹಿಡಿಯುವಿಕೆ, ಹೆಜ್ಜೆಹೆಜ್ಜೆಗೂ ಅವಮಾನದ ಬೇಗೆಯಲ್ಲೇ ಬದುಕು ದೂಡುವ ಅನಿವಾರ್ಯತೆಯಲ್ಲಿರುವವರ ಸಂಕಷ್ಟಗಳನ್ನು ಅನಾವರಣಗೊಳಿಸುವಿಕೆ – ಈ ಎಲ್ಲ ಸಂದರ್ಭಗಳಲ್ಲೂ ಭಾಷೆಯೇ ಪ್ರಮುಖ ಪಾತ್ರವಹಿಸುತ್ತದೆ.

ಆದರೆ, ಇಂಥ ಸಂದರ್ಭದಲ್ಲೆಲ್ಲಾ ಜೀವಪರ ಭಾಷೆಯನ್ನು ಬಳಸದ ನಮ್ಮ ಮಾಧ್ಯಮಗಳು ಕೆಲಸಕ್ಕೆ ಬಾರದ ಸಂಗತಿಗಳನ್ನು, ನಿತ್ಯದ ಆಗು–ಹೋಗುಗಳನ್ನು ದಾಖಲಿಸುವಾಗ ಅನಾವಶ್ಯಕ ಪದಪ್ರಯೋಗ ಮಾಡುವ ಅತ್ಯುತ್ಸಾಹವನ್ನು ತೋರುತ್ತವೆ. ಯಾರ್ಯಾರದೋ ಹಂಗುಗಗಳಿಗೊಳಗಾಗಿ ಭಯಾನಕತೆಯನ್ನು ಬಿಂಬಿಸುವಾಗಲೂ ವಿಚಿತ್ರ ಪದಗಳನ್ನು ಬಳಸುತ್ತವೆ.

ತಮ್ಮನ್ನು, ತಮ್ಮ ಸಂಸ್ಥೆಯನ್ನು, ಆ ಮೂಲಕ ವೃತ್ತಿಘನತೆಯನ್ನು ಮಾರಿಕೊಂಡು ಆ ನೆಲದ ಭಾಷೆಯನ್ನು ಮತ್ತು ಅದರ ಸತ್ವವನ್ನು ಹದಗೆಡಿಸುವಂಥ ಕೆಡಕುಕೊಡುಗೆಗಳನ್ನು ನೀಡುತ್ತವೆ. ಪದಗಳೊಂದಿಗೆ ಆಟವಾಡುತ್ತಾ ಜನರ ಭಾವಲೋಕವನ್ನು ಕಲುಕುತ್ತವೆ. ಇದೆಲ್ಲಾ ಗಮನಿಸಿದರೆ ಪ್ರತಿಯೊಂದು ಮಾಧ್ಯಮ ಮತ್ತು ಅದರ ಮೂಲಕ ಗುರುತಿಸಿಕೊಂಡ ಬರಹಗಾರ ಭಾಷಾ ಸಂಹಿತೆಯನ್ನು ವಿಧಿಸಿಕೊಳ್ಳುವ ಅನಿವಾರ್ಯತೆ ಮನದಟ್ಟಾಗುತ್ತದೆ.

**ಮಾಧ್ಯಮಗಳ ಕನ್ನಡಪರ ಕಾಳಜಿ**

ಮಾಧ್ಯಮಗಳ ಕನ್ನಡಪರ ಕಾಳಜಿಯನ್ನು ವಿವಿಧ ನೆಲೆಗಳಲ್ಲಿ ಗುರುತಿಸಬಹುದು. 'ಈ' ಕನ್ನಡ ಟಿವಿ ವಾಹಿನಿಯ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದ ಸಂಚಿಕೆಯೊಂದನ್ನು ಇಲ್ಲಿ ಉದಾಹರಣೆಯಾಗಿ ಪ್ರಸ್ತಾಪಿಸಬಹುದು. ಹೊಸಪೇಟೆಯ ಬಾಲಕಿ 'ಎಲೆ ಕೆಂಚು ತಾರೆ' ಜಾನಪದ ಗೀತೆಯನ್ನು ಪ್ರಸ್ತುತಪಡಿಸಿದ್ದಳು. ನಂತರ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಆ ಪ್ರತಿಭೆಯ ಹಾಡಿನ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಜನಪದೀಯ ಸೊಗಡನ್ನು ಮಧುರದನಿಯ ಮೂಲಕ ಕಟ್ಟಿಕೊಟ್ಟಿದ್ದನ್ನು ಪ್ರಶಂಸಿಸಿ ಮಾತನಾಡಿದ ಸಾಹಿತಿ ಜಯಂತ್ ಕಾಯ್ಕಿಣಿ ಆ ಪ್ರತಿಭಾನ್ವಿತೆಗೆ ಮಹತ್ವದ ಸಲಹೆಗಳನ್ನು ನೀಡಿದರು. ಆ ಬಾಲಕಿ 'ಎಲೆ ಕೆಂಚು ತಾರೆ' ಹಾಡುವಾಗಿನ ಪದಗಳ ಉಚ್ಚಾರದಲ್ಲಾದ ದೋಷವನ್ನು ಗುರುತಿಸಿದ್ದರು. ಆಡುಮಾತು ಮತ್ತು ಶಿಷ್ಟ ಭಾಷೆಯ ಪದಗಳ ನಡುವಿನ ವ್ಯತ್ಯಾಸಗಳನ್ನು ಕುರಿತು ತಿಳಿಹೇಳಿದರು. ಆಡುಮಾತಿನ ಸೊಗಡನ್ನು ತಿಳಿದುಕೊಳ್ಳುವುದರ ಜೊತೆಗೆ ಶಿಷ್ಟಭಾಷೆಯ ಪದಗಳ ಸಂಪೂರ್ಣ ಜ್ಞಾನ ಎಷ್ಟು ಮುಖ್ಯ ಎಂಬುದನ್ನೂ ಸ್ಪಷ್ಟಪಡಿಸಿದರು. ಅಂಥ ಜ್ಞಾನ ಗಳಿಸಿಕೊಳ್ಳಲು ಕನ್ನಡದ ಪುಸ್ತಕಗಳನ್ನು, ಕನ್ನಡದ ದಿನಪತ್ರಿಕೆಗಳನ್ನು ಓದಬೇಕು ಎಂದು ಕಿವಿಮಾತು ಹೇಳಿದರು. ಕಾನ್ವೆಂಟ್ ಸ್ಕೂಲ್ ಕಲ್ಚರ್‌ನ ದಟ್ಟಪ್ರಭಾವದಲ್ಲಿ ಕನ್ನಡದ ಪದಗಳ ಜ್ಞಾನದಿಂದ ಮಕ್ಕಳು ದೂರಾಗುತ್ತಿರುವುದನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸುವುದರ ಮುಖಾಂತರ ಕನ್ನಡ ಪುಸ್ತಕ, ಕನ್ನಡ ದಿನಪತ್ರಿಕೆಗಳನ್ನು ಮಕ್ಕಳು ಓದಿಕೊಳ್ಳಬೇಕಾದ ಅನಿವಾರ್ಯತೆಯನ್ನು ಮನಗಾಣಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯು ಮೂರು ವರ್ಷಗಳ ಹಿಂದೆ ಪ್ರಾಥಮಿಕ ಶಾಲೆಯ ಮಕ್ಕಳ ಸಕಾರಾತ್ಮಕ ಬೆಳವಣಿಗೆಯ ಉದ್ದೇಶದೊಂದಿಗೆ 20 ಅಂಶಗಳ ಕಾರ್ಯಯೋಜನೆಯನ್ನು ಘೋಷಿಸಿ ಅದರ ಅನುಷ್ಠಾನಕ್ಕೆ ಸೂಚಿಸಿತ್ತು. ಬಂಧುಗಳಿಗೆ ಪತ್ರ, ಗಾಂಧಿ ಚರಿತ್ರೆ ಅರಿಯೋಣ, ನಾನು ಶಿಕ್ಷಕನಾದರೆ, ಯೋಧರ ಚರಿತ್ರೆ ಸೇರಿದಂತೆ 20 ಅಂಶಗಳ ಈ ಕಾರ್ಯಯೋಜನೆ ಮಕ್ಕಳ ಸಂವಹನ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಎಂದೇ ಶೈಕ್ಷಣಿಕ ವಲಯದಲ್ಲಿ ಗುರುತಿಸಲ್ಪಟ್ಟಿದೆ. 'ತೆಗೆ ಪುಸ್ತಕ' ಮತ್ತು 'ಓದೋಣ ಸುದ್ದಿ' ಇವು ಈ ಕಾರ್ಯಯೋಜನೆಯ ಬಹುಮುಖ್ಯ ಮತ್ತು ಪರಿಣಾಮಕಾರೀ ಕಾರ್ಯಕ್ರಮಗಳು. 'ತೆಗೆ ಪುಸ್ತಕ' ಕಾರ್ಯಕ್ರಮವು ಪ್ರಾಥಮಿಕ ಶಾಲಾ ಮಕ್ಕಳಲ್ಲಿ ಪುಸ್ತಕ ಓದುವ

ಅಭಿರುಚಿ ಬೆಳೆಸಲು ಪೂರಕವಾಗುತ್ತದೆ. ಶಿಕ್ಷಕರು ಪ್ರತ್ಯೇಕ ಶಾಲಾ ಗ್ರಂಥಾಲಯದ ಮೂಲಕ ಪುಸ್ತಕಗಳನ್ನು ಮಕ್ಕಳಿಗೆ ಒದಗಿಸಬೇಕು. ಇದಕ್ಕಾಗಿ ಪುಸ್ತಕಗಳ ವಿತರಣೆ ಮತ್ತು ಹಿಂದುರಿಗಿಸಿದ ವಿವರಗಳಿರುವ ವಿವರಣಾ ಪುಸ್ತಕವಿರಬೇಕು. ಆ ಮೂಲಕ ಪ್ರಾಥಮಿಕ ಶಾಲಾವಿದ್ಯಾರ್ಥಿಯ ಪುಸ್ತಕದ ಅಧ್ಯಯನದ ವಿವಿಧ ಹಂತಗಳನ್ನು ಗಮನಿಸಬೇಕು. 'ಓದೋಣ ಸುದ್ದಿ' ಕಾರ್ಯಕ್ರಮದ ಪ್ರಕಾರ ಪ್ರತಿದಿನ ಬೆಳಿಗ್ಗೆ ಪ್ರಾರ್ಥನೆಯ ಅವಧಿಯಲ್ಲಿ ವಿದ್ಯಾರ್ಥಿಗಳಿಂದಲೇ ಸುದ್ದಿಯನ್ನು ಓದಿಸಬೇಕು. ಒಬ್ಬ ವಿದ್ಯಾರ್ಥಿ ದಿನಪತ್ರಿಕೆಯ ಮುಖ್ಯಾಂಶಗಳನ್ನು ಓದಿದರೆ, ಮತ್ತೊಬ್ಬ ವಿದ್ಯಾರ್ಥಿ ಸುದ್ದಿಯ ವಿವರಗಳನ್ನು ಸವಿಸ್ತಾರವಾಗಿ ಓದಬೇಕು.

ಸರ್ಕಾರೀ ಕಿರಿಯ ಪ್ರಾಥಮಿಕ ಶಾಲೆ(1ರಿಂದ 5ನೇ ತರಗತಿ)ಗಳಿಗಿಂತ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ (1ರಿಂದ 7ನೇ ತರಗತಿ) ವಿದ್ಯಾರ್ಥಿಗಳಿಗೆ ಈ ಕಾರ್ಯಯೋಜನೆ ಅತ್ಯಂತ ಉಪಯುಕ್ತವೆನಿಸುತ್ತದೆ. ಈ ಹಂತದಲ್ಲಿ ಭಾಷೆಯ ಬಳಕೆಯ ವಿವಿಧ ಸಾಧ್ಯತೆಗಳ ಕುರಿತ ಪ್ರಾಥಮಿಕ ಮಾಹಿತಿ ಸಿಕ್ಕಂತಾಗುತ್ತದೆ. ಓದೋಣ ಸುದ್ದಿ ಮತ್ತು ತೆಗೆ ಪುಸ್ತಕ ಕಾರ್ಯಯೋಜನೆ ಪೌಢಶಾಲೆಯ ಹಂತದಲ್ಲಿ ಅನುಷ್ಠಾನಗೊಳ್ಳಬೇಕು. ದಿನಪತ್ರಿಕೆಗಳ ಸುದ್ದಿವಿವರಗಳು, ಸಂಪಾದಕೀಯ ಬರಹಗಳು, ಲೇಖನಗಳ ಕುರಿತು ವಿದ್ಯಾರ್ಥಿಗಳ ಮಧ್ಯೆ ಚರ್ಚೆ ಏರ್ಪಾಡಾಗಬೇಕು. ಆದರೆ, ಈ ಕಾರ್ಯಯೋಜನೆ ಕೇವಲ ಪ್ರಾಥಮಿಕ ಶಿಕ್ಷಣ ಹಂತಕ್ಕಷ್ಟೇ ಸೀಮಿತವಾಗಿದೆ. ಇದು ಪ್ರೌಢಶಾಲಾ ಹಂತಕ್ಕೂ ಇದು ವಿಸ್ತೃತವಾಗಬೇಕು. ಆಗದಿದ್ದರೆ, ವಿದ್ಯಾರ್ಥಿಗಳು ಸ್ನಾತಕೋತ್ತರ ಹಂತ ತಲುಪುವವರೆಗೆ ತಪ್ಪುಗಳಿಂದ ಕೂಡಿದ ವಾಕ್ಯರಚನೆಯನ್ನೇ ನೆಚ್ಚಿಕೊಂಡಿರುತ್ತಾರೆ. ತಾವು ಬರೆದದ್ದೇ ಸರಿ ಎಂದುಕೊಳ್ಳುತ್ತಾರೆ. ಪಿಯುಸಿ, ಪದವಿ ಹಂತದಲ್ಲಿ ನಾಮ್‌ಕೆವಾಸ್ತೆ ಎಂಬಂತೆ ಪರೀಕ್ಷೆ ಬರೆಯುತ್ತಾರೆ. ತಪ್ಪು ವಾಕ್ಯಗಳು, ತಪ್ಪು ಪದಬಳಕೆ, ಒಂದಕ್ಕೊಂದು ಸಂಬಂಧವಿಲ್ಲದಂತೆ ಚಿತ್ರವಿಚಿತ್ರ ಬರಹ ಮತ್ತಿತರ ದೋಷಗಳೊಂದಿಗೇ ಉತ್ತರ ಬರೆಯುತ್ತಾರೆ. ಮೌಲ್ಯಮಾಪನವೂ ಒಂದು ಸಾಮಾನ್ಯ ಪ್ರಕ್ರಿಯೆಯಾಗಿ ಪೂರ್ಣಗೊಳ್ಳುತ್ತದೆ. ಮೌಲ್ಯಮಾಪಕರು ಮೌಲ್ಯಮಾಪನದ ಕೆಲಸ ಮುಗಿಸಿ ಬಹುಬೇಗ ಮನೆಗೆ ಹಿಂದಿರುಗುವ ಧಾವಂತದಲ್ಲಿ ವಿದ್ಯಾರ್ಥಿಗಳ ತಪ್ಪುಗಳನ್ನು ನೋಡಿಯೂ ನೋಡದಂತೆ ಪಾಸಿಂಗ್ ಅಂಕಗಳನ್ನು ನೀಡುತ್ತಾರೆ. ಹೇಗೆ ಬರೆದರೂ ಪಾಸಾಗುತ್ತೇವೆ ಎಂಬ ಸತ್ಯಸಾಕ್ಷಾತ್ಕಾರ ಭಾವದಲ್ಲಿ ದೋಷಗಳೇ ತಮ್ಮ ಗುಣಗಳು ಎಂದುಕೊಂಡು ಓದುವ ಅಭಿರುಚಿಗೇ ಗುಡ್‌ಬೈ ಹೇಳುತ್ತಾರೆ. ಸ್ನಾತಕೋತ್ತರ ಹಂತದಲ್ಲಿ ಓದುತ್ತಿರುವ ಇವತ್ತಿನ ಬಹುತೇಕ ವಿದ್ಯಾರ್ಥಿಗಳ ಬರಹದ ಊನಗಳನ್ನು ಗಮನಿಸಿದರೆ ಅವರ ಹಿಂದಿನ ಹಂತಗಳ ಶಿಕ್ಷಣ ಕ್ರಮ ಮತ್ತು ಮೌಲ್ಯಮಾಪನ ಎಂಥಹುದಿತ್ತು ಎಂಬುದನ್ನು ಕಲ್ಪಿಸಿಕೊಳ್ಳಬಹುದು.

**ದಿನಪತ್ರಿಕೆಗಳ ಓದು ಮತ್ತು ಭಾಷಾ ಪ್ರಭುತ್ವ**

ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳು ಪ್ರತಿದಿನವೂ ಕನ್ನಡ ದಿನಪತ್ರಿಕೆಗಳನ್ನು ಓದುತ್ತಿದ್ದರೆ ಅವರು ಭಾಷಾಜ್ಞಾನ ಗಳಿಸಿಕೊಳ್ಳಲು ಅನುಕೂಲವಾಗುತ್ತದೆ. ಪಠ್ಯಪುಸ್ತಕ ಮಾತ್ರವಲ್ಲದೇ ಜ್ಞಾನಕ್ಕೆ ಪೂರಕವಾಗುವ ಇತರೆ ಪುಸ್ತಕಗಳನ್ನು ಓದುವ ಅಭಿರುಚಿ ಅವರ ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ನಿಟ್ಟಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಪಾತ್ರ ಗಮನಾರ್ಹವಾದುದು. ದುರಂತವೆಂದರೆ, ಶಿಕ್ಷಕರೇ ದಿನಪತ್ರಿಕೆಗಳನ್ನು, ಪುಸ್ತಕಗಳನ್ನು ಓದುವುದಕ್ಕೆ ಮನಸ್ಸು ಮಾಡುವುದಿಲ್ಲ. ಇಂಥವರು ಶಾಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಓದುವ ಅಭಿರುಚಿಯನ್ನು ಬೆಳೆಸುತ್ತಾರೆ

ಎಂದು ನಿರೀಕ್ಷಿಸುವುದಕ್ಕಾಗದು. ಇಂಥವರು ಶಾಲೆಗಳಲ್ಲಿದ್ದರೆ ದಿನಪತ್ರಿಕೆಗಳನ್ನು ಓದಿಸಿದ ಮಾತ್ರಕ್ಕೆ, ಪುಸ್ತಕಗಳನ್ನು ಓದಿಸಿದ ಮಾತ್ರಕ್ಕೆ ಭಾರೀ ಕ್ರಾಂತಿ ಆಗಿಬಿಡುತ್ತಾ ಎಂಬ ಉಡಾಫೆಯ ಮಾತುಗಳನ್ನಾಡಿ ಕಾಲವ್ಯಯ ಮಾಡುತ್ತಾರೆಯೇ ಹೊರತು ಶಿಕ್ಷಕರಾಗಿ ಇರಬೇಕಾದ ಬದ್ಧತೆಯ ಅರಿವು ಅವರಲ್ಲಿ ಇರುವುದೇ ಇಲ್ಲ. ಶಿಕ್ಷಕರು ಶಾಲೆಯಲ್ಲಿ ಪತ್ರಿಕೆ, ಓದುವ ಅಭಿರುಚಿ ಬೆಳೆಸಿದರೆ ಆ ಅಭಿರುಚಿಗೆ ಅನುಗುಣವಾಗಿ ಮನೆಯಲ್ಲಿ ಸ್ಫೂರ್ತಿದಾಯಕ ವಾತಾವರಣವನ್ನು ಕೊಡಮಾಡುವ ಹೊಣೆಗಾರಿಕೆಯನ್ನು ಪೋಷಕರು ನಿಭಾಯಿಸಬೇಕು. ಹಳ್ಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಪೋಷಕರು ಮಕ್ಕಳ ಬೌದ್ಧಿಕ ಬೆಳವಣಿಗೆಗಾಗಿ ದಿನಪತ್ರಿಕೆ ಮತ್ತು ಪುಸ್ತಕಗಳನ್ನು ಪೂರಕವಾಗಿ ಬಳಸಿಕೊಳ್ಳಬೇಕು. ಇಲ್ಲದಿದ್ದರೆ ನಗರ ವಿದ್ಯಾರ್ಥಿಗಳ ಮುಂದೆ ನಮ್ಮ ವಿದ್ಯಾರ್ಥಿಗಳು ಏನೇನೂ ಅಲ್ಲ ಎಂಬ ಕೊರಗಿನೊಂದಿಗೆ ಕಾಲ ದೂಡಬೇಕಾಗುತ್ತದೆ.

**ವಿಳಾಸ :**
ಎನ್.ಕೆ.ಪದ್ಮನಾಭ
ಅತಿಥಿ ಉಪನ್ಯಾಸಕರು
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ
ಮೊಬೈಲ್ : 9972998300